ಸೋಮವಾರ, ಮೇ 6, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಿಸಿಲ ಬೇಗೆ
ಕೋಲ್ಕತ್ತದಲ್ಲಿ ಭಾನುವಾರ ಬಿರು ಬಿಸಿಲಿನಲ್ಲಿ ಮಹಿಳೆಯೊಬ್ಬರು ಕೊಡೆ ಹಿಡಿದು ಸಾಗಿದರು



ಉತ್ತರ ಪ್ರದೇಶ: ಹತ್ತು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಪದೇ ಪದೇ ಬದಲಾವಣೆ ಮಾಡಿದ ಸಮಾಜವಾದಿ ಪಕ್ಷ

ಅವರನ್ನು ಬಿಟ್ಟು ಇವರು: ಎಸ್‌ಪಿ 'ಸೂತ್ರ'

• ಮಂಜುನಾಥ ಹೆಬ್ಬಾರ್

ಸಮಾಜವಾದಿ ಪಕ್ಷವು ಬೇರೆ ಪಕ್ಷಗಳಿಂದ ವಲಸೆ ಬಂದ ಸುಮಾರು 15 ನಾಯಕರಿಗೆ ಈ ಬಾರಿ ಟಿಕೆಟ್ ಕೊಟ್ಟಿದೆ. ಜಾತಿ ಸಮೀಕರಣದ ಆಧಾರದಲ್ಲಿ ಟಿಕೆಟ್ ಹಂಚಿಕೆ ಮಾಡಲಾಗಿದೆ ಎಂಬುದು ಎಸ್‌ಪಿ ನಾಯಕರ ನುಡಿ

ನವದೆಹಲಿ: ಉತ್ತರ ಪ್ರದೇಶದ ಬದೌನ್ ಲೋಕಸಭಾ ಕ್ಷೇತ್ರದಲ್ಲಿ ಸಮಾಜವಾದಿ ಪಕ್ಷವು ಮೊದಲಿಗೆ ಮಾಜಿ ಸಂಸದ ಹಾಗೂ ಅಖಿಲೇಶ್ ಯಾದವ್ ಅವರ ಸೋದರ ಸಂಬಂಧಿ ಧರ್ಮೇಂದ್ರ ಯಾದವ್ ಅವರನ್ನು ಕಣಕ್ಕಿಳಿಸಿತು. ಕೆಲವು ದಿನಗಳ ನಂತರ ಪಕ್ಷದ ಹಿರಿಯ ನಾಯಕ ಶಿವಪಾಲ್ ಯಾದವ್ ಸ್ಪರ್ಧಿಸಲಿದೆ ಎಂದು ಪಕ್ಷ ಪ್ರಕಟಿಸಿತು. ಶಿವಪಾಲ್ ಪುತ್ರ ಆದಿತ್ಯ ಯಾದವ್ ಹುರಿಯಾಳುವಾಗಲಿದ್ದಾರೆ ಎಂದು ಏಪ್ರಿಲ್ 14ರಂದು ಘೋಷಿಸಿತು.

ಉತ್ತರ ಪ್ರದೇಶದ 62 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿರುವ ಸಮಾಜವಾದಿ ಪಕ್ಷವು ಅಭ್ಯರ್ಥಿ ಬದಲಾವಣೆ ಮಾಡಿದ್ದು ಇದೊಂದೇ ಕ್ಷೇತ್ರದಲ್ಲಿ ಅಲ್ಲ. ಬರೋಬ್ಬರಿ 10 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಪದೇ ಪದೇ ಬದಲಾವಣೆ ಮಾಡಿದೆ. ಮಿಶ್ರಿಖ್ ಕ್ಷೇತ್ರದಲ್ಲಂತೂ ಐದು ಸಲ ಅಭ್ಯರ್ಥಿಯ ಬದಲಿಸಿದೆ. ಮೊದಲು ಮಾಜಿ ಸಂಸದ ರಾಮಶಂಕರ ಭಾರ್ಗವ್ ಅವರಿಗೆ ಟಿಕೆಟ್ ಕೊಟ್ಟಿತು. ಬಳಿಕ ಶಾಸಕ ರಾಮ್‌ಪಾಲ್ ಭಾರ್ಗವ ಅವರ ಹೆಸರನ್ನು ಅಖೈರುಗೊಳಿಸಿತು. ನಂತರ ಅವರ ಮಗ ಹಾಗೂ ಸೊಸೆಯ ಸರದಿ. ಕೊನೆಗೆ ಭಾರ್ಗವ ಅವರನ್ನೇ ಕಣಕ್ಕಿಳಿಸಿತು.

ಕಳೆದ ಎರಡು ವರ್ಷಗಳಲ್ಲಿ ಬಹುಜನ ಸಮಾಜ ಪಕ್ಷದ ಹಲವು ನಾಯಕರು ಸಮಾಜವಾದಿ ಪಕ್ಷಕ್ಕೆ ಪಕ್ಷಾಂತರ ಮಾಡಿದ್ದಾರೆ. ವಲಸೆ ಬಂದ ಸುಮಾರು 15 ನಾಯಕರಿಗೆ ಈ ಚುನಾವಣೆಯಲ್ಲಿ ಎಸ್‌ಪಿ ಟಿಕೆಟ್ ಕೊಟ್ಟಿದೆ. ಜಾತಿ ಸಮೀಕರಣದ ಆಧಾರದಲ್ಲಿ ಟಿಕೆಟ್ ಹಂಚಿಕೆ ಮಾಡಲಾಗಿದೆ ಎಂಬುದು ಎಸ್‌ಪಿ ನಾಯಕರ ನುಡಿ. ಹೊರಗಿನವರಿಗೆ ಟಿಕೆಟ್ ಕೊಟ್ಟಿದ್ದಕ್ಕೆ ಕಾರ್ಯಕರ್ತರ ವಲಯದಲ್ಲಿ ತೀವ್ರ ವಿರೋಧ ವ್ಯಕ್ತವಾಯಿತು. ಹೀಗಾಗಿ, ಪಕ್ಷವು ಅಭ್ಯರ್ಥಿಗಳ ನಿರಂತರ ಬದಲಾವಣೆ ಮಾಡಿದೆ. ತಳಮಟ್ಟದ ಕಾರ್ಯಕರ್ತರ ಮಾತಿಗೆ ಮನ್ನಣೆ ನೀಡಿ ಈ ಬದಲಾವಣೆಗಳನ್ನು ಮಾಡಲಾಗಿದೆ ಎಂದು ಪಕ್ಷದ ಹಿರಿಯ ನಾಯಕರು ಸಮಜಾಯಿಷಿ ನೀಡಿದ್ದಾರೆ. 'ಸಮಾಜವಾದಿ ಪಕ್ಷದ ಹೆಸರನ್ನು ಗೊಂದಲಮಯ ಪಕ್ಷ ಎಂದು ಬದಲಿಸುವುದು ಸೂಕ್ತ' ಎಂದು ಬಿಜೆಪಿ ಹಾಗೂ ರಾಷ್ಟ್ರೀಯ ಲೋಕದಳದ ನಾಯಕರು ವ್ಯಂಗ್ಯವಾಡಿದ್ದಾರೆ.

ಎಲ್ಲೆಲ್ಲಿ ಅಭ್ಯರ್ಥಿಗಳ ಬದಲಾವಣೆ?

ಕ್ಷೇತ್ರ	ಬದಲಾವಣೆ ಪ್ರಕ್ರಿಯೆ
ಮೀರತ್	ಭಾನು ಪ್ರತಾಪ್ ಸಿಂಗ್, ಅತುಲ್ ಪ್ರಧಾನ್, ಸುನಿತಾ ವರ್ಮಾ
ಬಾಗ್‌ಪತ್	ಮನೋಜ್ ಚೌಧರಿ, ಅಮರ್‌ಪಾಲ್ ಶರ್ಮಾ
ಗೌತಮ್‌ಬುದ್ಧ ನಗರ	ಡಾ.ಮಹೇಂದ್ರ ನಗರ್, ರಾಹುಲ್ ಅವಾನಾ, ಡಾ.ಮಹೇಂದ್ರ ನಗರ್
ಬದೌನ್	ಧರ್ಮೇಂದ್ರ ಯಾದವ್, ಶಿವಪಾಲ್ ಯಾದವ್, ಆದಿತ್ಯ ಯಾದವ್
ಮಿಶ್ರಿಖ್	ರಾಮಶಂಕರ್ ಭಾರ್ಗವ, ರಾಮ್‌ಪಾಲ್ ರಾಜವಂಶಿ, ಮನೋಜ್ ರಾಜವಂಶಿ, ಸಂಗೀತಾ ರಾಜವಂಶಿ, ರಾಮಶಂಕರ್ ಭಾರ್ಗವ
ಬಿಜ್ನೋರ್	ಯಶ್ವೀರ್ ಸಿಂಗ್, ದೀಪಕ್ ಸೈನಿ
ಸುಲ್ತಾನ್‌ಪುರ	ಭೀಮ್ ನಿಶಾದ್, ರಾಮ್ ಭುವಲ್ ನಿಶಾದ್
ಮೊರಾದಾಬಾದ್	ಎಸ್.ಟಿ.ಹಸನ್, ರುಚಿ ವೀರಾ
ಕನೌಜ್	ತೇಜ್ ಪ್ರತಾಪ್ ಸಿಂಗ್, ಅಖಿಲೇಶ್ ಯಾದವ್
ಶಹಜಹಾನ್‌ಪುರ	ರಾಜೇಶ್ ಕಶ್ಯಪ್, ಜ್ಯೋತ್ಸ್ನಾ ಗೊಂಡ್




ಅಖಿಲೇಶ್ ಯಾದವ್

ಹೊಸ ಸಮೀಕರಣದತ್ತ ಅಖಿಲೇಶ್ ಚಿತ್ತ

ಹಿಂದುಳಿದವರು ಹಾಗೂ ಮುಸ್ಲಿಂ ಮತಗಳ ಸಮೀಕರಣದಿಂದ ಯಶಸ್ಸು ಕಂಡವರು ಮುಲಾಯಂ ಸಿಂಗ್ ಯಾದವ್. ಹೊಸ ಪೀಳಿಗೆಯ ರಾಜಕಾರಣಿ ಅಖಿಲೇಶ್ ಯಾದವ್ ಈ ಹಿಂದಿನ ಚುನಾವಣೆಗಳಲ್ಲಿ ಅಪ್ಪನ ಸೂತ್ರವನ್ನೇ ಅನುಸರಿಸಿದ್ದರು. 'ಮುಸ್ಲಿಂ–ಯಾದವ ಪಕ್ಷ' ಎಂಬ ಹಣೆಪಟ್ಟಿ ಕಳಚಿಕೊಳ್ಳಲು ಅಖಿಲೇಶ್ ಅವರು ಈ ಸಲ ಕಸರತ್ತು ನಡೆಸಿದ್ದಾರೆ. 2014ರ ಲೋಕಸಭಾ ಚುನಾವಣೆಯಿಂದ ಬಿಜೆಪಿಯ ಸಾಂಪ್ರದಾಯಿಕ ಮತದಾರರಾಗಿರುವ ಪ್ರಬಲವಲ್ಲದ ಜಾತಿಗಳಿಗೆ ಅವಕಾಶ ನೀಡಲು ಅವರು ಪ್ರಯತ್ನ ನಡೆಸಿದ್ದಾರೆ.

ರಾಜ್ಯದಲ್ಲಿ ಮುಸ್ಲಿಂ ಜನಸಂಖ್ಯೆ ಶೇ 20ರಷ್ಟು ಇದೆ. ಆದರೆ, ಸಮಾಜವಾದಿ ಪಕ್ಷವು ಈ ಸಲ ಮುಸ್ಲಿಂ ಸಮುದಾಯದ ನಾಲ್ಕು ಅಭ್ಯರ್ಥಿಗಳಿಗಷ್ಟೇ ಟಿಕೆಟ್ ನೀಡಿದೆ. ಶೇ 30ರಷ್ಟು ಅಲ್ಪಸಂಖ್ಯಾತರು ಇರುವ ಮೀರತ್ ಹಾಗೂ ಮೊರಾದಾಬಾದ್‌ನಂತಹ ಕ್ಷೇತ್ರಗಳಲ್ಲಿ ಹಿಂದೂ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಪ್ರಯೋಗವನ್ನು ಪಕ್ಷ ಮಾಡಿದೆ. ಕೆಲವು ಸಾಮಾನ್ಯ ಕ್ಷೇತ್ರಗಳಲ್ಲಿ ದಲಿತ ಸಮುದಾಯದ ಅಭ್ಯರ್ಥಿಗಳಿಗೆ ಮಣೆ ಹಾಕಿದೆ.

ಸಮಾಜವಾದಿ ಪಕ್ಷವನ್ನು ಯಾದವ ಕೇಂದ್ರಿತ ಪಕ್ಷ ಎಂದು ಬಿಜೆಪಿ ಮತ್ತಿತರ ಪಕ್ಷಗಳು ಪದೇ ಪದೇ ಟೀಕಿಸಿವೆ. ಅಖಿಲೇಶ್ ಅವರು ಕನೌಜ್‌ನಿಂದ, ಪತ್ನಿ ಡಿಂಪಲ್ ಯಾದವ್ ಅವರು ಮೈನ್‌ಪುರಿಯಿಂದ ಸ್ಪರ್ಧಿಸುತ್ತಿದ್ದಾರೆ. ಅವರ ಸಂಬಂಧಿಗಳಾದ ಆದಿತ್ಯ, ಅಕ್ಷಯ್ ಹಾಗೂ ಧರ್ಮೇಂದ್ರ ಅವರನ್ನು ಹುರಿಯಾಳುಗಳನ್ನಾಗಿ ಮಾಡಲಾಗಿದೆ. ಉಳಿದಂತೆ ಯಾದವ ಸಮುದಾಯದ ಯಾರಿಗೂ ಟಿಕೆಟ್ ನೀಡಿಲ್ಲ.

ಎಸ್ಪಿ ಈ ಬಾರಿ ಯಾದವೇತರ ಹಿಂದುಳಿದ ಸಮುದಾಯಗಳಿಗೆ 26 ಟಿಕೆಟ್‌ಗಳನ್ನು ಹಂಚಿಕೆ ಮಾಡಿದೆ. ಕುರ್ಮಿಗಳಿಗೆ 9, ಮೌರ್ಯ, ಶಾಕ್ಯ ಹಾಗೂ ಕುಶ್ವಾಹಾ ಸಮುದಾಯಗಳಿಗೆ ಆರು ಹಾಗೂ ನಿಶಾದ್ ಸಮುದಾಯಕ್ಕೆ ನಾಲ್ಕು ಟಿಕೆಟ್ ನೀಡಿದೆ.

ಗುಜರಾತ್: 35 ಮುಸ್ಲಿಂ ಅಭ್ಯರ್ಥಿಗಳು

ಅಹಮದಾಬಾದ್ (ಪಿಟಿಐ): ಗುಜರಾತ್‌ನಲ್ಲಿ ಈ ಬಾರಿ ಲೋಕಸಭಾ ಚುನಾವಣೆಯ ಕಣದಲ್ಲಿ 35 ಮಂದಿ ಮುಸ್ಲಿಂ ಅಭ್ಯರ್ಥಿಗಳು ಇದ್ದಾರೆ. ಕಾಂಗ್ರೆಸ್ ಪಕ್ಷವು ಮುಸ್ಲಿಂ ಸಮುದಾಯದ ಯಾವುದೇ ಅಭ್ಯರ್ಥಿಯನ್ನು ಸ್ಪರ್ಧೆಗಿಳಿಸಿಲ್ಲ.

ಕಾಂಗ್ರೆಸ್, ಈ ಹಿಂದಿನ ಚುನಾವಣೆಗಳಲ್ಲಿ ಭರೂಚ್ ಕ್ಷೇತ್ರದಿಂದ ಮುಸ್ಲಿಮ್ ಅಭ್ಯರ್ಥಿಯನ್ನು ಕಣಕ್ಕಿಳಿಸಿತ್ತು. ಈ ಬಾರಿ ಸೀಟು ಹಂಚಿಕೆ ಸೂತ್ರದಂತೆ ಈ ಕ್ಷೇತ್ರವು ಎಎಪಿ ಪಾಲಾಗಿದ್ದು, ಕಾಂಗ್ರೆಸ್ ತನ್ನ ಅಭ್ಯರ್ಥಿಯನ್ನು ಸ್ಪರ್ಧೆಗಿಳಿಸಿಲ್ಲ.

ರಾಷ್ಟ್ರೀಯ ಪಕ್ಷಗಳಲ್ಲಿ ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಹೊರತುಪಡಿಸಿ ಇತರ ಪಕ್ಷಗಳು ಮುಸ್ಲಿಮರಿಗೆ ಮಣೆ ಹಾಕಿಲ್ಲ. ಮಾಯಾವತಿ ನೇತೃತ್ವದ ಬಿಎಸ್‌ಪಿಯು ಗಾಂಧಿನಗರ ಕ್ಷೇತ್ರದಲ್ಲಿ ಮೊಹಮ್ಮದ್ ಅನೀಸ್ ದೇಸಾಯಿ ಅವರಿಗೆ ಟಿಕೆಟ್ ನೀಡಿದೆ.

ಚುನಾವಣಾ ಆಯೋಗದ ಮಾಹಿತಿ ಪ್ರಕಾರ 2019ರ ಚುನಾವಣೆಯಲ್ಲಿ ಗುಜರಾತ್‌ನಲ್ಲಿ 43 ಮುಸ್ಲಿಂ ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಈ ಬಾರಿ ಕಣದಲ್ಲಿರುವ ಮುಸ್ಲಿಂ ಅಭ್ಯರ್ಥಿಗಳಲ್ಲಿ ಬಹುತೇಕರು ಪಕ್ಷೇತರರಾಗಿ ಸ್ಪರ್ಧಿಸುತ್ತಿದ್ದಾರೆ. ಕೆಲವರು ಸ್ಥಳೀಯ ಪಕ್ಷಗಳ ಅಭ್ಯರ್ಥಿಗಳಾಗಿದ್ದಾರೆ.

ಮುಸ್ಲಿಮರನ್ನು ದಾಳವಾಗಿಸುವ ಕಾಂಗ್ರೆಸ್, 'ಇಂಡಿಯಾ' ಮೈತ್ರಿಕೂಟ: ಪ್ರಧಾನಿ

ಸಾವಿರ ವರ್ಷಗಳಿಗೆ ಅಡಿಪಾಯ: ಮೋದಿ

ಇಟಾವಾ/ಸೀತಾಪುರ (ಪಿಟಿಐ): ಭಾರತವು ಮುಂದಿನ ಸಾವಿರ ವರ್ಷಗಳ ಕಾಲ ಶಕ್ತಿಶಾಲಿ ರಾಷ್ಟ್ರವಾಗಿ ಉಳಿಯಲು ಅಡಿಪಾಯ ಹಾಕುತ್ತಿದ್ದೇನೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

'ಮೋದಿ ಇದನ್ನು ಏಕೆ ಮಾಡುತ್ತಿದ್ದಾರೆಂದರೆ, ಮೋದಿ ಇರಲಿ, ಇಲ್ಲದಿರಲಿ, ದೇಶ ಎಂದಿಗೂ ಇರುತ್ತದೆ' ಎಂದ ಅವರು, 'ಎಸ್‌ಪಿ-ಕಾಂಗ್ರೆಸ್ ಮಂದಿ ಏನು ಮಾಡುತ್ತಿದ್ದಾರೆ? ಅವರ ಭವಿಷ್ಯ ಮತ್ತು ಅವರ ಮಕ್ಕಳ ಭವಿಷ್ಯಕ್ಕಾಗಿ ಚುನಾವಣೆ ಎದುರಿಸುತ್ತಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

ಮುಲಾಯಂ ಸಿಂಗ್ ಯಾದವ್ ಅವರ ತವರು ಜಿಲ್ಲೆ ಇಟಾವಾದಲ್ಲಿ ಚುನಾವಣಾ ಪ್ರಚಾರ ಸಭೆ ನಡೆಸಿದ ಅವರು, ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ಪಕ್ಷ ಕುಟುಂಬ ರಾಜಕಾರಣದಲ್ಲಿ ತೊಡಗಿವೆ ಎಂದು ಟೀಕಿಸಿದರು.

'ಕುಟುಂಬ ರಾಜಕಾರಣದ ಮೂಲಕ ಇವರು ಸೃಷ್ಟಿಸಿರುವ ಪರಂಪರೆ ಎಂತಹದ್ದು? ಕೆಲವರು ಮೈನ್‌ಪುರಿ, ಕನೌಜ್ ಮತ್ತು ಇಟಾವಾ ಅನ್ನು ತಮ್ಮ ಜಹಗೀರು ಎಂದು ಪರಿಗಣಿಸಿದರೆ, ಕೆಲವರು ಅಮೇಠಿ ಮತ್ತು ರಾಯ್‌ಬರೇಲಿಯನ್ನು ತಮ್ಮ ಜಹಗೀರು ಎಂದು ಪರಿಗಣಿಸಿದ್ದಾರೆ' ಎಂದು ದೂರಿದರು.

'ಮೋದಿ ನಿರ್ಮಿಸಿದ ಪರಂಪರೆ ಎಲ್ಲರಿಗೂ ಸೇರಿದ್ದು. 2047ರ ವೇಳೆಗೆ ನಿಮ್ಮ ಮಗ ಮತ್ತು ಮಗಳು ಕೂಡ ಪ್ರಧಾನಿ, ಮುಖ್ಯಮಂತ್ರಿ ಆಗಬೇಕು ಎಂದು ನಾನು ಬಯಸುತ್ತೇನೆ. ಪ್ರತಿಷ್ಠಿತ ಕುಟುಂಬಗಳ ಉತ್ತರಾಧಿಕಾರಿಗಳು ಮಾತ್ರ ಪ್ರಧಾನಿ, ಮುಖ್ಯಮಂತ್ರಿ ಆಗಬಹುದೆನ್ನುವ ಅನಿಷ್ಟ ಪರಂಪರೆಯನ್ನು ಈ 'ಚಾಯ್‌ವಾಲಾ' ಮುರಿದಿದ್ದಾರೆ' ಎಂದು ಹೇಳಿದರು.

'ಮೋದಿ ಮತ್ತು ಯೋಗಿ ನಿಮ್ಮ ಮಕ್ಕಳ ಭವಿಷ್ಯಕ್ಕಾಗಿ ಕೆಲಸ ಮಾಡುತ್ತಿದ್ದಾರೆ. ನಮಗೆ ಸ್ವಂತ ಮಕ್ಕಳಿಲ್ಲ' ಎಂದು ಹೇಳಿದರು.

ಉತ್ತರ ಪ್ರದೇಶದ ಧೌರಹರಾದಲ್ಲಿ ಬಿಜೆಪಿ ಪರ ರ‍್ಯಾಲಿ ನಡೆಸಿದ ಅವರು, 'ಕಾಂಗ್ರೆಸ್ ಮತ್ತು 'ಇಂಡಿಯಾ' ಕೂಟ ತಮ್ಮನ್ನು ದಾಳವಾಗಿ ಬಳಸುತ್ತಿವೆ ಎಂದು ಮುಸ್ಲಿಮರಿಗೆ ಈಗ ಅರ್ಥವಾಗಿದೆ. ಬಿಜೆಪಿ ಮಾಡಿದ ಅಭಿವೃದ್ಧಿ ನೋಡಿ ಮುಸ್ಲಿಂ ಸಮುದಾಯವೂ ಈಗ ಬಿಜೆಪಿಯತ್ತ ಬರುತ್ತಿದೆ' ಎಂದು ಪ್ರತಿಪಾದಿಸಿದರು.

'ಬಡವರು ಮತ್ತು ಎಸ್‌ಸಿ, ಎಸ್‌ಟಿ, ಒಬಿಸಿ ಸಮುದಾಯಗಳಿಗೆ ಸೇರಿದವರು ಕಾಂಗ್ರೆಸ್ ಮತ್ತು ವಿರೋಧಿ ಒಕ್ಕೂಟದಿಂದ ಅಂತರ ಕಾಯ್ದುಕೊಂಡಿದ್ದು, ಬಿಜೆಪಿಯತ್ತ ಬಂದಿದ್ದಾರೆ' ಎಂದು ಹೇಳಿದರು.


ಆಯೋಧ್ಯೆಯ ರಾಮ ಮಂದಿರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಪೂಜೆ ಸಲ್ಲಿಸಿದರು–ಪಿಟಿಐ ಚಿತ್ರ

ದರ್ಶನದ ನಂತರ ರೋಡ್ ಶೋ

ಅಯೋಧ್ಯೆ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಅಯೋಧ್ಯೆಯಲ್ಲಿ ರೋಡ್ ಶೋ ಆರಂಭಕ್ಕೂ ಮುನ್ನ ರಾಮಮಂದಿರಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.


ಜನವರಿ 22ರ ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯ ನಂತರ ರಾಮ ಮಂದಿರಕ್ಕೆ ಪ್ರಧಾನಿ ನೀಡಿದ ಮೊದಲ ಭೇಟಿ ಇದು ಎಂದು ವಿಶ್ವ ಹಿಂದೂ ಪರಿಷತ್ ಮಾಧ್ಯಮ ಉಸ್ತುವಾರಿ ಶರತ್ ಶರ್ಮಾ ತಿಳಿಸಿದರು.

ಭಾನುವಾರ ರಾಮ ಮಂದಿರವನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮತ್ತು ಬಿಜೆಪಿಯ ಫೈಸಲಾಬಾದ್ ಅಭ್ಯರ್ಥಿ ಲಲ್ಲು ಸಿಂಗ್ ರೋಡ್ ಶೋನಲ್ಲಿ ಭಾಗವಹಿಸಿದರು.

ಚುನಾವಣಾ ಕಣದಲ್ಲಿ...

'ಭಯೋತ್ಪಾದನಾ ನಿಗ್ರಹ ವ್ಯವಸ್ಥೆ ಬಲಪಡಿಸಲಿರುವ 'ಇಂಡಿಯಾ'

ನವದೆಹಲಿ (ಪಿಟಿಐ): ಪೂಂಛ್‌ನಲ್ಲಿ ನಡೆದ ಘಟನೆಯು ಉಗ್ರರದಾಳಿಯ ಆತಂಕಕಾರಿ ಪ್ರವೃತ್ತಿಯ ಭಾಗವಾಗಿದ್ದು, ಲೋಕಸಭಾ ಚುನಾವಣೆಯ ಫಲಿತಾಂಶದ ನಂತರ ಪಕ್ಷ ಮತ್ತು 'ಇಂಡಿಯಾ' ಕೂಟವು ಭಯೋತ್ಪಾದನಾ ನಿಗ್ರಹ ವ್ಯವಸ್ಥೆಯನ್ನು ಬಲಪಡಿಸಲು ಸರ್ವ ಪ್ರಯತ್ನಗಳನ್ನೂ ಮಾಡಲಿದೆ ಎಂದು ಕಾಂಗ್ರೆಸ್ ಭಾನುವಾರ ತಿಳಿಸಿದೆ.



ಸುರನ್‌ಕೋಟ್ ಪ್ರದೇಶದ ಶಾಹಸಿತಾರ್‌ನಲ್ಲಿ ಶನಿವಾರ ನಡೆದ ಭಯೋತ್ಪಾದಕರ ದಾಳಿಯಲ್ಲಿ ಭಾರತೀಯ ವಾಯು ಸೇನೆಯ ಐವರು ಸಿಬ್ಬಂದಿ ತೀವ್ರವಾಗಿ ಗಾಯಗೊಂಡಿದ್ದರು. ಅವರ ಪೈಕಿ ಒಬ್ಬರು ನಂತರ ಸೇನಾ ಆಸ್ಪತ್ರೆಯಲ್ಲಿ ಮೃತಪಟ್ಟರು.

ಉಗ್ರ ದಾಳಿಯ ಘಟನೆಯ ಬಗ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ಇದು ಕಳವಳಕಾರಿ ವಿಷಯವಾಗಿದ್ದು, 2023ರ ಜನವರಿ ಒಂದರಿಂದ ನಮ್ಮ 25 ರಕ್ಷಣಾ ಸಿಬ್ಬಂದಿ ಮತ್ತು ಎಂಟು ನಾಗರಿಕರು ರಜೌರಿ–ಪೂಂಛ್ ಭಾಗದಲ್ಲಿ ಸಾವನ್ನಪ್ಪಿದ್ದಾರೆ. ಆದರೆ, ಈ ಪ್ರದೇಶದಲ್ಲಿ 2007ರಿಂದ 2014ರವರೆಗೆ ಯಾವುದೇ ದೊಡ್ಡ ಭಯೋತ್ಪಾದನಾ ಕೃತ್ಯ ನಡೆದಿರಲಿಲ್ಲ' ಎಂದು ತಿಳಿಸಿದ್ದಾರೆ.

ಶನಿವಾರ ಈ ಬಗ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದ ಮಲ್ಲಿಕಾರ್ಜುನ ಖರ್ಗೆ ಅವರು, 'ಹೇಡಿತನದ ಕೃತ್ಯವನ್ನು ಕಾಂಗ್ರೆಸ್ ತೀವ್ರವಾಗಿ ಖಂಡಿಸುತ್ತದೆ ಹಾಗೂ ಭಯೋತ್ಪಾದನೆಯ ವಿರುದ್ಧ ದೇಶದ ಜತೆ ನಿಲ್ಲಲಿದೆ' ಎಂದು ಉಲ್ಲೇಖಿಸಿದ್ದರು.

'ಆರ್‌ಎಸ್‌ಎಸ್ ನಂಟಿನ ಅಧಿಕಾರಿ ಗುಂಡಿನಿಂದ ಕರ್ಕರೆ ಸಾವು'

ಮುಂಬೈ: 'ಮಹಾರಾಷ್ಟ್ರದ ಎಟಿಎಸ್ ಮುಖ್ಯಸ್ಥರಾಗಿದ್ದ ಐಪಿಎಸ್ ಅಧಿಕಾರಿ ಹೇಮಂತ್ ಕರ್ಕರೆ ಅವರು ಸತ್ತಿದ್ದು ಪಾಕಿಸ್ತಾನದ ದಾಳಿಕೋರ ಮೊಹಮ್ಮದ್ ಅಜ್ಮಲ್ ಕಸಬ್ ಹಾರಿಸಿದ ಗುಂಡಿನಿಂದ ಅಲ್ಲ. ಅವರು ಸತ್ತಿದ್ದು ಆರ್‌ಎಸ್‌ಎಸ್ ನಂಟಿನ ಪೊಲೀಸ್ ಅಧಿಕಾರಿಯ ಗುಂಡಿನಿಂದ' ಎಂದು ಮಹಾರಾಷ್ಟ್ರದ ವಿರೋಧ ಪಕ್ಷದ ನಾಯಕ ಮತ್ತು ಹಿರಿಯ ಕಾಂಗ್ರೆಸ್ಸಿಗ ವಿಜಯ್ ವಡೆಟ್ಟೀವಾರ್ ಶನಿವಾರ ಆರೋಪಿಸಿದ್ದಾರೆ.

'ಪ್ರಕರಣದಲ್ಲಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದ ಉಜ್ವಲ್ ನಿಕಂ ಒಬ್ಬ ವಿಶ್ವಾಸಘಾತುಕನಾಗಿದ್ದು, ಈ ಸತ್ಯವನ್ನು ಮುಚ್ಚಿಟ್ಟರು. ಅಂಥ ವಿಶ್ವಾಸಘಾತುಕನಿಗೆ ಬಿಜೆಪಿ ಚುನಾವಣಾ ಟಿಕೆಟ್ ನೀಡಿದೆ' ಎಂದು ಹೇಳಿದರು.

ತಮ್ಮ ಹೇಳಿಕೆ ಬಗ್ಗೆ ಭಾನುವಾರ ಕೊಲ್ಹಾಪುರದಲ್ಲಿ ಸ್ಪಷ್ಟನೆ ನೀಡಿದ ವಿಜಯ್, 'ಮಾಜಿ ಪೊಲೀಸ್ ಅಧಿಕಾರಿ ಎಸ್.ಎಂ.ಮುಶ್ರಿಫ್ ಅವರು ಬರೆದಿರುವ ಪುಸ್ತಕದಲ್ಲಿ ಇರುವುದನ್ನು ನಾನು ಹೇಳಿದ್ದೇನೆ' ಎಂದರು.

ವಡೆಟ್ಟೀವಾರ್ ಆರೋಪವನ್ನು ಉಜ್ವಲ್ ನಿಕಂ ನಿರಾಕರಿಸಿದ್ದು, ಆಧಾರರಹಿತ ಆರೋಪದಿಂದ ತಮಗೆ ನೋವಾಗಿದೆ ಎಂದು ಹೇಳಿದ್ದಾರೆ.

ವಡೆಟ್ಟೀವಾರ್ ಹೇಳಿಕೆಯು ಮಹಾರಾಷ್ಟ್ರದಲ್ಲಿ ವಿವಾದಕ್ಕೆ ಕಾರಣವಾಗಿದೆ. ಘಟನೆ ನಡೆದ ಸಂದರ್ಭದಲ್ಲಿ ಕೇಂದ್ರದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದುದರಿಂದ ಈ ಹೇಳಿಕೆ ಪಕ್ಷಕ್ಕೆ ಭಾರಿ ಮುಜುಗರ ಉಂಟುಮಾಡಿದೆ.

ಮುಶ್ರಿಫ್ ಮಾಜಿ ಪೊಲೀಸ್ ಮಹಾ ನಿರ್ದೇಶಕರಾಗಿದ್ದು, 'ಹೂ ಕಿಲ್ಡ್ ಕರ್ಕರೆ? ದ ರಿಯಲ್ ಫೇಸ್ ಆಫ್ ಟೆರರಿಸಂ ಇನ್ ಇಂಡಿಯಾ' ಎನ್ನುವ ಪುಸ್ತಕ ಬರೆದಿದ್ದಾರೆ.



ಜಾಗೃತಿ
ಪಟ್ನಾದ ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ವಿದ್ಯಾರ್ಥಿನಿಯರು ಮತದಾನದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು–ಪಿಟಿಐ ಚಿತ್ರ

'ರಾಹುಲ್ ಹೊಗಳಿಕೆ ಕಳವಳಕಾರಿ'

ನವದೆಹಲಿ: ಪಾಕಿಸ್ತಾನದ ಮಾಜಿ ಸಚಿವ ಚೌಧರಿ ಫವಾದ್ ಹುಸೇನ್ ಅವರು ರಾಹುಲ್ ಗಾಂಧಿ ಅವರನ್ನು ಹೊಗಳಿರುವ ವಿಚಾರವು ತೀವ್ರ ಕಳವಳಕಾರಿಯಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಈ ಬಗ್ಗೆ ಮಾತನಾಡಿರುವ ಅವರು, 'ಭಾರತವನ್ನು ಅಸ್ಥಿರಗೊಳಿಸಲು ಯತ್ನಿಸುತ್ತಿರುವ ನೆರೆಯ ದೇಶವು ತನ್ನ ನಾಯಕನ ಬಗ್ಗೆ 'ಅಪಾರ ಪ್ರೀತಿ' ತೋರುತ್ತಿರುವುದು ಏಕೆ ಎನ್ನುವುದನ್ನು ಕಾಂಗ್ರೆಸ್ ವಿವರಿಸಬೇಕು' ಎಂದು ಒತ್ತಾಯಿಸಿದರು.

ಕಾಶ್ಮೀರದ ಬಗ್ಗೆಯೂ ಮಾತನಾಡಿದ ಅವರು, 'ಪಾಕ್ ಆಕ್ರಮಿತ ಕಾಶ್ಮೀರದ (ಪಿಒಕೆ) ಮೇಲಿನ ಹಕ್ಕನ್ನು ಭಾರತ ಎಂದೂ ಬಿಟ್ಟುಕೊಡುವುದಿಲ್ಲ. ಆದರೆ, ಬಲ ಪ್ರಯೋಗಿಸಿ ಅದನ್ನು ವಶಪಡಿಸಿಕೊಳ್ಳಬೇಕಾದ ಅಗತ್ಯವೂ ಇಲ್ಲ. ಏಕೆಂದರೆ, ಕಾಶ್ಮೀರದಲ್ಲಿ ಆಗುತ್ತಿರುವ ಅಭಿವೃದ್ಧಿಯನ್ನು ನೋಡಿ ಪಿಒಕೆಯ ಜನ ತಾವಾಗಿಯೇ ಭಾರತದ ಭಾಗವಾಗಲು ಮುಂದೆ ಬರುತ್ತಾರೆ' ಎಂದು ಹೇಳಿದರು.

400 ಸ್ಥಾನಗಳತ್ತ ಮೋದಿ: ಅಮಿತ್ ಶಾ

ಧರ್ಮಾವರಂ (ಪಿಟಿಐ): ಲೋಕಸಭಾ ಚುನಾವಣೆಯ ಮೂರನೇ ಹಂತದ ಮತದಾನ ಮುಗಿದ ನಂತರ ಪ್ರಧಾನಿ ನರೇಂದ್ರ ಮೋದಿ ಅವರು 400 ಸ್ಥಾನಗಳತ್ತ ಮುಂದುವರಿಯಲಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ವಿಶ್ವಾಸ ವ್ಯಕ್ತಪಡಿಸಿದರು.

ಚುನಾವಣೆಯ ಮೊದಲ ಎರಡು ಹಂತಗಳಲ್ಲಿ ಪಕ್ಷವು 100 ಸ್ಥಾನಗಳನ್ನು ದಾಟಿದೆ ಎಂದು ಅವರು ಅಭಿಪ್ರಾಯಪಟ್ಟರು.

'ರಾಹುಲ್ ಭಾರತದ ಪುತ್ರ': ಬಿಜೆಪಿ ಟೀಕೆಗೆ ಎಐಸಿಸಿ ಅಧ್ಯಕ್ಷರ ತಿರುಗೇಟು

ಆಹಾರ ಪದ್ಧತಿ ಹೇರುತ್ತಿರುವ ಮೋದಿ: ಖರ್ಗೆ

ಮಾಲ್ಡಾ (ಪಶ್ಚಿಮ ಬಂಗಾಳ) (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಆಹಾರ ಪದ್ಧತಿಯನ್ನು ಜನರ ಮೇಲೆ ಹೇರುತ್ತಿದ್ದಾರೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾನುವಾರ ಟೀಕಿಸಿದರು.



ಪಶ್ಚಿಮ ಬಂಗಾಳದ ಮಾಲ್ಡಾ ಉತ್ತರ ಕ್ಷೇತ್ರದಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡ ಅವರು, 'ಮೋದಿ ಅವರ ಭಾರತದಲ್ಲಿ ಅವರ ಇಚ್ಛೆಯಂತೆ ಆಹಾರ ಸೇವಿಸುವ ಮತ್ತು ಪೂಜೆ ಸಲ್ಲಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಆರ್‌ಎಸ್‌ಎಸ್ ಮತ್ತು ಬಿಜೆಪಿ ಒಂದೇ ನಾಣ್ಯದ ಎರಡು ಮುಖಗಳು' ಎಂದು ಆರೋಪಿಸಿದರು.

ರಾಹುಲ್ ಭಾರತದ ಪುತ್ರ: ರಾಹುಲ್ ಗಾಂಧಿ ಅವರು ಭಾರತಕ್ಕಿಂತ ಪಾಕಿಸ್ತಾನದ ಪ್ರಧಾನಿಯಾಗಲು ಸೂಕ್ತ ವ್ಯಕ್ತಿ ಎಂಬ ಬಿಜೆಪಿ ಹೇಳಿಕೆಗೆ ತಿರುಗೇಟು ನೀಡಿದ ಖರ್ಗೆ, 'ರಾಹುಲ್ ಅವರು ಭಾರತದ ಪುತ್ರ' ಎಂದರು.

'ರಾಹುಲ್ ಏಕೆ ಪಾಕಿಸ್ತಾನದ ಪ್ರಧಾನಿ ಆಗಬೇಕು? ಅವರ ಕುಟುಂಬವು ಈ ದೇಶಕ್ಕಾಗಿ ಎಲ್ಲ ತ್ಯಾಗಗಳನ್ನೂ ಮಾಡಿದೆ' ಎಂದು ಪ್ರತಿಪಾದಿಸಿದರು.

ಮೋದಿ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ, ಸಂವಿಧಾನಕ್ಕೆ ಉಳಿಗಾಲವಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆ ನಾಶವಾಗಲಿದ್ದು, ಭಾರತವು ಸರ್ವಾಧಿಕಾರಿಯ ಆಳ್ವಿಕೆಗೆ ಒಳಪಡಲಿದೆ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಚುನಾವಣಾ ಬಾಂಡ್ ಮೂಲಕ ದೇಣಿಗೆ ಪಡೆದ ಬಿಜೆಪಿಗೆ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ಯಾವುದೇ ಹಕ್ಕು ಇಲ್ಲ ಎಂದ ಅವರು, 'ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಸೇರಿಕೊಂಡು ಬಿಜೆಪಿಯನ್ನು ದೊಡ್ಡ ಲಾಂಡ್ರಿಯನ್ನಾಗಿ ಬದಲಾಯಿಸಿದ್ದಾರೆ. ಕಮಲ ಪಾಳಯವು ಎಲ್ಲರ ಭ್ರಷ್ಟಾಚಾರದ ಕೊಳೆಯನ್ನು ತೊಳೆಯುವ ವಾಷಿಂಗ್ ಮಷಿನ್ ಆಗಿದೆ' ಎಂದು ಲೇವಡಿ ಮಾಡಿದರು.

'ಬಿಜೆಪಿಯು ಒಡ್ಡಿರುವ ಸವಾಲನ್ನು ಎದುರಿಸಿ ಕೇಂದ್ರದಲ್ಲಿ ಜಾತ್ಯತೀತ, ಪ್ರಜಾಸತ್ತಾತ್ಮಕ ಸರ್ಕಾರವನ್ನು ಸ್ಥಾಪಿಸಲು ಕಾಂಗ್ರೆಸ್‌ಗೆ ಮಾತ್ರ ಸಾಧ್ಯ' ಎಂದು ಹೇಳಿದರು.

'ಬಿಳಿ ಉಡುಪು ಸರಳತೆಯ ಪ್ರತೀಕ'

ನವದೆಹಲಿ: 'ಬಿಳಿ ಬಟ್ಟೆಯು ಪಾರದರ್ಶಕತೆ ಮತ್ತು ಸರಳತೆಯ ಪ್ರತೀಕ. ಆದ್ದರಿಂದ ಯಾವಾಗಲೂ ಬಿಳಿ ಬಟ್ಟೆಯನ್ನೇ ಧರಿಸುತ್ತೇನೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ರಾಹುಲ್ ಅವರು ಕರ್ನಾಟಕದಲ್ಲಿ ಪ್ರಚಾರದ ವೇಳೆ ತಮಗೆ ಎದುರಾದ ಪ್ರಶ್ನೆಗಳಿಗೆ ಉತ್ತರಿಸುತ್ತಿರುವ ಎರಡು ನಿಮಿಷಗಳ ವಿಡಿಯೊವನ್ನು ಕಾಂಗ್ರೆಸ್ ತನ್ನ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದೆ. ತಾವು ಧರಿಸುವ ಉಡುಪಿನ ಕುರಿತ ಪ್ರಶ್ನೆಗೆ ಅವರು ಈ ಮೇಲಿನಂತೆ ಉತ್ತರಿಸಿದ್ದಾರೆ. 'ನಾನು ತೊಡುವ ಬಟ್ಟೆಯ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡಿಲ್ಲ. ಸರಳವಾಗಿ ಕಾಣಲು ಬಯಸುವೆ' ಎಂದಿದ್ದಾರೆ.

ಕನ್ಯಾಕುಮಾರಿಯಿಂದ ಕಾಶ್ಮೀರಕ್ಕೆ ಭಾರತ್ ಜೋಡೊ ಯಾತ್ರೆ ನಡೆಸಿದ ಬಳಿಕ ಬಿಳಿ ಬಟ್ಟೆಯು ರಾಹುಲ್ ಅವರ 'ಟ್ರೇಡ್‌ಮಾರ್ಕ್' ಆಗಿದೆ.

ಚುಟುಕು

14ರಂದು ಮೋದಿ ನಾಮಪತ್ರ ಸಲ್ಲಿಕೆ

ವಾರಾಣಸಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರ ಪ್ರದೇಶದ ವಾರಾಣಸಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಮೇ 14ರಂದು ನಾಮಪತ್ರ ಸಲ್ಲಿಸಲಿದ್ದಾರೆ.

'ಮೋದಿ ಅವರು 13ರಂದು ರೋಡ್ ಶೋ ನಡೆಸಲಿದ್ದು, ಅದಕ್ಕಾಗಿ ಎಲ್ಲ ಸಿದ್ಧತೆ ನಡೆಯುತ್ತಿದೆ. 14ರಂದು ನಾಮಪತ್ರ ಸಲ್ಲಿಸುವರು' ಎಂದು ಬಿಜೆಪಿ ವಾರಾಣಸಿ ನಗರ ಘಟಕದ ಅಧ್ಯಕ್ಷ ವಿದ್ಯಾಸಾಗರ್ ರಾಯ್ ಭಾನುವಾರ ಹೇಳಿದರು.

ವಾರಾಣಸಿ ಕ್ಷೇತ್ರದ ಮತದಾನ ಜೂನ್ 1ರಂದು ನಡೆಯಲಿದೆ. ಕಾಂಗ್ರೆಸ್ ಪಕ್ಷವು ಇಲ್ಲಿ ತನ್ನ ರಾಜ್ಯ ಘಟಕದ ಅಧ್ಯಕ್ಷ ಅಜಯ್ ರಾಯ್ ಅವರನ್ನು ಸ್ಪರ್ಧೆಗಿಳಿಸಿದೆ. ಬಿಎಸ್‌ಪಿಯ ಅತ್ತರ್ ಜಮಾಲ್ ಅವರೂ ಕಣದಲ್ಲಿದ್ದಾರೆ.

ಅಯೋಧ್ಯೆ ಭೇಟಿಗೆ ಟೀಕೆ: ಪಕ್ಷ ತ್ಯಜಿಸಿದ ಎಐಸಿಸಿ ವಕ್ತಾರೆ

ರಾಯ್‌ಪುರ (ಪಿಟಿಐ): ಅಯೋಧ್ಯೆ ರಾಮಮಂದಿರಕ್ಕೆ ಭೇಟಿ ನೀಡಿದ ವಿಚಾರದಲ್ಲಿ ತಮ್ಮನ್ನು ಟೀಕಿಸಲಾಗಿದೆ ಎಂದು ಹೇಳಿರುವ ಎಐಸಿಸಿ ವಕ್ತಾರೆ ರಾಧಿಕಾ ಖೇರಾ ಅವರು ಪಕ್ಷದ ಎಲ್ಲ ಹುದ್ದೆಗಳು ಮತ್ತು ಪ್ರಾಥಮಿಕ ಸದಸ್ಯತ್ವಕ್ಕೆ ಭಾನುವಾರ ರಾಜೀನಾಮೆ ನೀಡಿದ್ದಾರೆ.

ಛತ್ತೀಸಗಢಕ್ಕೆ ಎಐಸಿಸಿಯ ಸಂವಹನ ಮತ್ತು ಮಾಧ್ಯಮ ಸಂಯೋಜಕರಾಗಿದ್ದ ರಾಧಿಕಾ ಅವರು ಈಚೆಗೆ ರಾಮಮಂದಿರಕ್ಕೆ ಭೇಟಿ ನೀಡಿದ್ದರು. ಅದಕ್ಕಾಗಿ ಟೀಕೆ ಎದುರಿಸಬೇಕಾಗಿ ಬಂದಿತ್ತು ಎಂದು ರಾಧಿಕಾ ಹೇಳಿದ್ದಾರೆ.

ಅದೇ ರೀತಿ, ಛತ್ತೀಸಗಢ ಕಾಂಗ್ರೆಸ್‌ನ ಸಂವಹನ ವಿಭಾಗದ ಮುಖ್ಯಸ್ಥ ಸುಶೀಲ್ ಆನಂದ್ ಶುಕ್ಲಾ ಮತ್ತು ರಾಧಿಕಾ ನಡುವೆ ರಾಯ್‌ಪುರದ ಕಾಂಗ್ರೆಸ್ ಕಚೇರಿಯಲ್ಲಿ ಈಚೆಗೆ ಮಾತಿನ ಚಕಮಕಿ ನಡೆದಿತ್ತು. ಅದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದವು.

'ಭಗವಾನ್ ಶ್ರೀರಾಮನ ಜನ್ಮಸ್ಥಳವು ಪ್ರತಿಯೊಬ್ಬ ಹಿಂದೂವಿಗೂ ಪವಿತ್ರ ಕ್ಷೇತ್ರವಾಗಿದೆ. ಬಾಲರಾಮನ ದರ್ಶನದಿಂದ ಜೀವನ ಸಾರ್ಥಕವಾಯಿತು ಎಂದು ಪ್ರತಿಯೊಬ್ಬ ಹಿಂದೂ ಭಾವಿಸಿದರೆ, ಕೆಲವರು ಅದನ್ನು ವಿರೋಧಿಸುತ್ತಿದ್ದಾರೆ. ಎನ್‌ಎಸ್‌ಯುಐನಿಂದ ಎಐಸಿಸಿ ಮಾಧ್ಯಮ ವಿಭಾಗದವರೆಗೆ 22 ವರ್ಷಗಳಿಗೂ ಅಧಿಕ ಕಾಲ ಪ್ರಾಮಾಣಿಕವಾಗಿ ನಾನು ಯಾವ ಪಕ್ಷಕ್ಕೆ ದುಡಿದಿದ್ದೇನೆ. ಅದೇ ಪಕ್ಷವು ನನ್ನ ಅಯೋಧ್ಯೆ ಭೇಟಿಯನ್ನು ವಿರೋಧಿಸಿದ್ದು ನೋವುಂಟುಮಾಡಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬರೆದ ಪತ್ರದಲ್ಲಿ ಹೇಳಿಕೊಂಡಿದ್ದಾರೆ.

'ಛತ್ತೀಸಗಢ ಕಾಂಗ್ರೆಸ್ ಕಚೇರಿಯಲ್ಲಿ ನನ್ನನ್ನು ಅವಮಾನಿಸಲಾಗಿದೆ. ಅಲ್ಲಿ ನಡೆದ ಘಟನೆ ಬಗ್ಗೆ ಪಕ್ಷದ ಹಿರಿಯ ನಾಯಕರಿಗೆ ದೂರು ನೀಡಿದರೂ ನನಗೆ ನ್ಯಾಯ ದೊರೆತಿಲ್ಲ' ಎಂದು ದೂರಿದ್ದಾರೆ.

ಎಂಥಾ ಮಾತು!



ಪ್ರಧಾನಿ ನರೇಂದ್ರ ಮೋದಿ ಅವರು ಶ್ರೀರಾಮನ ಹೆಸರಿನಲ್ಲಿ ಮತಯಾಚಿಸುತ್ತಿದ್ದಾರೆ. ಅಭಿವೃದ್ಧಿ, ಹಣದುಬ್ಬರ, ಉದ್ಯೋಗದ ಕುರಿತು ಮಾತನಾಡುವುದಿಲ್ಲ. ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯಲ್ಲಿ ಉಗ್ರರು ನಡೆಸಿರುವ ದಾಳಿಯಲ್ಲಿ ಯೋಧರೊಬ್ಬರು ಹುತಾತ್ಮರಾಗಿದ್ದಾರೆ. ನಾಲ್ವರು ಗಾಯಗೊಂಡಿದ್ದಾರೆ. ಮೋದಿ ಅವರು ಅಯೋಧ್ಯೆಯಲ್ಲಿ ಈ ವಿಚಾರದ ಕುರಿತು ಮಾತನಾಡುವುದಿಲ್ಲ

ಸಂಜಯ್ ರಾವುತ್, ಶಿವಸೇನಾ ಉದ್ಧವ್ ಠಾಕ್ರೆ ಬಣದ ಮುಖಂಡ



ಓಲೈಕೆಯ ರಾಜಕಾರಣಕ್ಕಾಗಿ ದಲಿತರು, ಬುಡಕಟ್ಟು ಮತ್ತು ಹಿಂದುಳಿದ ವರ್ಗದವರ ಮೀಸಲಾತಿಯನ್ನು ಕಸಿದು ಮುಸ್ಲಿಮರಿಗೆ ನೀಡುವುದು ಕಾಂಗ್ರೆಸ್‌ನ ಕಾರ್ಯಸೂಚಿಯಾಗಿದೆ. 2014ಕ್ಕಿಂತ ಮುಂಚೆ ಮತ ಬ್ಯಾಂಕ್ ರಾಜಕೀಯ, ಧರ್ಮ ಮತ್ತು ಜಾತಿಯ ಹೆಸರಿನಲ್ಲಿ ರಾಜಕಾರಣ ನಡೆಯುತ್ತಿತ್ತು. ಪ್ರಧಾನಿ ನರೇಂದ್ರ ಮೋದಿ ಬಂದ ಬಳಿಕ ಅದರ ವ್ಯಾಖ್ಯಾನವೇ ಬದಲಾಗಿದೆ

ಜೆ.ಪಿ. ನಡ್ಡಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

ಕ್ಷೇತ್ರ ಮಹಾತ್ಮೆ



ಈಶಾನ್ಯ ಭಾರತದ ಹೆಬ್ಬಾಗಿಲು ಎಂದೇ ಪ್ರಸಿದ್ಧವಾಗಿರುವ ಅಸ್ಸಾಂನ ಗುವಾಹಟಿ ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿ ಕಾಂಗ್ರೆಸ್ ಮತ್ತು ಬಿಜೆಪಿ, ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ. ಬಿಜೆಪಿಯು ಬಿಜುಲಿ ಕಲಿತ ಮೇಧಿ ಅವರನ್ನು ಅಭ್ಯರ್ಥಿಯಾಗಿಸಿದರೆ, ಕಾಂಗ್ರೆಸ್ ಪಕ್ಷವು ಮೀರಾ ಬೋರ್ಟಕುರ್ ಗೋಸ್ವಾಮಿ ಅವರನ್ನು ಅಖಾಡಕ್ಕಿಳಿಸಿದೆ. 2019ರ ಚುನಾವಣೆಯಲ್ಲಿ ಬಿಜೆಪಿಯ ಕ್ವೀನ್ ಓಜಾ ಅವರು 3,45,606 ಮತಗಳ ಅಂತರದಿಂದ ಕಾಂಗ್ರೆಸ್‌ನ ಬಬಿತಾ ಶರ್ಮಾ ಅವರನ್ನು ಪರಾಭವಗೊಳಿಸಿದ್ದರು. ಈ ಬಾರಿ ಬಿಜೆಪಿಯು ಬಬಿತಾ ಅವರಿಗೆ ಟಿಕೆಟ್ ನಿರಾಕರಿಸಿದೆ. ಗುವಾಹಟಿಯ ಮಾಜಿ ಉಪ ಮೇಯರ್ ಬಿಜುಲಿ ಅವರು ಬಿಜೆಪಿಯ ರಾಜ್ಯ ಘಟಕದ ಉಪಾಧ್ಯಕ್ಷೆಯಾಗಿಯೂ ಕಾರ್ಯನಿರ್ವಹಿಸಿದ್ದರು. ಮೀರಾ ಅವರು ಅಸ್ಸಾಂ ಪ್ರದೇಶ ಮಹಿಳಾ ಕಾಂಗ್ರೆಸ್‌ನ ಅಧ್ಯಕ್ಷೆಯಾಗಿದ್ದಾರೆ. ಮಣಿಪುರದಲ್ಲಿ ನಡೆಯುತ್ತಿರುವ ಗಲಭೆಯು ಈ ಬಾರಿ ಈ ಕ್ಷೇತ್ರದ ಚುನಾವಣೆಯ ಮೇಲೂ ಪ್ರಭಾವ ಬೀರುವ ಸಾಧ್ಯತೆ ಇದೆ ಎಂದು ವಿಶ್ಲೇಷಿಸಿದ್ದಾರೆ. ಕೇಂದ್ರ ಸರ್ಕಾರದ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಕೂಡ ಇಲ್ಲಿ ಪ್ರಮುಖ ಚುನಾವಣಾ ವಿಚಾರವಾಗಿದೆ. ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ಸಾಧನೆಗಳು ಮತ್ತು ಪ್ರಮುಖ ನಿರ್ಧಾರಗಳನ್ನು ಪ್ರಚಾರ ವಿಷಯವಾಗಿಸಿ ಬಿಜುಲಿ ಅವರು ಮತಯಾಚಿಸುತ್ತಿದ್ದಾರೆ. ಈ ಬಾರಿ ಇಲ್ಲಿನ ಮತದಾರರು ಯಾರ ಪರ ನಿಲ್ಲಲಿದ್ದಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

ಮುಖಾಮುಖಿ

ಲಾತೂರ್ (ಮಹಾರಾಷ್ಟ್ರ)


ಸುಧಾಕರ್ ಶ್ರಂಗಾರೆ
(ಬಿಜೆಪಿ)

ಮಹಾರಾಷ್ಟ್ರದ ಲಾತೂರ್ ಲೋಕಸಭಾ ಕ್ಷೇತ್ರದಿಂದ ಕಳೆದ ಬಾರಿ ಜಯಗಳಿಸಿದ್ದ ಸುಧಾಕರ್ ಶ್ರಂಗಾರೆ ಅವರನ್ನೇ ಬಿಜೆಪಿಯು ಈ ಬಾರಿಯೂ ಕಣಕ್ಕಿಳಿಸಿದೆ. 2019ರ ಚುನಾವಣೆಯಲ್ಲಿ ಸುಧಾಕರ್ ಅವರು 2,89,111 ಮತಗಳ ಅಂತರದಿಂದ ಕಾಂಗ್ರೆಸ್ ಅಭ್ಯರ್ಥಿ ಮಚೀಂದ್ರ ಕಾಮಂತ್ ಅವರನ್ನು ಪರಾಭವಗೊಳಿಸಿದ್ದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಮುಂದಿರಿಸಿಕೊಂಡು ಸುಧಾಕರ್ ಅವರು ಮತಯಾಚಿಸುತ್ತಿದ್ದಾರೆ. ಮರಾಠ ಸಮುದಾಯಕ್ಕೆ ಮೀಸಲಾತಿ ನೀಡಬೇಕೆಂದು ಒತ್ತಾಯಿಸಿ ಮನೋಜ್ ಜರಾಂಗೆ ಅವರು ನಡೆಸುತ್ತಿರುವ ಹೋರಾಟವು ಈ ಕ್ಷೇತ್ರದ ಚುನಾವಣೆಯ ಮೇಲೂ ಪ್ರಭಾವ ಬೀರುವ ಸಾಧ್ಯತೆ ಇದೆ ಎಂದು ಚುನಾವಣಾ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಮರಾಠ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿರುವ ಕ್ಷೇತ್ರ ಇದು.

v/s


ಶಿವಾಜಿ ಕಲ್ಗೆ
(ಕಾಂಗ್ರೆಸ್)

ಸುಧಾಕರ್ ಅವರಿಗೆ ಪೈಪೋಟಿ ನೀಡಲು ಕಾಂಗ್ರೆಸ್ ಪಕ್ಷವು ಶಿವಾಜಿ ಕಲ್ಗೆ ಅವರನ್ನು ಅಖಾಡಕ್ಕಿಳಿಸಿದೆ. ರಾಜಕೀಯದಲ್ಲಿ ಅನನುಭವಿಯಾದರೂ ನೇತ್ರತಜ್ಞರಾಗಿ ಹೆಸರು ಮಾಡಿರುವ ಶಿವಾಜಿ ಅವರು ಕ್ಷೇತ್ರದ ಜನರಿಗೆ ಪರಿಚಿತರು. 'ಇಂಡಿಯಾ' ಒಕ್ಕೂಟದ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವುದು ಅವರ ಗೆಲುವಿನ ವಿಶ್ವಾಸವನ್ನು ಹೆಚ್ಚಿಸಿದೆ. ನೀರಿನ ಸಮಸ್ಯೆ, ನಿರುದ್ಯೋಗ ಮೊದಲಾದ ಜ್ವಲಂತ ಸಮಸ್ಯೆಗಳನ್ನೇ ಪ್ರಮುಖ ಚುನಾವಣಾ ವಿಷಯವಾಗಿಸಿ ಶಿವಾಜಿ ಅವರು ಜನರ ಬಳಿಗೆ ತೆರಳುತ್ತಿದ್ದಾರೆ. ಶಿವಾಜಿ ಅವರ ಪತ್ನಿ ಕೂಡ ಲಾತೂರಿನಲ್ಲಿ ವೈದ್ಯೆಯಾಗಿದ್ದಾರೆ. ಶಿವಾಜಿ ಅವರು ಲಿಂಗಾಯತರಾಗಿದ್ದು, ಈ ಸಮುದಾಯದವರು ಕ್ಷೇತ್ರದಲ್ಲಿ ಗಣನೀಯ ಸಂಖ್ಯೆಯಲ್ಲಿದ್ದಾರೆ. ಇವರ ಮತಗಳ ಮೇಲೆ ಕಣ್ಣಿಟ್ಟು ಕಾಂಗ್ರೆಸ್ ಅಭ್ಯರ್ಥಿಯನ್ನು ಘೋಷಿಸಿದೆ ಎಂಬುದು ಚುನಾವಣಾ ವಿಶ್ಲೇಷಕರ ಅಭಿಪ್ರಾಯ.

ಸೋಮವಾರ, ಮೇ 6, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 126 | ಪುಟ 12

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ವಿದ್ಯಾರ್ಥಿಸ್ನೇಹಿ 'ಬ್ಯಾಗ್‌ಲೆಸ್ ಸ್ಕೂಲ್' ದಿನ



ಆಳ-ಅಗಲ
ಪಶ್ಚಿಮ ಬಂಗಾಳ ಸಂಕಥನಗಳ ಸಂಘರ್ಷ

'ಚುನಾವಣೆ ಎರಡನೇ ಸ್ವಾತಂತ್ರ್ಯ ಸಂಗ್ರಾಮ' 4

'ಕೋರ್ಟ್ ಟೇಪ್ ರೆಕಾರ್ಡರ್ ಅಲ್ಲ' 9

ಐಸಿಎಸ್‌ಇ: ಫಲಿತಾಂಶ ಇಂದು 9

ಪೊಲೀಸರ ಸಮನ್ಸ್ ನಿರ್ಲಕ್ಷಿಸಿ: ಬೋಸ್ 9

ಬಹಿರಂಗಕ್ಕೆ ತೆರೆ; ಅಂತರಂಗಕ್ಕೆ ಮೊರೆ

ಚುನಾವಣೆ: ಕೊನೆಯ ಕ್ಷಣದ ಕಸರತ್ತಿಗೆ ಅಭ್ಯರ್ಥಿಗಳು ಸಜ್ಜು • ಇಂದು ಮನೆ, ಮನೆ ಪ್ರಚಾರಕ್ಕೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸಚಿವರು, ಮಾಜಿ ಮುಖ್ಯಮಂತ್ರಿಗಳು, ಸಚಿವರ ಮಕ್ಕಳು, ಕುಟುಂಬದವರು, ಸಂಬಂಧಿಕರೇ ಹೆಚ್ಚಿನ ಸಂಖ್ಯೆಯಲ್ಲಿ ಕಣದಲ್ಲಿರುವ 14 ಲೋಕಸಭಾ ಕ್ಷೇತ್ರಗಳಲ್ಲಿ ಬಹಿರಂಗ ಚುನಾವಣಾ ಪ್ರಚಾರ ಭಾನುವಾರ ಸಂಜೆ ಮುಗಿದಿದ್ದು, ಮತದಾರರನ್ನು ಸೆಳೆಯುವ ಒಳತಂತ್ರದ ರಾಜಕಾರಣ ತೆರೆದುಕೊಂಡಿದೆ.

ಲೋಕಸಭಾ ಚುನಾವಣೆ ವೇಳಾಪಟ್ಟಿ ಪ್ರಕಟವಾಗಿದ್ದ ಮಾರ್ಚ್ 16ರಿಂದಲೇ ಈ ಕ್ಷೇತ್ರಗಳಲ್ಲಿ ರಾಜಕೀಯ ಚಟುವಟಿಕೆಗಳು ಬಿರುಸಾಗಿದ್ದವು. ಏಪ್ರಿಲ್ 12ರಂದು ಈ ಕ್ಷೇತ್ರಗಳಿಗೆ ಚುನಾವಣಾ ಅಧಿಸೂಚನೆ ಪ್ರಕಟವಾಗಿತ್ತು. ಆ ಬಳಿಕ ಪ್ರಚಾರದ ಕಾವು ಏರಿತ್ತು. ಒಂದೂವರೆ ತಿಂಗಳಿನಿಂದಲೂ ಬಹಿರಂಗ ಸಭೆಗಳು, ರೋಡ್ ಶೋ ಮೂಲಕ ಮತದಾರರ ಮನವೊಲಿಕೆ ಕಸರತ್ತು ನಡೆದಿತ್ತು.

ಎಲ್ಲ 14 ಕ್ಷೇತ್ರಗಳಲ್ಲೂ ಕಾಂಗ್ರೆಸ್– ಬಿಜೆಪಿ ಮಧ್ಯೆ ನೇರ ಹಣಾಹಣಿ ಇದೆ. ಏಪ್ರಿಲ್ 26ರಂದು ನಡೆದ ರಾಜ್ಯದ ಮೊದಲ ಹಂತದ ಚುನಾವಣೆಯಲ್ಲಿ 14 ಕ್ಷೇತ್ರಗಳಲ್ಲಿ ಮತದಾನ ನಡೆದಿತ್ತು. ಆ ಬಳಿಕ ಎರಡೂ ಪಕ್ಷಗಳ ರಾಷ್ಟ್ರ ಮತ್ತು ರಾಜ್ಯಮಟ್ಟದ ನಾಯಕರು ಉತ್ತರದ 14 ಕ್ಷೇತ್ರಗಳಲ್ಲಿ ಪ್ರಚಾರಕ್ಕೆ ಧುಮುಕಿದ್ದರು.

4ನೇ ಪುಟ ನೋಡಿ

ಸದ್ದು ಮಾಡಿದ ವಿಷಯಗಳು

ಕಾಂಗ್ರೆಸ್

- ತೆರಿಗೆ ಪಾಲು ಮತ್ತು ಅನುದಾನದ ಹಂಚಿಕೆಯಲ್ಲಿ ರಾಜ್ಯಕ್ಕೆ ಅನ್ಯಾಯ
- ಬಿಜೆಪಿ ಮತ್ತೆ ಅಧಿಕಾರ ಹಿಡಿದರೆ ಸಂವಿಧಾನಕ್ಕೆ ಅಪಾಯ ಎಂಬ ಆರೋಪ
- ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಬಿಜೆಪಿ ನಾಯಕರ ಮೌನ ಕುರಿತು ಪ್ರಶ್ನೆ

ಬಿಜೆಪಿ

- ಹುಬ್ಬಳ್ಳಿಯಲ್ಲಿ ಕಾಲೇಜು ವಿದ್ಯಾರ್ಥಿನಿ ನೇಹಾ ಹಿರೇಮಠ ಕೊಲೆ ಪ್ರಕರಣ
- ಒಬಿಸಿ ಮೀಸಲಾತಿ ಕಿತ್ತು ಮುಸ್ಲಿಮರಿಗೆ ನೀಡಲು ಕಾಂಗ್ರೆಸ್ ಯತ್ನಿಸುತ್ತಿದೆ ಎಂಬ ಆರೋಪ
- ಹಿಂದೂಗಳ ಆಸ್ತಿಯನ್ನು ವಶಕ್ಕೆ ಪಡೆದು ಅಲ್ಪಸಂಖ್ಯಾತರಿಗೆ ಹಂಚಲು ಕಾಂಗ್ರೆಸ್ ಮುಂದಾಗಿದೆ ಎಂಬ ಆರೋಪ

ಏಟು– ಎದಿರೇಟು

ಉತ್ತರದ 14 ಕ್ಷೇತ್ರಗಳ ಚುನಾವಣಾ ಪ್ರಚಾರದಲ್ಲಿ ಹಲವು ವಿಷಯಗಳು ಸದ್ದು ಮಾಡಿದವು. ಹುಬ್ಬಳ್ಳಿಯಲ್ಲಿ ನಡೆದ ನೇಹಾ ಹಿರೇಮಠ ಕೊಲೆ ಪ್ರಕರಣ ಆರಂಭದಲ್ಲಿ ಹೆಚ್ಚು ಪ್ರಸ್ತಾಪವಾಗಿತ್ತು. ಈ ವಿಷಯವನ್ನೇ ಮುಂದಿಟ್ಟುಕೊಂಡು ಕಾಂಗ್ರೆಸ್ ಪಕ್ಷವನ್ನು ಕಟ್ಟಿಹಾಕಲು ಬಿಜೆಪಿ ನಾಯಕರು ಯತ್ನಿಸಿದ್ದರು.

ಹಾಸನ ಸಂಸದ ಪ್ರಜ್ವಲ್ ರೇವಣ್ಣ ಹಲವು ಮಹಿಳೆಯರ ಮೇಲೆ ದೌರ್ಜನ್ಯ ನಡೆಸಿದ್ದಾರೆ ಎಂಬ ಆರೋಪ ಚುನಾವಣಾ ಪ್ರಚಾರದ ಕೊನೆಯ ದಿನಗಳಲ್ಲಿ ಹೆಚ್ಚು ಪ್ರತಿಧ್ವನಿಸಿತು. ಈ ಪ್ರಕರಣದ ಕುರಿತು ಜೆಡಿಎಸ್‌ನ ಮಿತ್ರಪಕ್ಷ ಬಿಜೆಪಿಯನ್ನೇ ಗುರಿಯಾಗಿಸಿಕೊಂಡು ವಾಗ್ದಾಳಿ ನಡೆಸಿದ ಕಾಂಗ್ರೆಸ್ ನಾಯಕರು, 'ಕಮಲ ಪಾಳಯ'ವನ್ನು ಇಕ್ಕಟ್ಟಿಗೆ ಸಿಲುಕಿಸಲು ಪ್ರಯತ್ನಿಸಿದ್ದರು.

ಅಖಾಡದಲ್ಲಿ ಘಟಾನುಘಟಿಗಳು

ಮಂಗಳವಾರ (ಮೇ 7) ಮತದಾನ ನಡೆಯುವ ಕ್ಷೇತ್ರಗಳಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಭಗವಂತ ಖೂಬಾ ಸೇರಿದಂತೆ ಘಟಾನುಘಟಿ ನಾಯಕರು ಸ್ಪರ್ಧಿಸಿದ್ದಾರೆ.

ರಾಜ್ಯದ ನಾಲ್ವರು ಸಚಿವರ ಮಕ್ಕಳು, ಒಬ್ಬ ಸಚಿವರ ಪತ್ನಿ, ಒಬ್ಬ ಸಚಿವರ ಸಹೋದರಿ, ಹಾಲಿ ಸಂಸದರು, ಅವರ ಕುಟುಂಬದ ಸದಸ್ಯರು ಸ್ಪರ್ಧೆಯಲ್ಲಿದ್ದಾರೆ. ಅಭ್ಯರ್ಥಿಗಳ ಗೆಲುವಿನ ಜತೆಯಲ್ಲೇ ಹಲವು ನಾಯಕರ ರಾಜಕೀಯ ಭವಿಷ್ಯದ ಪ್ರಶ್ನೆಯೂ ಅಡಗಿದೆ.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಮಗ ಹಾಗೂ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಅಣ್ಣ ಬಿ.ವೈ. ರಾಘವೇಂದ್ರ ಸ್ಪರ್ಧಿಸಿದ್ದು, ಪ್ರತಿಷ್ಠೆಯ ಕಣವಾಗಿದೆ.



ಎಚ್.ಡಿ.ರೇವಣ್ಣ ಅವರನ್ನು ಬೆಂಗಳೂರಿನ ಕೋರಮಂಗಲದಲ್ಲಿರುವ ನ್ಯಾಯಾಧೀಶರ ಮನೆಗೆ ಎಸ್‌ಐಟಿ ಅಧಿಕಾರಿಗಳು ಭಾನುವಾರ ಹಾಜರುಪಡಿಸಿದರು –ಪ್ರಜಾವಾಣಿ ಚಿತ್ರ / ರಂಜು ಪಿ.

ಎಸ್‌ಐಟಿ ಕಸ್ಟಡಿಗೆ ರೇವಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅತ್ಯಾಚಾರ ಸಂತ್ರಸ್ತೆ ಅಪಹರಣ' ಪ್ರಕರಣದಲ್ಲಿ ಬಂಧಿಸಲಾಗಿರುವ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ (64) ಅವರನ್ನು ಹೆಚ್ಚಿನ ವಿಚಾರಣೆಗಾಗಿ ಇದೇ 8ರವರೆಗೆ ಎಸ್‌ಐಟಿ ಅಧಿಕಾರಿಗಳ ಕಸ್ಟಡಿಗೆ ಒಪ್ಪಿಸಲಾಗಿದೆ.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರ ಪದ್ಮನಾಭ ನಗರದ ಮನೆಯಲ್ಲಿ ಶನಿವಾರ ಸಂಜೆ ಬಂಧಿಸಲಾಗಿದ್ದ ರೇವಣ್ಣ ಅವರನ್ನು ಎಸ್‌ಐಟಿ ಅಧಿಕಾರಿಗಳು ಕೋರಮಂಗಲದಲ್ಲಿರುವ ನ್ಯಾಯಾಧೀಶರ ಮನೆಗೆ ಭಾನುವಾರ ಸಂಜೆ ಹಾಜರುಪಡಿಸಿದರು.

'ಇದು ಗಂಭೀರ ಪ್ರಕರಣ. ಪ್ರಮುಖ ಸಂತ್ರಸ್ತೆಯನ್ನೇ ಅಪಹರಣ ಮಾಡಿ ಅಕ್ರಮ ಬಂಧನದಲ್ಲಿಡಲಾಗಿತ್ತು' ಎಂದು ಎಸ್‌ಐಟಿ ಪರ ವಕೀಲರು ವಾದಿಸಿದರು.

4ನೇ ಪುಟ ನೋಡಿ

ಇನ್ನೂ ಪತ್ತೆಯಾಗದ ಪ್ರಜ್ವಲ್

ಲೈಂಗಿಕ ದೌರ್ಜನ್ಯ ಪ್ರಕರಣದ ಪ್ರಮುಖ ಆರೋಪಿಯಾದ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪತ್ತೆಗಾಗಿ ಎಸ್‌ಐಟಿ ಅಧಿಕಾರಿಗಳ ವಿಶೇಷ ತಂಡಗಳು ಕಾರ್ಯಾಚರಣೆ ಆರಂಭಿಸಿದ್ದು, ರಾಜ್ಯದ ವಿಮಾನ ನಿಲ್ದಾಣಗಳಲ್ಲಿ ನಿಗಾ ವಹಿಸಿದ್ದಾರೆ.

ಪೆನ್‌ಡ್ರೈವ್ ವಿಡಿಯೊಗಳು ಎಲ್ಲೆಡೆ ಹರಿದಾಡುತ್ತಿದ್ದಂತೆ ತಲೆಮರೆಸಿಕೊಂಡು ಜರ್ಮನಿಗೆ ಹೋಗಿದ್ದ ಪ್ರಜ್ವಲ್ ಸದ್ಯ ದುಬೈನಲ್ಲಿ ಇರುವ ಮಾಹಿತಿ ಲಭ್ಯವಾಗಿದೆ. ತಂದೆ ಎಚ್.ಡಿ.ರೇವಣ್ಣ ಬಂಧನವಾಗುತ್ತಿದ್ದಂತೆ, ಪ್ರಜ್ವಲ್ ದುಬೈನಿಂದ ಕರ್ನಾಟಕಕ್ಕೆ ಭಾನುವಾರ ವಾಪಸ್ ಬರುತ್ತಿರುವ ಬಗ್ಗೆ ಸುದ್ದಿಗಳು ಹರಿದಾಡಿದ್ದವು.

4ನೇ ಪುಟ ನೋಡಿ

ಸಂಸದರ ಸರ್ಕಾರಿ ನಿವಾಸ ಎಸ್‌ಐಟಿ ವಶಕ್ಕೆ

ಹಾಸನ: ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆಯೊಬ್ಬರ ಮೇಲೆ ಪ್ರಜ್ವಲ್ ಅತ್ಯಾಚಾರ ಎಸಗಿದ್ದಾರೆ ಎನ್ನಲಾದ ಇಲ್ಲಿನ ಸಂಸದರ ಸರ್ಕಾರಿ ನಿವಾಸವನ್ನು ಎಸ್‌ಐಟಿ ತಂಡವು ವಶಕ್ಕೆ ಪಡೆದಿದೆ. ಶನಿವಾರ ಸಂತ್ರಸ್ತೆಯೊಂದಿಗೆ ಸಂಸದರ ನಿವಾಸದಲ್ಲಿ ಸ್ಥಳ ಮಹಜರು ಕೈಗೊಂಡು ಮಧ್ಯರಾತ್ರಿವರೆಗೂ ಪರಿಶೀಲನೆ ಮುಂದುವರಿಸಿದ್ದ ಅಧಿಕಾರಿಗಳು, ಭಾನುವಾರ ಬೆಳಿಗ್ಗೆ ನಿವಾಸಕ್ಕೆ ಬೀಗ ಹಾಕಿ ವಶಕ್ಕೆ ಪಡೆದರು.

4ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



108 ಆಂಬುಲೆನ್ಸ್ ಸಿಬ್ಬಂದಿ ಮುಷ್ಕರ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಕಿ ಉಳಿಸಿಕೊಂಡಿರುವ ವೇತನ ಪಾವತಿಗೆ ಆಗ್ರಹಿಸಿ '108- ಆರೋಗ್ಯ ಕವಚ' ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಸೋಮವಾರ ರಾತ್ರಿ 8 ಗಂಟೆಯಿಂದ ಮುಷ್ಕರ ಹಮ್ಮಿಕೊಂಡಿದ್ದಾರೆ. ಇದರಿಂದಾಗಿ ಆಂಬುಲೆನ್ಸ್ ಸೇವೆಯಲ್ಲಿ ವ್ಯತ್ಯಯವಾಗುವ ಸಾಧ್ಯತೆಯಿದೆ.



ಯೋಜನೆಯನ್ನು ಜಿವಿಕೆ–ಇಎಂಆರ್‌ಐ ಸಂಸ್ಥೆ ನಿರ್ವಹಿಸುತ್ತಿದ್ದು, 2,500 ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. 'ನಿಗದಿ ಪಡಿಸಿದ ವೇತನದಲ್ಲಿ ಡಿಸೆಂಬರ್ ಹಾಗೂ ಜನವರಿ ತಿಂಗಳಲ್ಲಿ ಅರ್ಧದಷ್ಟು ವೇತನ ಮಾತ್ರ ನೀಡಲಾಗಿದ್ದು, ಕಳೆದ 3 ತಿಂಗಳಿಂದ ವೇತನ ಪಾವತಿಸಿಲ್ಲ' ಎಂದು ಆರೋಪಿಸಿರುವ ಸಿಬ್ಬಂದಿ, ಅನಿರ್ದಿಷ್ಟಾವಧಿ ಮುಷ್ಕರಕ್ಕೆ ನಿರ್ಧರಿಸಿದ್ದಾರೆ.

ಬಾಕಿ ವೇತನ ಪಾವತಿಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆ ಹಾಗೂ ಸಂಸ್ಥೆ ಸೋಮವಾರ ಕ್ರಮ ಕೈಗೊಂಡಲ್ಲಿ ಮುಷ್ಕರದಿಂದ ಹಿಂದೆ ಸರಿಯುವುದಾಗಿ 108 ನೌಕರರ ಸಂಘ ತಿಳಿಸಿದೆ.

ಕುಸ್ತಿಪಟು ಬಜರಂಗ್ ಅಮಾನತು

ನವದೆಹಲಿ (ಪಿಟಿಐ): ಉದ್ದೀಪನ ಮದ್ದು ಸೇವನೆ ಪರೀಕ್ಷೆಗಾಗಿ ತಮ್ಮ ಮೂತ್ರದ ಮಾದರಿ ನೀಡಲು ನಿರಾಕರಿಸಿದ ಒಲಿಂಪಿಯನ್ ಬಜರಂಗ್ ಪೂನಿಯಾ ಅವರನ್ನು ತಾತ್ಕಾಲಿಕವಾಗಿ ಅಮಾನತು ಮಾಡಲಾಗಿದೆ.

ನಾಡಾ (ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ) ತೆಗೆದುಕೊಂಡಿರುವ ಈ ಕ್ರಮಕ್ಕೆ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಸಮಾಧಾನ ವ್ಯಕ್ತಪಡಿಸಿದೆ. ಏಪ್ರಿಲ್ 23ರಂದು ಬಜರಂಗ್ ಅವರನ್ನು ಅಮಾನತು ಗೊಳಿಸಿದ್ದರೂ ನಾಡಾದಿಂದ ತಮಗೆ ಯಾವುದೇ ಮಾಹಿತಿ ಬಂದಿಲ್ಲವೆಂದು ಡಬ್ಲ್ಯುಎಫ್‌ಐ ಆಕ್ರೋಶ ವ್ಯಕ್ತಪಡಿಸಿದೆ.



ಬಜರಂಗ್ ಪೂನಿಯಾ

ಈ ಕುರಿತು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಬಜರಂಗ್, 'ಮಾದರಿ ನೀಡಲು ನಾನು ನಿರಾಕರಿಸಿಲ್ಲ. ಆದರೆ ಮಾದರಿ ಸಂಗ್ರಹಿಸಲು ಸಿಬ್ಬಂದಿಯು ಅವಧಿ ಮೀರಿದ ಕಿಟ್ ತಂದಿದ್ದರು. ಆ ಕುರಿತು ಮೊದಲು ಸ್ಪಷ್ಟನೆ ನೀಡಿ ನಂತರ ಮಾದರಿ ತೆಗೆದು ಕೊಳ್ಳುವಂತೆ ಕೋರಿದ್ದೆ' ಎಂದು ಬರೆದಿದ್ದಾರೆ.

ಮಾದರಿ ಸಂಗ್ರಹಕ್ಕಾಗಿ ತಂದಿದ್ದ ಅವಧಿ ಮೀರಿದ ಕಿಟ್‌ಗಳ ವಿಡಿಯೊವನ್ನೂ ಬಜರಂಗ್ ಅವರು ಪೋಸ್ಟ್ ಮಾಡಿದ್ದಾರೆ.

'ನಾಡಾದ ಕ್ರಮಕ್ಕೆ ನಮ್ಮ ವಕೀಲರಾದ ವಿದುಷ್ ಸಿಂಘಾನಿಯಾ ಉತ್ತರಿಸುತ್ತಾರೆ' ಎಂದೂ ಬಜರಂಗ್ ಸ್ಪಷ್ಟಪಡಿಸಿದ್ದಾರೆ.

ಪೊಲೀಸ್ ಠಾಣೆ ಮೆಟ್ಟಿಲೇರಿದ ನಿವೃತ್ತ ವಿಂಗ್ ಕಮಾಂಡರ್ • ತನಿಖೆಗೆ ಚಾಲನೆ

ತರಬೇತಿ ನೆಪ: ₹3.45 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉದ್ಯಮಶೀಲತೆ ತರಬೇತಿ ಹೆಸರಿನಲ್ಲಿ ₹ 3.45 ಲಕ್ಷ ಪಡೆದಿದ್ದ 'ಥಾಟ್ ಕ್ಯಾಪಿಟಲ್' ಕಂಪನಿಯ ಸಂಸ್ಥಾಪಕ ರೋನಾಲ್ಡ್ ರಾಜ್, ಪೂರ್ಣ ತರಬೇತಿ ನೀಡದೇ ವಂಚಿಸಿದ್ದಾರೆ' ಎಂದು ಆರೋಪಿಸಿ ವಾಯುಸೇನೆಯ ನಿವೃತ್ತ ವಿಂಗ್ ಕಮಾಂಡರ್‌ವೊಬ್ಬರು ನೀಡಿರುವ ದೂರು ಆಧರಿಸಿ ಅಶೋಕನಗರ ಠಾಣೆ ಪೊಲೀಸರು ತನಿಖೆ ಆರಂಭಿಸಿದ್ದಾರೆ.

'ದೊಮ್ಮಲೂರಿನ ನಿವೃತ್ತ ವಿಂಗ್ ಕಮಾಂಡರ್ ಅವರು ಹಲಸೂರು ಠಾಣೆಗೆ ದೂರು ನೀಡಿದ್ದರು. ಕೃತ್ಯ ನಡೆದ ಸ್ಥಳದ ಆಧಾರದಲ್ಲಿ ಪ್ರಕರಣವನ್ನು ಅಶೋಕನಗರ ಠಾಣೆಗೆ ವರ್ಗಾಯಿಸಲಾಗಿದೆ. ಹೀಗಾಗಿ, ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರರು 2011ರಲ್ಲಿ ನಿವೃತ್ತರಾಗಿದ್ದರು. ಸ್ವಂತ ಉದ್ಯಮ ಆರಂಭಿಸಲು ಉದ್ದೇಶಿಸಿ, ಯಾವ ಉದ್ಯಮ ಆರಂಭಿಸುವುದು ಎಂಬುದರ ಬಗ್ಗೆ ಆನ್‌ಲೈನ್‌ನಲ್ಲಿ ಮಾಹಿತಿ ಹುಡುಕಾಡುತ್ತಿದ್ದರು. ಅಶೋಕನಗರ ಬಳಿಯ ಹೋಟೆಲ್‌ವೊಂದರಲ್ಲಿ ರೋನಾಲ್ಡ್ ರಾಜ್ ಏರ್ಪಡಿಸಿದ್ದ 'ಉದ್ಯಮಶೀಲತೆ ತರಬೇತಿ' ಬಗ್ಗೆ ಗೊತ್ತಾಗಿತ್ತು. ₹ 28,325 ಪಾವತಿಸಿ ಮೂರು ದಿನಗಳ ತರಬೇತಿಯಲ್ಲಿ ಭಾಗವಹಿಸಿದ್ದರು' ಎಂದು ಪೊಲೀಸರು ತಿಳಿಸಿದರು.

'ತರಬೇತಿಯ ಕೊನೆ ದಿನದಂದು ಮಾತನಾಡಿದ ರೋನಾಲ್ಡ್, '52 ವಾರಗಳಲ್ಲಿ 52 ಗಂಟೆಗಳ ವಿಶೇಷ ತರಬೇತಿ ಇದೆ. ಅಮೆರಿಕದಿಂದ ತರಬೇತಿ ಆಯೋಜಿಸಲಾಗುತ್ತಿದ್ದು, ಇದಕ್ಕೆ ಸಂಬಂಧಪಟ್ಟ ಆಡಿಯೊ ಹಾಗೂ ವಿಡಿಯೊಗಳನ್ನು ಹಂಚಿಕೆ ಮಾಡಲಾಗುವುದು. ತರಬೇತಿ ಶುಲ್ಕವಾಗಿ ₹ 3.50 ಲಕ್ಷ ಪಾವತಿಸಬೇಕು' ಎಂದಿದ್ದರು. ಅದನ್ನು ನಂಬಿದ್ದ ದೂರುದಾರ, ₹ 3.45 ಲಕ್ಷ ಪಾವತಿಸಿದ್ದರು.'

'17 ದಿನ ಮಾತ್ರ ತರಬೇತಿ ನೀಡಿದ್ದ ಆರೋಪಿ, ನಂತರ ಆನ್‌ಲೈನ್ ಮೂಲಕ ತರಬೇತಿ ನೀಡುವುದಾಗಿ ಹೇಳಿದ್ದರು. ಆದರೆ, ಆನ್‌ಲೈನ್ ಮೂಲಕ ತರಬೇತಿ ಮುಂದುವರಿಸಿರಲಿಲ್ಲ. ಈ ಬಗ್ಗೆ ಪ್ರಶ್ನಿಸಿದಾಗ, 'ಅಮೆರಿಕದ ಕಂಪನಿ ಜೊತೆಗಿನ ಒಪ್ಪಂದ ರದ್ದಾಗಿದೆ. ತರಬೇತಿ ಸಾಧ್ಯವಿಲ್ಲ' ಎಂದು ಹೇಳಿದ್ದರು. ಇದೇ ಕಾರಣಕ್ಕೆ ದೂರುದಾರ, ಹಣ ಪಡೆದರೂ ಆರೋಪಿ ಪೂರ್ಣಪ್ರಮಾಣದಲ್ಲಿ ತರಬೇತಿ ನೀಡಿಲ್ಲವೆಂದು ಆರೋಪಿಸುತ್ತಿದ್ದಾರೆ. ರೋನಾಲ್ಡ್ ಅವರನ್ನು ವಿಚಾರಣೆ ನಡೆಸಬೇಕಿದೆ' ಎಂದು ಪೊಲೀಸರು ಹೇಳಿದರು.

ಹಣ ನೀಡದಿದ್ದಕ್ಕೆ ಟೆಕಿ ಅಡ್ಡಗಟ್ಟಿ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣ ನೀಡಲಿಲ್ಲವೆಂಬ ಕಾರಣಕ್ಕೆ ಸಾಫ್ಟ್‌ವೇರ್ ಎಂಜಿನಿಯರ್‌ವೊಬ್ಬರನ್ನು (ಟೆಕಿ) ಅಡ್ಡಗಟ್ಟಿ ಬೆದರಿಕೆಯೊಡ್ಡಲಾಗಿದ್ದು, ಕೃತ್ಯ ಎಸಗಿದ್ದ ಲಿಂಗತ್ವ ಅಲ್ಪಸಂಖ್ಯಾತರೊಬ್ಬರ ವಿರುದ್ಧ ಪ್ರಕರಣ ದಾಖಲಾಗಿದೆ.

'ಏಪ್ರಿಲ್ 28ರಂದು ಬೆಳಿಗ್ಗೆ ನಡೆದಿರುವ ಘಟನೆ ಸಂಬಂಧ ಹೊಸೂರು ರಸ್ತೆಯ ಅಹಮ್ಮದ್ ಎಂಬುವವರು ದೂರು ನೀಡಿದ್ದಾರೆ. ಅಪರಿಚಿತ ಲಿಂಗತ್ವ ಅಲ್ಪಸಂಖ್ಯಾತರೊಬ್ಬರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ ತಮ್ಮ ಕುಟುಂಬದ ಜೊತೆ ಕಾರಿನಲ್ಲಿ ಶೋಲೆ ವೃತ್ತಕ್ಕೆ ಹೋಗಿದ್ದರು. ಇದೇ ಸಂದರ್ಭದಲ್ಲಿ ಸ್ಥಳಕ್ಕೆ ಬಂದಿದ್ದ ಆರೋಪಿ, ಹಣ ಕೇಳಿದ್ದರು. ದೂರುದಾರ ಹಣ ಕೊಟ್ಟಿರಲಿಲ್ಲ. ಆರೋಪಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಅದನ್ನು ನಿರ್ಲಕ್ಷಿಸಿದ್ದ ದೂರುದಾರ, ಸ್ಥಳದಿಂದ ಹೊರಟಿದ್ದರು. ಆಟೊದಲ್ಲಿ ಹಿಂಬಾಲಿಸಿದ್ದ ಆರೋಪಿ, ಮಾರ್ಗಮಧ್ಯೆ ಅಡ್ಡಗಟ್ಟಿ ಪುನಃ ಜಗಳ ತೆಗೆದು ಬೆದರಿಸಿದ್ದರು. ನಂತರ, ಆರೋಪಿ ಸ್ಥಳದಿಂದ ಹೊರಟು ಹೋಗಿದ್ದಾರೆ' ಎಂದು ತಿಳಿಸಿದರು.

ಕ್ರೆಡಿಟ್ ಕಾರ್ಡ್ ನವೀಕರಣ ಹೆಸರಿನಲ್ಲಿ ಉದ್ಯೋಗಿಗೆ ವಂಚನೆ

ಬೆಂಗಳೂರು: ಕ್ರೆಡಿಟ್ ಕಾರ್ಡ್ ನವೀಕರಣ ಮಾಡಬೇಕೆಂದು ಹೇಳಿ ಕಂಪನಿಯೊಂದರ ಉದ್ಯೋಗಿಯಿಂದ ವೈಯಕ್ತಿಕ ಮಾಹಿತಿ ಪಡೆದು ಬ್ಯಾಂಕ್ ಖಾತೆಯಿಂದ ಹಣ ದೋಚಲಾಗಿದ್ದು, ಅಶೋಕನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಸೇಂಟ್ ಜಾನ್ಸ್ ರಸ್ತೆಯ ಆದಿತ್ಯ ಅವರು ವಂಚನೆ ಸಂಬಂಧ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಮೊಬೈಲ್ ನಂಬರ್ ಆಧರಿಸಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ ಆದಿತ್ಯ ಅವರು ಮೇ 2ರಂದು ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಸಂಜೆ 4 ಗಂಟೆ ಸುಮಾರಿಗೆ ಅವರ ಮೊಬೈಲ್‌ಗೆ 708****472 ಸಂಖ್ಯೆಯಿಂದ ಕರೆ ಬಂದಿತ್ತು. ಬ್ಯಾಂಕ್ ಪ್ರತಿನಿಧಿ ಹೆಸರಿನಲ್ಲಿ ಮಾತನಾಡಿದ್ದ ಆರೋಪಿ, 'ನಿಮ್ಮ ಕ್ರೆಡಿಟ್ ಕಾರ್ಡ್ ಅವಧಿ ಮುಗಿಯುತ್ತಿದೆ. ಅದನ್ನು ನವೀಕರಣ ಮಾಡಬೇಕು. ಇಲ್ಲದಿದ್ದರೆ, ಕಾರ್ಡ್ ನಿಷ್ಕ್ರಿಯಗೊಳ್ಳಲಿದೆ' ಎಂದಿದ್ದರು. ಅದನ್ನು ನಂಬಿದ್ದ ದೂರುದಾರ, ಕಾರ್ಡ್ ಮಾಹಿತಿ ಹಾಗೂ ಒಟಿಪಿ (ಒನ್ ಟೈಂ ಪಾಸ್‌ವರ್ಡ್) ನೀಡಿದ್ದರು' ಎಂದು ಪೊಲೀಸರು ತಿಳಿಸಿದರು.

'ಕೆಲ ಕ್ಷಣಗಳ ನಂತರ ದೂರುದಾರರ ಬ್ಯಾಂಕ್ ಖಾತೆಯಿಂದ ಹಂತ ಹಂತವಾಗಿ ₹ 99,440 ಕಡಿತಗೊಂಡಿದೆ. ಆರೋಪಿ ಮೊಬೈಲ್‌ಗೆ ಕರೆ ಮಾಡಿದಾಗ, ಸ್ವಿಚ್ ಆಫ್ ಆಗಿತ್ತು. ಹೊರ ರಾಜ್ಯದ ವ್ಯಕ್ತಿಗಳು ಕೃತ್ಯ ಎಸಗಿರುವ ಮಾಹಿತಿ ಇದೆ' ಎಂದು ಹೇಳಿದರು.

ಅಪರಾಧ ಸುದ್ದಿ

ನಾಯಿಗಳಿಗೆ ಊಟ: ಅಡ್ಡಿಪಡಿಸಿದ್ದಕ್ಕೆ ದೂರು ನೀಡಿದ ಮಹಿಳೆ

ಬೆಂಗಳೂರು: ನಾಯಿಗಳಿಗೆ ಊಟ ಹಾಕುತ್ತಿದ್ದ ಸಂದರ್ಭದಲ್ಲಿ ಅಡ್ಡಿಪಡಿಸಿದರೆಂಬ ಕಾರಣಕ್ಕೆ ಭದ್ರತಾ ಸಿಬ್ಬಂದಿ ಮೇಲೆ ಮಹಿಳೆಯೊಬ್ಬರು ದೂರು ನೀಡಿದ್ದು, ಅಶೋಕನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಪುಣೆಯ ಮಹಿಳೆ, ನಗರದಲ್ಲಿ ಆಯೋಜಿಸಿದ್ದ ಓಟದ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಬಂದಿದ್ದರು. ಏಪ್ರಿಲ್ 4ರಂದು ಬೆಳಿಗ್ಗೆ ನಡೆದಿರುವ ಘಟನೆ ಸಂಬಂಧ ಅವರು ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಿದಾಗ, ಮಹಿಳೆಯ ಆರೋಪಕ್ಕೆ ಯಾವುದೇ ಪುರಾವೆಗಳು ಸಿಕ್ಕಿಲ್ಲ' ಎಂದು ಪೊಲೀಸರು ಹೇಳಿದರು.

'ಬ್ರಿಗೇಡ್ ರಸ್ತೆ ಬಳಿಯ ಸ್ಯಾಮ್‌ಸಂಗ್ ಹೌಸ್ ಮಳಿಗೆ ಸಮೀಪದಲ್ಲಿ ಓಡಾಡುತ್ತಿದ್ದ ನಾಯಿಗಳಿಗೆ ಮಹಿಳೆ ಆಹಾರ ಹಾಕಿದ್ದರು. ಸ್ಥಳದಲ್ಲಿದ್ದ ಭದ್ರತಾ ಸಿಬ್ಬಂದಿ, ಮಹಿಳೆಯನ್ನು ಪ್ರಶ್ನಿಸಿದ್ದರು. ಊಟ ಹಾಕದಂತೆ ತಾಕೀತು ಮಾಡಿದ್ದರು. ಜೊತೆಗೆ, ಎದೆಗೆ ಕೈಯಿಂದ ಒತ್ತಿ ತಳ್ಳಿದ್ದರೆಂದು ಮಹಿಳೆ ಆರೋಪಿಸಿದ್ದರು' ಎಂದು ಪೊಲೀಸರು ತಿಳಿಸಿದರು.

'ಮಹಿಳೆ ದೂರಿನಡಿ ಪ್ರಕರಣ ದಾಖಲಿಸಿಕೊಂಡು, ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಯಿತು. ಆದರೆ, ಮಹಿಳೆಯನ್ನು ತಳ್ಳಾಡಿದ್ದ ದೃಶ್ಯ ಇರಲಿಲ್ಲ. ಪರಸ್ಪರ ಮಾತಿನ ಚಕಮಕಿ ನಡೆದಿದ್ದು ಮಾತ್ರ ಸೆರೆಯಾಗಿದೆ. ಮಹಿಳೆ ಮಾಡಿರುವ ಆರೋಪ ಸುಳ್ಳು ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದ್ದು, ಕ್ಯಾಮೆರಾ ದೃಶ್ಯ ಆಧರಿಸಿ ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

ಭೂ ವ್ಯವಹಾರಕ್ಕೂ ನನಗೂ ಸಂಬಂಧವಿಲ್ಲ: ಮೈಲಾರಪ್ಪ

ಬೆಂಗಳೂರು: 'ಭೂ ವ್ಯವಹಾರಕ್ಕೆ ಸಂಬಂಧಿಸಿದಂತೆ ಹೈದರಾಬಾದ್‌ನಲ್ಲಿ ದಾಖಲಾಗಿರುವ ಪ್ರಕರಣಕ್ಕೂ ನನಗೂ ಸಂಬಂಧವಿಲ್ಲ. 40 ವರ್ಷಗಳ ಶೈಕ್ಷಣಿಕ ವೃತ್ತಿ ಜೀವನದ ಅವಧಿಯಲ್ಲಿ ಯಾವತ್ತೂ ರಿಯಲ್ ಎಸ್ಟೇಟ್ ವ್ಯವಹಾರ ನಡೆಸಿಲ್ಲ' ಎಂದು ಬೆಂಗಳೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ಪ್ರಾಧ್ಯಾಪಕ ಪ್ರೊ.ಬಿ.ಸಿ. ಮೈಲಾರಪ್ಪ ತಿಳಿಸಿದ್ದಾರೆ.

ಪ್ರಕರಣದ ಬಗ್ಗೆ ಪತ್ರಿಕೆಯಲ್ಲಿ ಪ್ರಕಟವಾದ ವರದಿ ಕುರಿತು ಪ್ರತಿಕ್ರಿಯಿಸಿರುವ ಅವರು, 'ಹೈದರಾಬಾದ್ ಪೊಲೀಸ್ ಠಾಣೆಯಲ್ಲಿ 2023ರಲ್ಲೇ ಪ್ರಕರಣ ದಾಖಲಾಗಿತ್ತು. ಆ ಪ್ರಕರಣದಲ್ಲಿ ಜಮೀನು ಮಾರುವವರು ಮತ್ತು ಖರೀದಿದಾರರ ಮಧ್ಯೆ ಹಣಕಾಸಿನ ವ್ಯವಹಾರ ನಡೆದಿತ್ತು. ನಾನು ಮಾರಾಟಗಾರರ ಪರವಾಗಿ ಮಧ್ಯ ಪ್ರವೇಶಿಸಿ ಬೆದರಿಕೆ ಹಾಕಿದ್ದೇನೆ ಎಂಬ ಆರೋಪದಲ್ಲಿ ಹುರುಳಿಲ್ಲ' ಎಂದು ಹೇಳಿದ್ದಾರೆ.

'ನನ್ನ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣ ದಾಖಲಾಗಿಲ್ಲ. ಮುಚ್ಚಳಿಕೆ ಪತ್ರಕ್ಕೆ ಸಹಿ ಹಾಕುವುದಕ್ಕಾಗಿ ಹೈದರಾಬಾದ್‌ನ ಪೊಲೀಸರು ಅಲ್ಲಿಗೆ ಕರೆದೊಯ್ದಿದ್ದರು' ಎಂದು ಅವರು ತಿಳಿಸಿದ್ದಾರೆ.

ಬ್ಯಾಂಕಾಕ್‌ನಿಂದ ತಂದಿದ್ದ ₹97 ಲಕ್ಷದ ಗಾಂಜಾ ವಶ



ದೇವನಹಳ್ಳಿ: ವಿದೇಶಿ ಮೂಲದ ಅಡುಗೆ ಸಾಮಗ್ರಿ ಬಾಕ್ಸ್‌ನಲ್ಲಿ ಗಾಂಜಾ ಕಳ್ಳ ಸಾಗಣೆ ಮಾಡಲು ಯತ್ನಿಸಿದ ಪ್ರಯಾಣಿಕ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಿಕ್ಕಿ ಬಿದ್ದಿದ್ದಾನೆ.

ಏಪ್ರಿಲ್ 3ರ ರಾತ್ರಿ ಬ್ಯಾಂಕಾಕ್‌ನಿಂದ ಬಂದಿಳಿದ ಪ್ರಯಾಣಿಕ ತನ್ನೊಂದಿಗೆ 2.08 ಕೆ.ಜಿಯಷ್ಟು ಗಾಂಜಾ ತಂದಿದ್ದ. ವಿಮಾನ ನಿಲ್ದಾಣದ ಏರ್ ಕಸ್ಟಮ್ಸ್ ಅಧಿಕಾರಿಗಳು ಪ್ರಯಾಣಿಕರನ್ನು ತಪಾಸಣೆ ಮಾಡುವ ವೇಳೆ ಅಡುಗೆ ಪಾತ್ರೆ ಬಾಕ್ಸ್ ಪರಿಶೀಲಿಸಿದಾಗ ಗಾಂಜಾ ಪತ್ತೆಯಾಗಿದೆ.

ಆರೋಪಿಯನ್ನು ವಶಕ್ಕೆ ಪಡೆದು ಆತನಿಂದ ಗಾಂಜಾ ಜಪ್ತಿ ಮಾಡಲಾಗಿದೆ. ವಶಪಡಿಸಿಕೊಂಡ ಗಾಂಜಾ ಮೌಲ್ಯ ₹96.68 ಲಕ್ಷ ಎಂದು ಅಂದಾಜಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

'ಅಜ್ಞಾತ ಕಥನಗಳು ಅನಾವರಣಗೊಳ್ಳಲಿ'

'ರಮಾಬಾಯಿ ಅಂಬೇಡ್ಕರ್' ಕೃತಿ ಬಿಡುಗಡೆ ಮಾಡಿದ ಬರಗೂರು ರಾಮಚಂದ್ರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋರಾಟಗಾರರ, ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳ ಜೀವನ ಚರಿತ್ರೆ, ಆತ್ಮಕಥೆಗಳು ಬರುತ್ತವೆ. ಆದರೆ, ಅವೆಲ್ಲ ಆಯ್ದ ಸತ್ಯಗಳು ಮತ್ತು ಅಪೂರ್ಣ. ಅವರ ಮನೆಯ ಅಜ್ಞಾತ ಕಥನಗಳು ಅದರಲ್ಲಿ ಅನಾವರಣಗೊಂಡಿರುವುದಿಲ್ಲ ಎಂದು ಸಂಸ್ಕೃತಿ ಚಿಂತಕ ಬರಗೂರು ರಾಮಚಂದ್ರಪ್ಪ ಹೇಳಿದರು.

ನಗರದಲ್ಲಿ ಭಾನುವಾರ ನಡೆದ 'ರಮಾಬಾಯಿ ಅಂಬೇಡ್ಕರ್' ಪುಸ್ತಕ ಬಿಡುಗಡೆ, ನಯನ ರಂಗಮಂದಿರದಲ್ಲಿ ಕೆಲಸ ಮಾಡಿ ನಿವೃತ್ತರಾಗುತ್ತಿರುವ ನಯನ ರಾಜು ಅವರಿಗೆ ರಂಗ ಗೌರವ, ಭೀಮ ಗಾಯನ, 'ಮಿಸೆಸ್ ಅಂಬೇಡ್ಕರ್' ನಾಟಕ ಪ್ರದರ್ಶನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹೋರಾಟಗಾರರ ಮನೆಯವರು ಅನುಭವಿಸುವ ಕಷ್ಟ, ಸವಾಲುಗಳು ಕೂಡಾ ಅನಾವರಣಗೊಂಡಾಗ ಸಾರ್ವಜನಿಕ ವ್ಯಕ್ತಿಗಳ ಜೀವನ ಚರಿತ್ರೆ ಪೂರ್ಣಗೊಳ್ಳುತ್ತದೆ ಎಂದು ತಿಳಿಸಿದರು.

ಯಾವುದೇ ಸಾಧಕನ ಹಿಂದೆ ಮಹಿಳೆ ಇರುತ್ತಾಳೆ ಎನ್ನುವುದು ಸರಿಯಲ್ಲ, ಪುರುಷರಿಗೆ ಜೊತೆಯಾಗಿ, ಸಮಭಾಗಿಯಾಗಿ ಇರುತ್ತಾಳೆ. ಆದರೆ, ನಮ್ಮ ಪರಂಪರಾಗತ ಮನಸ್ಸು ಅದನ್ನು ಒಪ್ಪದೇ, ಮಹಿಳೆಯನ್ನು ಸಾಧನೆಯ ಹಿಂದೆ ನಿಲ್ಲಿಸಿಬಿಟ್ಟಿರುತ್ತದೆ ಎಂದರು.

ಅಂಬೇಡ್ಕರ್ ಅವರ ಹೋರಾಟದಲ್ಲಿ ರಮಾಬಾಯಿಯ ತ್ಯಾಗ, ಅವರು ಅನುಭವಿಸಿದ ಸಂಕಷ್ಟಗಳನ್ನು ಮಾತ್ರವಲ್ಲ, ಅವರ ನಡುವಿನ ಪ್ರೀತಿಯ ಬಂಧ ಮತ್ತು ವೈಚಾರಿಕತೆಯನ್ನು ಈ ಕೃತಿ ಅನಾವರಣಗೊಳಿಸುತ್ತದೆ ಎಂದು ಮಾಹಿತಿ ನೀಡಿದರು.

ಸಾಂಸಾರಿಕ ಜೀವನಕ್ಕೆ ಸೀಮಿತರಾದ ಮಹಿಳೆಯರು, ಸಾಮಾಜಿಕ ಜೀವನಕ್ಕಷ್ಟೇ ಸೀಮಿತರಾದ ಮಹಿಳೆಯರು ಮತ್ತು ಸಾಂಸಾರಿಕ ಜೀವನವನ್ನು ನಡೆಸಿಕೊಂಡೇ ಸಾಮಾಜಿಕ ಜೀವನವನ್ನೂ ನಡೆಸುವ ಮಹಿಳೆಯರು ಇದ್ದಾರೆ. ಮೂರನೇ ವರ್ಗಕ್ಕೆ ಸೇರಿದವರು ರಮಾಬಾಯಿ ಎಂದು ತಿಳಿಸಿದರು.

ಕೃತಿ ಬಗ್ಗೆ ಬರಹಗಾರ ವಿ.ಎಲ್. ನರಸಿಂಹಮೂರ್ತಿ ಮಾತನಾಡಿ, 'ಮಹಿಳೆಯರಿಗೆ ಜವಾಬ್ದಾರಿನ್ನು ನೀಡದ ಸಮಾಜದಲ್ಲಿ ಶ್ರೇಣೀಕೃತ ವ್ಯವಸ್ಥೆಯ ಕೆಳ ಹಂತದಿಂದ ಬಂದಿರುವ ಅಂಬೇಡ್ಕರ್ ಅವರು ಮನೆಯ ಪೂರ್ಣ ಜವಾಬ್ದಾರಿಯನ್ನು ಪತ್ನಿಗೆ ವಹಿಸಿ ಕಲಿಯಲು ತೆರಳುತ್ತಾರೆ. ವಿದೇಶದಿಂದ ಮರಳಿದ ಮೇಲೆ ಅಂಬೇಡ್ಕರ್ ಜೊತೆಗೆ ರಮಾಬಾಯಿ ಕೂಡ ಸಾಮಾಜಿಕ ಚಳವಳಿಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಎಲ್ಲ ವಿವರಗಳು ಈ ಕೃತಿಯಲ್ಲಿವೆ' ಎಂದು ಹೇಳಿದರು.

ಸ್ತ್ರೀವಾದಿ ಚಳವಳಿಯನ್ನು ಅರ್ಥ ಮಾಡಿಕೊಳ್ಳಲು ಈ ಪುಸ್ತಕ ದೊಡ್ಡ ಕೊಡುಗೆಯನ್ನು ನೀಡುತ್ತದೆ ಎಂದು ವಿವರಿಸಿದರು.



ನಗರದ ನಯನ ಸಭಾಂಗಣದಲ್ಲಿ ಕೆಲಸ ನಿರ್ವಹಿಸಿ ನಿವೃತ್ತಿಗೊಳ್ಳುತ್ತಿರುವ ನಯನ ರಾಜು ಜೊತೆಗೆ ಅವರ ಪತ್ನಿ ಜಯಮ್ಮ ರಾಜು ಅವರನ್ನು ಭಾನುವಾರ 'ರಮಾಬಾಯಿ ಅಂಬೇಡ್ಕರ್' ಪುಸ್ತಕ ಬಿಡುಗಡೆಯ ಸಂದರ್ಭದಲ್ಲಿ ಅಭಿನಂದಿಸಲಾಯಿತು. ಬರಹಗಾರ ವಿ.ಎಲ್. ನರಸಿಂಹಮೂರ್ತಿ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ, ಸಾಹಿತಿ ಬರಗೂರು ರಾಮಚಂದ್ರಪ್ಪ ಚಿತ್ರ ಕಲಾವಿದ ಎಂ.ಎಸ್. ಮೂರ್ತಿ, ಬರಹಗಾರ್ತಿ ಅಶ್ವಿನಿ ಮದನಕರ ಉಪಸ್ಥಿತರಿದ್ದರು

ಕೃತಿ ಪರಿಚಯ

ಕೃತಿ: ರಮಾಬಾಯಿ ಅಂಬೇಡ್ಕರ್
ಪ್ರಕಾರ: ಸಂಪಾದಿತ ಕೃತಿ
ಲೇಖಕಿ: ಅಶ್ವಿನಿ ಮದನಕರ್
ಪುಟ: 360
ಬೆಲೆ: ₹ 450
ಪ್ರಕಾಶನ: ಯಶ್ವಂತ್ ಪ್ರಕಾಶನ



ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಗುರುವಾರ ನಗರದ ಕೋಟೆ ಪ್ರೌಢಶಾಲೆ ಮೈದಾನದಲ್ಲಿ ಆಯೋಜಿಸಿದ್ದ ರಾಮನವಮಿ ಸಂಗೀತೋತ್ಸವ–2024 ಕಾರ್ಯಕ್ರಮದಲ್ಲಿ ಅಕ್ಕರೈ ಸಹೋದರಿಯರು ವಿಶೇಷ ಕರ್ನಾಟಕ ಸಂಗೀತ ಕಛೇರಿಯನ್ನು ನಡೆಸಿಕೊಟ್ಟರು –ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಬಸವ ಜಯಂತಿ: 'ವಚನಗಳಿಂದ ವ್ಯಕ್ತಿತ್ವ ವಿಕಸನ' ವಿಷಯದ ಬಗ್ಗೆ ಉಪನ್ಯಾಸ: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ವಿದ್ಯಾವತಿ ನೀಲಕಂಠ, ಆಯೋಜನೆ: ವೀರಮಾತ ಯೋಗ ಕೇಂದ್ರ, ಸ್ಥಳ: ವಿಶ್ವೇಶ್ವರಯ್ಯ ಯೋಗ ಮತ್ತು ಸಾಂಸ್ಕೃತಿಕ ಕೇಂದ್ರ, ಕೆಇಬಿ ಉದ್ಯಾನವನ, ಇಟ್ಟಮಡು, ಸಂಜೆ 4.30

ರಾಮನವಮಿ ಸಂಗೀತೋತ್ಸವ–2024: ಅನುಷಾ ಎಸ್.ಆರ್. ಮತ್ತು ತಂಡದಿಂದ ಸಂಗೀತ ಕಾರ್ಯಕ್ರ, ವಿಶೇಷ ಕರ್ನಾಟಕ ಸಂಗೀತ ಕಛೇರಿ: ಬೆಂಗಳೂರು ಸಹೋದರರು, ಎಚ್.ಕೆ.ವೆಂಕಟ್‌ರಾಂ, ಎಚ್.ಎಸ್. ಸುಧೀಂದ್ರ, ಬಿ.ಆರ್. ರವಿಕುಮಾರ್, ಆಯೋಜನೆ: ಶ್ರೀರಾಮ ಸೇವಾ ಮಂಡಲಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 5ರಿಂದ

ಕ್ರೀಡಾ ಪ್ರಶಸ್ತಿ ಪ್ರದಾನ ಸಮಾರಂಭ: ಮುಖ್ಯ ಅತಿಥಿ: ನಿತಿಶ್ ಕೆ., ಗೌರವ ಅತಿಥಿ: ಡಿ.ಜವಾಹರ್, ಉಪಸ್ಥಿತಿ: ಜೆ.ಸೂರ್ಯಪ್ರಸಾದ್, ಕೆ.ಎಸ್. ಶ್ರೀಧರ್, ಆಯೋಜನೆ ಹಾಗೂ ಸ್ಥಳ: ಪಿಇಎಸ್ ವಿಶ್ವವಿದ್ಯಾಲಯ, ಸಂಜೆ 5.30

ರಾಮನವಮಿ ಸಂಗೀತೋತ್ಸವ: ನಾಮಸಂಕೀರ್ತನ: ಉದಯಲೂರ್ ಕೆ. ಕಲ್ಯಾಣರಾಮನ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in



ನಗರದ ಎಂ.ಜಿ. ರಸ್ತೆಯಲ್ಲಿರುವ ಜಿಕೆಬಿ ಆಪ್ಟಿಕಲ್ಸ್ ಮಳಿಗೆ ಕಟ್ಟಡದ ನೆಲಮಹಡಿಯಲ್ಲಿ ಭಾನುವಾರ ಸಂಜೆ ಕಾಣಿಸಿಕೊಂಡ ಬೆಂಕಿಯನ್ನು ನಿಯಂತ್ರಿಸಲು ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು – ಪ್ರಜಾವಾಣಿ ಚಿತ್ರ

ಎಂ.ಜಿ. ರಸ್ತೆಯ ಕಟ್ಟಡದಲ್ಲಿ ಬೆಂಕಿ ಅವಘಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಂ.ಜಿ.ರಸ್ತೆಯಲ್ಲಿರುವ ನಾಲ್ಕು ಅಂತಸ್ತಿನ ಕಟ್ಟಡದ ನೆಲಮಹಡಿಯಲ್ಲಿ ಭಾನುವಾರ ಬೆಂಕಿ ಅವಘಡ ಸಂಭವಿಸಿದ್ದು, ಪೀಠೋಪಕರಣ ಹಾಗೂ ಹಲವು ಸಾಮಗ್ರಿಗಳು ಸುಟ್ಟು ಕರಕಲಾಗಿವೆ.

'ಮೆಟ್ರೊ ನಿಲ್ದಾಣ ಸಮೀಪದಲ್ಲಿರುವ ಜಿಕೆಬಿ ಆಪ್ಟಿಕಲ್ಸ್ ಮಳಿಗೆ ಇರುವ ಕಟ್ಟಡದ ನೆಲಮಹಡಿಯಲ್ಲಿ ಸಂಜೆ 7 ಗಂಟೆ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿತ್ತು. ದಟ್ಟ ಹೊಗೆ ಸಹ ಆವರಿಸಿತ್ತು. ಬೆಂಕಿ ಹಾಗೂ ಹೊಗೆ ನೋಡಿದ್ದ ಸ್ಥಳೀಯರು ನಿಯಂತ್ರಣ ಕೊಠಡಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು' ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಹೇಳಿದರು.

'2 ಗಂಟೆ ನಿರಂತರವಾಗಿ ಕಾರ್ಯಾಚರಣೆ ನಡೆಸಿಬೆಂಕಿನಂದಿಸಲಾಯಿತು.ವಿದ್ಯುತ್‌ಶಾರ್ಟ್ ಸರ್ಕೀಟ್‌ನಿಂದ ಬೆಂಕಿ ಅವಘಡ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದರು.

'ಜಿಕೆಬಿ ಆಪ್ಟಿಕಲ್ಸ್ ಮಳಿಗೆಗೆ ಸೇರಿದ್ದ ಕನ್ನಡಕದ ಸಾಮಗ್ರಿಗಳು ಹಾಗೂ ಇತರೆ ವಸ್ತುಗಳನ್ನು ನೆಲಮಹಡಿಯಲ್ಲಿ ಸಂಗ್ರಹಿಸಲಾಗಿತ್ತು' ಎಂದು ಸಿಬ್ಬಂದಿ ಹೇಳಿದರು.

'ಘಟನಾ ಸ್ಥಳದಲ್ಲಿ ಮಾದರಿಗಳನ್ನು ಸಂಗ್ರಹಿಸಲಾಗಿದ್ದು, ಇವುಗಳ ತಪಾಸಣೆಯಿಂದ ನಿಖರ ಕಾರಣ ತಿಳಿಯಲಿದೆ. ಕಟ್ಟಡದ ಮಾಲೀಕರು ಗಂಗಾರಾಮ್ ಎಂಬುದಾಗಿ ಗೊತ್ತಾಗಿದೆ. ಅವರನ್ನು ಪತ್ತೆ ಮಾಡಿ ಹೇಳಿಕೆ ಪಡೆಯಬೇಕಿದೆ' ಎಂದು ತಿಳಿಸಿದರು.

ಚಾಲಕನ ನಿಯಂತ್ರಣ ತಪ್ಪಿ ಮಗುಚಿ ಬಿದ್ದ ಟ್ಯಾಂಕರ್

ರಸ್ತೆಯಲ್ಲೆಲ್ಲಾ ಹರಿದ ಪೆಟ್ರೋಲ್

ಪ್ರಜಾವಾಣಿ ವಾರ್ತೆ

ಆನೇಕಲ್: ಎಲೆಕ್ಟ್ರಾನಿಕ್ ಸಿಟಿ ಬಳಿ ಭಾನುವಾರ ಚಾಲಕನ ನಿಯಂತ್ರಣ ತಪ್ಪಿ ಬಿದ್ದ ಪೆಟ್ರೋಲ್ ಟ್ಯಾಂಕರ್‌ನಿಂದ ಪೆಟ್ರೋಲ್ ರಸ್ತೆಯೆಲ್ಲೆಲ್ಲಾ ನೀರಿನಂತೆ ಹರಿಯಿತು.

ಈ ಟ್ಯಾಂಕರ್ ಮಂಗಳೂರಿನಿಂದ ಅತ್ತಿಬೆಲೆಯ ಪೆಟ್ರೋಲ್ ಬಂಕ್‌ವೊಂದಕ್ಕೆ ಪೆಟ್ರೋಲ್ ಸಾಗಿಸುತಿತ್ತು. ರಾಷ್ಟ್ರೀಯ ಹೆದ್ದಾರಿಯ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಉರುಳಿ ಬಿದ್ದಿತು. ಪೆಟ್ರೋಲ್ ರಸ್ತೆಯೆಲ್ಲೆಲ್ಲಾ ಹರಡಿತು.

ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಪರಿಸ್ಥಿತಿ ನಿಭಾಯಿಸಿದರು. ಸೋರಿಕೆಯಾಗಿದ್ದ ಪೆಟ್ರೋಲ್ ತೆರವುಗೊಳಿಸಿದರು. ಇದರಿಂದ ಕೆಲ ಕಾಲ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿತು.



ಪೆಟ್ರೋಲ್ ಟ್ಯಾಂಕರ್‌ವೊಂದು ಮಗುಚಿ ಬಿದ್ದಿದ್ದರಿಂದ ರಸ್ತೆ ತುಂಬ ಪೆಟ್ರೋಲ್ ಹರಿಯಿತು

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಕ್ರಿಕೆಟ್ ಪಂದ್ಯ

ಅಂಗಾಂಗ ಕಸಿಗೆ ಒಳಗಾದವರಿಂದ ವೀಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಣಿಪಾಲ್ ಆಸ್ಪತ್ರೆಗಳ ಸಮೂಹದ ನೆರವಿನಿಂದ ಅಂಗಾಂಗ ಕಸಿಗೆ ಒಳಗಾದ 20 ಮಂದಿ ಕುಟುಂಬದ ಸದಸ್ಯರೊಂದಿಗೆ ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯ ವೀಕ್ಷಿಸಿದರು.

ಶನಿವಾರ ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹಾಗೂ ಗುಜರಾತ್ ಟೈಟಾನ್ಸ್ ನುಡವಿನ ಐಪಿಎಲ್ ಪಂದ್ಯ ವೀಕ್ಷಣೆಗೆ ಆಸ್ಪತ್ರೆಯು ವ್ಯವಸ್ಥೆ ಮಾಡಿತ್ತು. ಆಸ್ಪತ್ರೆಗಳ ಸಮೂಹವು ವೈದ್ಯಕೀಯ ಸೇವೆಗೆ ಸಂಬಂಧಿಸಿದಂತೆ ಆರ್‌ಸಿಬಿ ಫ್ರಾಂಚೈಸಿಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಯಕೃತ್ತು, ಮೂತ್ರಪಿಂಡ, ಹೃದಯ, ಶ್ವಾಸಕೋಶ ಸೇರಿದಂತೆ ವಿವಿಧ ಅಂಗಾಂಗ ವೈಫಲ್ಯಕ್ಕೆ ಒಳಗಾದವರು ಮಣಿಪಾಲ್ ಆಸ್ಪತ್ರೆಯಲ್ಲಿ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಅವರಿಗೆ ಉಲ್ಲಾಸದ ಅನುಭವ ಒದಗಿಸುವ ಉದ್ದೇಶದಿಂದ ಅಗತ್ಯ ವೈದ್ಯಕೀಯ ಸಿಬ್ಬಂದಿಯ ನೆರವಿನೊಂದಿಗೆ ವೀಕ್ಷಣೆಗೆ ಆಸ್ಪತ್ರೆಯು ಅವಕಾಶ ಕಲ್ಪಿಸಿತ್ತು.

'ಅಂಗಾಂಗ ಕಸಿಗೆ ಒಳಗಾದವರು ಚೇತರಿಸಿಕೊಳ್ಳುವ ಅವಧಿಯಲ್ಲಿ ಭಯ, ದುಃಖ, ಆತಂಕ ಮತ್ತು ಖಿನ್ನತೆಯನ್ನು ಅನುಭವಿಸುತ್ತಾರೆ. ಚೇತರಿಕೆಯ ನಂತರವೂ ಈ ಭಾವನೆಗಳು ಉಳಿಯುತ್ತವೆ. ಹೊಸ ಅವಕಾಶಗಳಿಗೆ ತೆರೆದುಕೊಳ್ಳಲು, ಮಾನಸಿಕವಾಗಿ ಸದೃಢವಾಗಲು ಅವರಲ್ಲಿನ ಭಯವನ್ನು ಹೋಗಲಾಡಿಸಬೇಕು. ಹೀಗಾಗಿ, ಆರ್‌ಸಿಬಿ ಫ್ರಾಂಚೈಸಿ ನೆರವಿನಿಂದ ಐಪಿಎಲ್ ಪಂದ್ಯಾವಳಿ ವೀಕ್ಷಣೆಗೆ ವಿಶೇಷ ಪ್ರವೇಶ ಕಲ್ಪಿಸಲಾಗಿತ್ತು' ಎಂದು ಆಸ್ಪತ್ರೆ ಹೇಳಿದೆ.

'ಕಸಿ ಚಿಕಿತ್ಸೆಗೆ ಒಳಗಾದವರಿಗೆ ಮನೋರಂಜನೆ ಅಗತ್ಯ. ಐಪಿಎಲ್ ಪಂದ್ಯಾವಳಿ ವೀಕ್ಷಣೆಯಿಂದ ಕಸಿ ಮಾಡಿಸಿಕೊಂಡವರಿಗೆ ಹೊಸ ಉತ್ಸಾಹ ಮೂಡಿದೆ' ಎಂದು ಮಣಿಪಾಲ್ ಆಸ್ಪತ್ರೆಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕಾರ್ತಿಕ್ ರಾಜಗೋಪಾಲ್ ತಿಳಿಸಿದ್ದಾರೆ.



ಅಂಗಾಂಗ ಕಸಿಗೆ ಒಳಗಾದವರು ಕುಟುಂಬದ ಸದಸ್ಯರೊಂದಿಗೆ ಐಪಿಎಲ್ ಪಂದ್ಯ ವೀಕ್ಷಿಸಿದರು

ವಿಡಿಯೊ ಹಂಚಿಕೊಳ್ಳುವವರ ವಿರುದ್ಧವೂ ಪ್ರಕರಣ: ಎಸ್ಐಟಿ

ಪ್ರಜಾವಾಣಿ ವಾರ್ತೆ

ಬೆಂಗೂರು: 'ಹಲವು ಮಹಿಳೆಯರ ಮೇಲೆ ನಡೆದಿರುವ ಲೈಂಗಿಕ ದೌರ್ಜನ್ಯದ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮ ಗಳಲ್ಲಿ ಹಾಗೂ ಆ್ಯಪ್‌ಗಳಲ್ಲಿ ಹಂಚಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ. ಯಾರಾದರೂ ಹಂಚಿಕೊಳ್ಳುವುದು ಪತ್ತೆಯಾದರೆ ಅಂಥವರ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗುದು' ಎಂದು ಎಸ್ಐಟಿ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಎಸ್ಐಟಿ ಮುಖ್ಯಸ್ಥ ಬಿ.ಕೆ. ಸಿಂಗ್, 'ವಿಡಿಯೊ ಹಂಚಿಕೊಳ್ಳುವವರನ್ನು ತಂತ್ರಜ್ಞಾನ ಸಹಾಯದಿಂದ ಪತ್ತೆ ಹಚ್ಚಲು ಸಾಧ್ಯವಿದೆ. ಸಂತ್ರಸ್ತೆಯರ ಘನತೆ ಹಾಗೂ ಗೌಪ್ಯತೆಗೆ ಕುಂದುಂಟು ಮಾಡುವುದನ್ನು ಗಂಭೀರವಾಗಿ ಪರಿಗಣಿಸಲಾಗುವುದು' ಎಂದಿದ್ದಾರೆ.

'ಲೈಂಗಿಕ ದೌರ್ಜನ್ಯದ ಸಂತ್ರಸ್ತೆಯರು ಎಸ್ಐಟಿ ಕಚೇರಿಗೆ ಬರುವ ಅಗತ್ಯವಿಲ್ಲ. ಸಹಾಯವಾಣಿ 6360938947 ಮೂಲಕ ಸಂಪರ್ಕಿಸಿ ದೂರು ನೀಡಬಹುದು. ದೂರು ಕೊಟ್ಟವರ ವೈಯಕ್ತಿಕ ವಿವರವನ್ನು ಗೌಪ್ಯ ವಾಗಿರಿಸಲಾಗುವುದು. ವೈದ್ಯರು ಹಾಗೂ ವೃತ್ತಿಪರರಿಂದ ಕೌನ್ಸೆಲಿಂಗ್ ಮಾಡಿಸಲಾಗುವುದು. ಸಂತ್ರಸ್ತೆಯರು ಹೆದರಿಕೊಳ್ಳುವ ಅವಶ್ಯಕತೆ ಇಲ್ಲ' ಎಂದು ತಿಳಿಸಿದ್ದಾರೆ.

'ಮಾಧ್ಯಮ ಸಂಸ್ಥೆಗಳು, ವ್ಯಕ್ತಿಗಳು, ಸಂಘ ಸಂಸ್ಥೆಗಳು ಅಥವಾ ಇತರರು ಸಂತ್ರಸ್ತೆಯರ ಗುರುತು ಬಹಿರಂಗಪಡಿಸ ಬಾರದು. ಈ ವಿಚಾರದಲ್ಲಿ ನಿಯಮ ಮೀರಿದರೆ, ಕಾನೂನು ಕ್ರಮ ಕೈಗೊಳ್ಳ ಲಾಗುವುದು' ಎಂದೂ ಅವರು ಎಚ್ಚರಿಸಿದ್ದಾರೆ.



ಬೆಂಗಳೂರಿನ ಕೆ.ಕಾಮರಾಜ್ ರಸ್ತೆಯಲ್ಲಿರುವ ಆರ್ಮಿ ಪಬ್ಲಿಕ್ ಸ್ಕೂಲ್‌ನಲ್ಲಿ ಭಾನುವಾರ ನಡೆದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಗೆ (ನೀಟ್) ಹಾಜರಾಗಲು ಪರೀಕ್ಷೆಗೆ ಕೊಠಡಿಯ ಮುಂದೆ ಸಾಲುಗಟ್ಟಿ ನಿಂತಿದ್ದ ವಿದ್ಯಾರ್ಥಿಗಳು

'ಅತ್ಯಾಚಾರ ಸಂತ್ರಸ್ತೆ ಅಪಹರಣ' ಪ್ರಕರಣ: ಮುಂದುವರಿದ ವಿಚಾರಣೆ • ಹೊಸ ಶರ್ಟ್– ಪಂಚೆ ತರಿಸಿಕೊಟ್ಟ ಎಸ್ಐಟಿ

'ಸೆಲ್'ನಲ್ಲಿ ರೇವಣ್ಣ: ಕುರ್ಚಿ ಮೇಲೆಯೇ ನಿದ್ದೆ

• ಸಂತೋಷ ಜಿಗಳಿಕೊಪ್ಪ

ಮುಖ್ಯಾಂಶಗಳು
- ಸೋಮವಾರ ಪುನಃ ವಿಚಾರಣೆ
- ಘಟನಾ ಸ್ಥಳಕ್ಕೆ ಕರೆದೊಯ್ದು ಮಹಜರು
- ನ್ಯಾಯಾಧೀಶರ ಎದುರು ಸಂತ್ರಸ್ತೆ ಹೇಳಿಕೆ ಸಾಧ್ಯತೆ

ಬೆಂಗಳೂರು: 'ಅತ್ಯಾಚಾರ ಸಂತ್ರಸ್ತೆ ಅಪಹರಣ' ಪ್ರಕರಣ ದಲ್ಲಿ ಬಂಧಿಸಲಾಗಿರುವ ಜೆಡಿಎಸ್ ಶಾಸಕ ಎಚ್.ಡಿ. ರೇವಣ್ಣ ಅವರನ್ನು ಅರಮನೆ ರಸ್ತೆಯಲ್ಲಿರುವ ಸಿಐಡಿ ಕಟ್ಟಡದ ಸೆಲ್‌ನಲ್ಲಿ ಇರಿಸಿ, ವಿಚಾರಣೆ ಮುಂದುವರಿಸಲಾಗಿದೆ.

ರೇವಣ್ಣ ಅವರನ್ನು ಶನಿವಾರ ಸಂಜೆ ಬಂಧಿಸಿದ್ದ ಎಸ್ಐಟಿ ಅಧಿಕಾರಿಗಳು, ತಮ್ಮ ಕಚೇರಿಗೆ ಕರೆತಂದು ಸಿಐಡಿ ಅನೆಕ್ಸ್–1 ಕಟ್ಟಡದ ನೆಲಮಹಡಿಯಲ್ಲಿರುವ ಸೆಲ್‌ನಲ್ಲಿ ಇರಿಸಿದ್ದರು.

'ರೇವಣ್ಣ ಅವರನ್ನು ಸೆಲ್‌ನಿಂದ ಬೌರಿಂಗ್ ಆಸ್ಪತ್ರೆಗೆ ರಾತ್ರಿ ಕರೆದೊಯ್ದಾಗ, ಅವರ ಇಸಿಜಿಯಲ್ಲಿ ವ್ಯತ್ಯಾಸವಿರುವುದಾಗಿ ವೈದ್ಯರು ಹೇಳಿದ್ದರು. ಸ್ವಲ್ಪ ಹೊತ್ತಿನ ನಂತರ ಚೇತರಿಕೆ ಕಾಣಿಸಬಹುದೆಂದು ತಿಳಿಸಿದ್ದರು. ಹೀಗಾಗಿ, ಆಸ್ಪತ್ರೆಯಿಂದ ರೇವಣ್ಣ ಅವರನ್ನು ಪುನಃ ಕಚೇರಿಗೆ ಕರೆತಂದು ಸೆಲ್‌ನಲ್ಲಿ ಇರಿಸಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

'ಸೆಲ್‌ನಲ್ಲಿ ಮಲಗಲು ಹಾಗೂ ಕುಳಿತುಕೊಳ್ಳಲು ಸೂಕ್ತ ವ್ಯವಸ್ಥೆ ಇದೆ. ಕುರ್ಚಿ ಮೇಲೆಯೇ ರೇವಣ್ಣ ಅವರು ಹಲವು ಗಂಟೆ ಕುಳಿತಿದ್ದರು. ಅವರ ಇಸಿಜಿಯಲ್ಲಿ ವ್ಯತ್ಯಾಸವಿರುವುದು ಗೊತ್ತಿದ್ದರಿಂದ, ಆರಂಭದಲ್ಲಿ ಪ್ರಕರಣದ ಬಗ್ಗೆ ಅವರಿಂದ ಯಾವುದೇ ಮಾಹಿತಿ ಪಡೆಯಲಿಲ್ಲ. ಊಟ ಕೊಟ್ಟ ಬಳಿಕ, ಕೆಲ ನಿಮಿಷ ವಿಚಾರಣೆ ನಡೆಸಲಾಯಿತು.'

'ಸೆಲ್‌ನಲ್ಲಿ ಮಲಗಿ ವಿಶ್ರಾಂತಿ ಪಡೆಯುವಂತೆ ರೇವಣ್ಣ ಅವರಿಗೆ ಹೇಳಲಾಗಿತ್ತು. ಆದರೆ, ಮಲಗಲು ಅವರು ನಿರಾಕರಿಸಿದರು. ನಸುಕಿನವರೆಗೂ ಕುರ್ಚಿ ಮೇಲೆಯೇ ಕುಳಿತು ಅರೆಬರೆ ನಿದ್ದೆ ಮಾಡಿದರು' ಎಂದು ಮೂಲಗಳು ಹೇಳಿವೆ.

'ನಸುಕಿನಲ್ಲಿ ಎಚ್ಚರಗೊಂಡ ಅವರು, ಕಚೇರಿಯಲ್ಲಿಯೇ ಸ್ನಾನ ಮಾಡಿದರು. ಸಿಬ್ಬಂದಿ ತಂದುಕೊಟ್ಟಿದ್ದ ಹೊಸ ಅಂಗಿ ಹಾಗೂ ಪಂಚೆ ಧರಿಸಿದರು. ಅವರು ತಿಂಡಿ ತಿಂದ ನಂತರ, ಬೆಳಿಗ್ಗೆ 10 ಗಂಟೆಯಿಂದ ಅವರ ವಿಚಾರಣೆ ಆರಂಭಿಸಲಾಯಿತು. ಎಸ್ಐಟಿ ಮುಖ್ಯಸ್ಥ ಬಿ.ಕೆ.ಸಿಂಗ್ ಹಾಗೂ ಇತರೆ ಅಧಿಕಾರಿಗಳು, ಕೆಲ ಪ್ರಶ್ನೆಗಳನ್ನು ಕೇಳಿದರು. ಉತ್ತರ ನೀಡದ ರೇವಣ್ಣ, 'ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ. ಏಕೆ ಪದೇ ಪದೇ ವಿಚಾರಣೆ. ಯಾರದ್ದಾದರೂ ಒತ್ತಡ ಇದೆಯಾ' ಎಂದು ಪ್ರಶ್ನಿಸಿದರು. ಕೆಲ ಪುರಾವೆಗಳನ್ನು ಮುಂದಿಟ್ಟು ಅಧಿಕಾರಿಗಳು ಪ್ರಶ್ನೆ ಕೇಳಿದಾಗ, ರೇವಣ್ಣ ಮೌನವಾದರು' ಎಂದು ಮೂಲಗಳು ತಿಳಿಸಿವೆ.

'ಬಂಧನಕ್ಕೆ ಸಂಬಂಧಪಟ್ಟಂತೆ ಎಸ್ಐಟಿ ಅಧಿಕಾರಿಗಳು, ರೇವಣ್ಣ ಅವರ ಫೋಟೊಗಳನ್ನು ಕ್ಲಿಕ್ಕಿಸಿಕೊಂಡರು. ಬೆರಳಚ್ಚು ಸಹ ಪಡೆದುಕೊಂಡರು. ಫೋಟೊ ತೆಗೆಯಲು ಹಾಗೂ ಸಹಿ ಮಾಡಲು ರೇವಣ್ಣ ಆರಂಭದಲ್ಲಿ ವಿರೋಧಿಸಿದರು. 'ನಮ್ಮ ಕೆಲಸ ಮಾಡುತ್ತಿದ್ದೇವೆ. ಸಹಕರಿಸಬೇಕು. ಇಲ್ಲದಿದ್ದರೆ, ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕಾಗುತ್ತದೆ' ಎಂದು ಅಧಿಕಾರಿಗಳು ಹೇಳಿದರು. ಬಳಿಕವೇ ರೇವಣ್ಣ, ಫೋಟೊ ತೆಗೆಸಿಕೊಳ್ಳಲು ಹಾಗೂ ಸಹಿ ಮಾಡಲು ಸಹಕರಿಸಿದರು' ಎಂದು ಎಸ್ಐಟಿ ಮೂಲಗಳು ಹೇಳಿವೆ.



ನಗರದ ಬೌರಿಂಗ್ ಆಸ್ಪತ್ರೆಯಿಂದ ನ್ಯಾಯಾಧೀಶರ ಮನೆಗೆ ಪೊಲೀಸ್ ವಾಹನದಲ್ಲಿ ಕರೆದೊಯ್ಯುತ್ತಿದ್ದ ಸಂದರ್ಭದಲ್ಲಿ ಎಚ್.ಡಿ.ರೇವಣ್ಣ ಅವರು ಜನರತ್ತ ಕೈ ಬೀಸಿದರು

–ಪ್ರಜಾವಾಣಿ ಚಿತ್ರ

'ಕೆ.ಆರ್. ನಗರ ಠಾಣೆ ಪ್ರಕರಣದ ಪುರಾವೆಗಳು ಹಾಗೂ ಬಂಧಿಸಲಾದ ಆರೋಪಿಗಳ ಬಗ್ಗೆಯೂ ರೇವಣ್ಣ ಅವರನ್ನು ವಿಚಾರಿಸಲಾಯಿತು. 'ಪುರಾವೆಗಳು ಸುಳ್ಳು. ಬಂಧಿತ ಆರೋಪಿಯನ್ನು ನಾನು ಭೇಟಿಯಾಗದೇ ಹಲವು ವರ್ಷವಾಯಿತು' ಎಂದು ಹೇಳಿದರು.'

'ಸಂಜೆ 5.30 ಗಂಟೆ ಸುಮಾರಿಗೆ ರೇವಣ್ಣ ಅವರನ್ನು ಎರಡನೇ ಬಾರಿ ವೈದ್ಯಕೀಯ ಪರೀಕ್ಷೆಗೆಂದು ಬೌರಿಂಗ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿಂದ, ಕೋರಮಂಗಲದಲ್ಲಿರುವ ನ್ಯಾಯಾಧೀಶರ ನಿವಾಸಕ್ಕೆ ಕರೆದೊಯ್ದು, ಹಾಜರುಪಡಿಸಲಾಯಿತು. ವಿಚಾರಣೆ ನಡೆಸಿದ ನ್ಯಾಯಾಧೀಶರು, ಆರೋಪಿಯನ್ನು ಎಸ್ಐಟಿ ಕಸ್ಟಡಿಗೆ ಒಪ್ಪಿಸಿದ್ದಾರೆ. ರೇವಣ್ಣ ಅವರನ್ನು ಪುನಃ ಎಸ್ಐಟಿ ಕಚೇರಿಗೆ ಕರೆತಂದು ಸೆಲ್‌ನಲ್ಲಿ ಇರಿಸಲಾಗಿದೆ' ಎಂದು ತಿಳಿಸಿವೆ.

ಸೆಲ್‌ನಲ್ಲೂ ಕಣ್ಣೀರು: 'ಸೆಲ್‌ನಲ್ಲಿ ಕುಳಿತಿದ್ದ ರೇವಣ್ಣ, 'ನನಗೆ ಏಕೆ ಈ ಶಿಕ್ಷೆ' ಎಂಬುದಾಗಿ ಹೇಳಿ ಸಿಬ್ಬಂದಿ ಎದುರು ಕಣ್ಣೀರು ಹಾಕಿದರೆಂದು ಗೊತ್ತಾಗಿದೆ.

'ಹೇಳಿಕೆಗೆ ಸಂತ್ರಸ್ತೆ ನಕಾರ: ಅಧಿಕಾರಿಗಳ ಮನವೊಲಿಕೆ'

ಮೈಸೂರು ಜಿಲ್ಲೆಯ ಕೆ.ಆರ್.ನಗರದಿಂದ ಅಪಹರಿಸಲಾಗಿದ್ದ ಸಂತ್ರಸ್ತೆಯನ್ನು ಶನಿವಾರ ರಕ್ಷಿಸಿದ್ದ ಎಸ್ಐಟಿ ಅಧಿಕಾರಿಗಳು, ಪ್ರಕರಣ ಸಂಬಂಧ ಅವರಿಂದ ಭಾನುವಾರ ಹೇಳಿಕೆ ದಾಖಲಿಸಿಕೊಂಡಿದ್ದಾರೆಂದು ಗೊತ್ತಾಗಿದೆ.

ಬೆಂಗಳೂರಿಗೆ ಶನಿವಾರವೂ ಸಂತ್ರಸ್ತೆಯನ್ನು ಕರೆತಂದಿದ್ದ ಅಧಿಕಾರಿಗಳು, ವೈದ್ಯರು ಹಾಗೂ ಸಂಬಂಧಿಕರ ಸಮ್ಮುಖದಲ್ಲಿ ಕೌನ್ಸೆಲಿಂಗ್‌ಗೆ ಒಳಪಡಿಸಿದ್ದರು. ಅರಮನೆ ರಸ್ತೆಯಲ್ಲಿರುವ ಕಚೇರಿಗೆ ಸಂತ್ರಸ್ತೆಯನ್ನು ಶನಿವಾರ ಸಂಜೆ ಕರೆತಂದಿದ್ದ ಅಧಿಕಾರಿಗಳು, ಪ್ರಕರಣದ ಬಗ್ಗೆ ಮಾಹಿತಿ ಪಡೆದುಕೊಂಡರು.

ಅಧಿಕಾರಿಗಳ ಸಾಲು ಸಾಲು ಪ್ರಶ್ನೆಗಳಿಂದ ಹೆದರಿದ್ದ ಮಹಿಳೆ, ಹೇಳಿಕೆ ನೀಡಲು ತಡವರಿಸಿದ್ದರು. ನಂತರ, ಮಹಿಳೆಯನ್ನು ಸುರಕ್ಷಿತ ಸ್ಥಳಕ್ಕೆ ಕಳುಹಿಸಲಾಗಿತ್ತು. ಭಾನುವಾರ ಬೆಳಿಗ್ಗೆ ಪುನಃ ಮಹಿಳೆಯನ್ನು ಕಚೇರಿಗೆ ಕರೆಸಲಾಗಿತ್ತು.

'ನಾವು ಬಡವರು. ನಮಗ್ಯಾಕೆ ಬೇಕು ಇದೆಲ್ಲಾ?' ಎಂದು ಮಹಿಳೆ ಹೇಳಿಕೆ ನೀಡಲು ನಿರಾಕರಿಸಿದ್ದರು. ಇದರಿಂದಾಗಿ ಎಸ್ಐಟಿ ಅಧಿಕಾರಿಗಳು ಇಕ್ಕಟ್ಟಿಗೆ ಸಿಲುಕಿದ್ದರು. ನಂತರ, ಮಗ ಹಾಗೂ ಸಂಬಂಧಿಕರ ಮೂಲಕ ಸಂತ್ರಸ್ತೆಗೆ ತಿಳಿ ಹೇಳಲಾಯಿತು. 'ನಮಗಾದ ಅನ್ಯಾಯಕ್ಕೆ ನ್ಯಾಯ ಬೇಕು. ಅದಕ್ಕಾಗಿ ಹೇಳಿಕೆ ನೀಡು' ಎಂದು ಮಗ ಹಾಗೂ ಸಂಬಂಧಿಕರು ಧೈರ್ಯ ತುಂಬಿದರು. ಇದರಿಂದಾಗಿ, ಮಹಿಳೆ ಹೇಳಿಕೆ ನೀಡಲು ಒಪ್ಪಿದರೆಂದು ಮೂಲಗಳು ಹೇಳಿವೆ.

'ತನಿಖಾ ಪ್ರಕ್ರಿಯೆ ಎಸ್ಐಟಿ ತೀರ್ಮಾನ'

ಬೆಂಗಳೂರು: 'ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದ ತನಿಖೆಯಲ್ಲಿ ಮುಂದಿನ ಪ್ರಕ್ರಿಯೆಯನ್ನು ವಿಶೇಷ ತನಿಖಾ ತಂಡವೇ (ಎಸ್ಐಟಿ) ನಿರ್ಧರಿಸುತ್ತದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, 'ಎಸ್ಐಟಿ ಯಾವ ರೀತಿ ತನಿಖೆ ನಡೆಸುತ್ತಿದೆ? ತನಿಖೆಯಲ್ಲಿ ಏನೆಲ್ಲಾ ಬೆಳವಣಿಗೆಗಳು ನಡೆದಿವೆ ಎಂಬುದನ್ನು ಬಹಿರಂಗಪಡಿಸಲು ಆಗುವುದಿಲ್ಲ. ಕಾನೂನಿನ ವ್ಯಾಪ್ತಿಯಲ್ಲಿ ಎಸ್ಐಟಿ ಅಧಿಕಾರಿಗಳು ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳುತ್ತಾರೆ' ಎಂದರು.

ಕಾನೂನು ವ್ಯಾಪ್ತಿಯನ್ನು ಮೀರಿ ಎಸ್ಐಟಿ ಕೆಲಸ ಮಾಡಲು ಸಾಧ್ಯವಿಲ್ಲ. ಪ್ರಕರಣ ದಾಖಲಿಸುವುದು, ಆರೋಪಿಗಳ ಪತ್ತೆ, ಬಂಧನ, ನ್ಯಾಯಾಧೀಶರ ಎದುರು ಹಾಜರುಪಡಿಸುವುದು ಸೇರಿದಂತೆ ಎಲ್ಲ ಪ್ರಕ್ರಿಯೆಗಳೂ ಕಾನೂನಿನ ಪ್ರಕಾರವೇ ನಡೆಯುತ್ತವೆ. ಎಲ್ಲಿಯೂ ಕಾನೂನು ವ್ಯಾಪ್ತಿಯನ್ನು ಮೀರದಂತೆ ಎಸ್ಐಟಿ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.



ಜಿ.ಪರಮೇಶ್ವರ

ಪ್ರಜ್ವಲ್ ಕಾರು ಚಾಲಕ ಕಾರ್ತಿಕ್ ನಾಪತ್ತೆಯಾಗಿರುವ ಕುರಿತು ಕೇಳಿದಾಗ, 'ಯಾರು ಎಲ್ಲಿದ್ದಾರೆ? ಎಂಬುದು ತನಿಖಾ ತಂಡಕ್ಕಷ್ಟೇ ತಿಳಿದಿರುತ್ತದೆ. ಪ್ರಜ್ವಲ್ ರೇವಣ್ಣ ಪತ್ತೆಗೆ ಬ್ಲೂ ಕಾರ್ನರ್ ನೋಟಿಸ್ ಜಾರಿಗೊಳಿಸಲಾಗಿದೆ. ಮಾಹಿತಿ ಸಂಗ್ರಹವೂ ನಡೆದಿದೆ' ಎಂದರು.

ರಾಜಕೀಯ ದುರುದ್ದೇಶದಿಂದ ತನಿಖೆ ನಡೆಸಲಾಗುತ್ತಿದೆ ಎಂಬ ಜೆಡಿಎಸ್ ನಾಯಕರ ಆರೋಪ ಕುರಿತು ಪ್ರತಿಕ್ರಿಯಿಸಿದ ಪರಮೇಶ್ವರ, 'ಈಗಿನ ಬೆಳವಣಿಗೆಗಳಿಗೆ ಅವರಿಗೆ ಬೇಸರ ಆಗಿದೆ. ಆ ಕಾರಣಕ್ಕಾಗಿ ಆ ರೀತಿ ಹೇಳುತ್ತಿದ್ದಾರೆ' ಎಂದು ಜಿ. ಪರಮೇಶ್ವರ ಅವರು ಉತ್ತರಿಸಿದರು.

ಅಂಕಿತ ಪುಸ್ತಕದ ಕಾರ್ಯಕ್ರಮದಲ್ಲಿ ಬಸವರಾಜ ಕಲ್ಗುಡಿ ಅಭಿಮತ

'ಸಂಪಾದಕರ ಪರಿಕಲ್ಪನೆ ಕನ್ನಡಕ್ಕೂ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯುರೋಪಿಯನ್ ಸಂಸ್ಕೃತಿಯಲ್ಲಿ ಭಾಷಾ ಸಂಪಾದಕರಿಗೆ ದೊಡ್ಡ ಪರಂಪರೆಯಿದೆ. ಗುಣಮಟ್ಟದ ಸಾಹಿತ್ಯ ಕೃತಿಗಳು ಹೊರಬರಲು, ಲೇಖಕರನ್ನು ಮುಂದಕ್ಕೆ ಕೊಂಡೊಯ್ಯಲು ಕನ್ನಡದಲ್ಲೂ ಭಾಷಾ ಸಂಪಾದಕರು ಅಗತ್ಯ' ಎಂದು ವಿಮರ್ಶಕ ಬಸವರಾಜ ಕಲ್ಗುಡಿ ತಿಳಿಸಿದರು.

ಅಂಕಿತ ಪುಸ್ತಕ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಪದ್ಮರಾಜ ದಂಡಾವತಿ ಅವರ '...ಉಳಿದಾವ ನೆನಪು', ಉದಯ ಕುಮಾರ ಹಬ್ಬು ಅವರ 'ಚಂದ್ರಗುಪ್ತ ಮೌರ್ಯ', ವೈ.ಜಿ. ಮುರಳೀಧರನ್ ಅವರ 'ವಿಕ್ಟರ್ ಫ್ರಾಂಕಲ್' ಹಾಗೂ ಮಹಾಬಲ ಸೀತಾಳಭಾವಿ ಅವರ 'ಕಾಳಿದಾಸ ಮಹಾಕವಿಯ ಮೇಘದೂತ' ಕೃತಿಗಳು ಬಿಡುಗಡೆಯಾದವು.

ಈ ವೇಳೆ ಮಾತನಾಡಿದ ಕಲ್ಗುಡಿ, 'ಪುಸ್ತಕದಲ್ಲಿ ಯಾವ ಅಂಶವನ್ನು ಮುಂದಕ್ಕೆ ತರಬೇಕೆಂದು ಸಂಪಾದಕರು ನಿರ್ಧರಿಸುತ್ತಾರೆ. ಇದರಿಂದಲೇ ಆಂಗ್ಲ ಸೇರಿ ವಿವಿಧ ಭಾಷೆಗಳಲ್ಲಿ ಅನೇಕರು ಪ್ರಸಿದ್ಧ ಲೇಖಕರಾಗಿದ್ದಾರೆ. ಕನ್ನಡದಲ್ಲಿ ಬರಹಗಾರರಿಗೆ ತಾವೇ ದೊಡ್ಡವರು ಎಂಬ ಅಹಂ ಇರುವುದರಿಂದ, ಕನ್ನಡದ ಜತೆಗೆ ಇಂಗ್ಲಿಷ್‌ನಲ್ಲಿಯೂ, ಸಂಸ್ಕೃತದಲ್ಲಿಯೂ ತಾವು ಬರೆಯಬಲ್ಲೆವೆಂಬ ಮನೋಭಾವ ಹೊಂದಿರುವುದರಿಂದ ಇಲ್ಲಿ ಭಾಷಾ ಸಂಪಾದಕರ ಪರಿಕಲ್ಪನೆ ಇಲ್ಲ' ಎಂದರು.

'ಕನ್ನಡದಲ್ಲಿ ಗಂಭೀರ ಸಾಹಿತ್ಯ ವಿಮರ್ಶೆ ಮತ್ತು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸುತ್ತಿದ್ದ ನಿಯತಕಾಲಿಕೆಗಳು ನಿಂತುಹೋಗಿವೆ. ಕೆಲ ಪೀತ ಪತ್ರಿಕೆಗಳು ಹಣ ಪಡೆದು, ಸಾಹಿತ್ಯ ವಿಮರ್ಶೆಯ ಹೆಸರಿನಲ್ಲಿ ಕಳಪೆ ವಿಮರ್ಶೆ ಗಳನ್ನು ಪ್ರಕಟಿಸುತ್ತಿವೆ. ವಿಶ್ವವಿದ್ಯಾಲಯಗಳಲ್ಲಿ ಬಡ್ತಿಗೋಸ್ಕರ ಸಂಶೋಧನಾ ವಿಮರ್ಶೆ, ಬರಹವನ್ನು ಹೊರತರಲಾಗುತ್ತಿದೆ' ಎಂದು ಹೇಳಿದರು.



ನಗರದಲ್ಲಿ ಭಾನುವಾರ 'ಅಂಕಿತ ಪುಸ್ತಕ' ಆಯೋಜಿಸಿದ್ದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಕಂಪನಿಯ ನಿರ್ದೇಶಕ ಕೆ.ಎನ್.ಶಾಂತಕುಮಾರ್ (ಎಡದಿಂದ ನಾಲ್ಕನೆಯವರು) ಐದು ಕೃತಿಗಳನ್ನು ಬಿಡುಗಡೆ ಮಾಡಿ, ಕೃತಿಕಾರರಿಗೆ ನೀಡಿದರು. ಲೇಖಕರಾದ ಮಹಾಬಲ ಸೀತಾಳಬಾವಿ, ಉದಯಕುಮಾರ ಹಬ್ಬು, ವೈ.ಜಿ.ಮುರಳೀಧರನ್, ವಿದ್ವಾಂಸ ಬಸವರಾಜ ಕಲ್ಗುಡಿ, ಪದ್ಮರಾಜ ದಂಡಾವತಿ ಮತ್ತು ಜಗದೀಶ ಶರ್ಮಾ ಸಂಪ ಪಾಲ್ಗೊಂಡಿದ್ದರು

– ಪ್ರಜಾವಾಣಿ ಚಿತ್ರ

ಹಲವು ಮಾಧ್ಯಮ ಲಭ್ಯ: ಕೃತಿಗಳನ್ನು ಬಿಡುಗಡೆ ಮಾಡಿ ಮಾತನಾಡಿದ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಕಂಪನಿಯ ನಿರ್ದೇಶಕ ಕೆ. ಎನ್. ಶಾಂತಕುಮಾರ್, 'ಬದಲಾದ ಕಾಲಘಟ್ಟದಲ್ಲಿ ಪುಸ್ತಕೋದ್ಯಮ ಮತ್ತು ಪತ್ರಿಕೋದ್ಯಮದಲ್ಲಿ ಅಜಗಜಾಂತರ ಬದಲಾವಣೆಯಾಗಿದೆ. ದಿನಪತ್ರಿಕೆಗಳಲ್ಲಿ ಪುಸ್ತಕ ವಿಮರ್ಶೆಗಳ ಪ್ರಮಾಣ ಮತ್ತು ಗುಣಮಟ್ಟ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ ಎಂಬ ಆಕ್ಷೇಪ ಸಾಮಾನ್ಯವಾಗಿದೆ. ದಶಕಗಳ ಹಿಂದೆ ಹೊಸ ಪುಸ್ತಕಗಳ ಬಗ್ಗೆ ತಿಳಿದುಕೊಳ್ಳಲು ಬೇರೆ ಮಾಧ್ಯಮ ಇರಲಿಲ್ಲ. ಆದರೆ, ಈಗ ಅಂತರ್ಜಾಲ ಆಧಾರಿತ ಹಲವು ಮಾಧ್ಯಮಗಳು ಲೇಖಕರು, ವಿಮರ್ಶಕರು ಹಾಗೂ ಪ್ರಕಾಶಕರಿಗೆ ಸಿಕ್ಕಿವೆ. ಪುಸ್ತಕೋದ್ಯಮ ಬೆಳೆದಿರುವ ಕಾರಣ ವಾರದಲ್ಲಿ 20–30 ಪುಸ್ತಕಗಳು ಪ್ರಕಟವಾಗುತ್ತಿವೆ. ಇದರಿಂದಾಗಿ ದಿನಪತ್ರಿಕೆಗಳಲ್ಲಿ ಪುಸ್ತಕ ವಿಮರ್ಶೆಗಳಿಗೆ ಅಷ್ಟಾಗಿ ಆದ್ಯತೆ ಸಿಗುತ್ತಿಲ್ಲ' ಎಂದರು.

'ದಿನಪತ್ರಿಕೆಗೆ ಸಾಮಾನ್ಯ ಓದುಗರ ವರ್ಗ ದೊಡ್ಡದಿರುತ್ತದೆ. ಆದ್ದರಿಂದ ಪುಸ್ತಕ ವಿಮರ್ಶೆಯು ಓದಿನ ಸರಳ ಚಿತ್ರಣ ನೀಡಬೇಕಾಗುತ್ತದೆ. ಓದುಗನೊಬ್ಬನ ರಸಾನುಭವದ ನಿರ್ಮಿತಿಯಾದರೆ ಸಾಕಾಗುತ್ತದೆ. ಶಾಸ್ತ್ರೀಯವಾದ, ಪಾಂಡಿತ್ಯಪೂರ್ಣ ವಿಮರ್ಶೆ ಸಾಹಿತ್ಯದ ಬೆಳವಣಿಗೆಗೆ ಅಗತ್ಯ. ಅವುಗಳು ವಿಶ್ವವಿದ್ಯಾಲಯದ ಪತ್ರಿಕೆಗಳು, ಸಾಹಿತ್ಯಿಕ ನಿಯತಕಾಲಿಕೆಗಳು ಹಾಗೂ ಬೇರೆ ಮಾಧ್ಯಮಗಳಲ್ಲಿ ಪ್ರಕಟವಾದರೆ ಸಾಕೆನಿಸುತ್ತದೆ' ಎಂದರು.

ಬಿಡುಗಡೆಯಾದ ಕೃತಿಗಳ ಬಗ್ಗೆ ಲೇಖಕ ಜಗದೀಶ ಶರ್ಮ ಸಂಪ ಮಾತನಾಡಿ, ಮೆಚ್ಚುಗೆ ವ್ಯಕ್ತಪಡಿಸಿದರು.



ಹೂವಿನ ತೇರು

ಇಂದಿರಾನಗರ ಮತ್ತು ಹಲಸೂರು ಸುತ್ತಮುತ್ತಲಿನ ಪ್ರದೇಶಗಳ 100ಕ್ಕೂ ಅಧಿಕ ದೇವಾಲಯಗಳ ದೇವರ ವಿಗ್ರಹಗಳನ್ನು ಮಲ್ಲಿಗೆ ಹೂವಿನಿಂದ ಅಲಂಕರಿಸಲಾದ ರಥಗಳಲ್ಲಿ ಪ್ರತಿಷ್ಠಾಪಿಸಿ ಭಾನುವಾರ ಹಲಸೂರು ಸೋಮೇಶ್ವರ ದೇವಸ್ಥಾನದ ಉತ್ಸವ 'ಹಲಸೂರು ಹಬ್ಬ'ಕ್ಕೆ ಮೆರವಣಿಗೆಯಲ್ಲಿ ಕರೆತರಲಾಯಿತು

- ಪ್ರಜಾವಾಣಿ ಚಿತ್ರ/ ಎಸ್.ಕೆ. ದಿನೇಶ್

ಪ್ರಯಾಣಿಕರ ದಟ್ಟಣೆ ಹೆಚ್ಚುವರಿ ರೈಲು

ಬೆಂಗಳೂರು: ಬೇಸಿಗೆಯಲ್ಲಿ ಹೆಚ್ಚಾಗಿರುವ ಪ್ರಯಾಣಿಕರ ದಟ್ಟಣೆಯನ್ನು ಕಡಿಮೆ ಮಾಡಲು ಹೆಚ್ಚುವರಿಯಾಗಿ ವಿಶೇಷ ರೈಲು ಓಡಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಮೇ 6ರಂದು ರಾತ್ರಿ 11ಕ್ಕೆ ಬೆಂಗಳೂರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣದಿಂದ ಹುಬ್ಬಳ್ಳಿಗೆ ವಿಶೇಷ ರೈಲು ಹೊರಡಲಿದೆ. ಬೆಂಗಳೂರು ಕಂಟೋನ್ಮೆಂಟ್, ತುಮಕೂರು, ದಾವಣಗೆರೆ, ಹರಿಹರ, ಹಾವೇರಿ ಮೂಲಕ ಸಂಚರಿಸಲಿರುವ ಈ ರೈಲು ಮರುದಿನ ಬೆಳಿಗ್ಗೆ 7.55ಕ್ಕೆ ಎಸ್ಎಸ್ಎಸ್ ಹುಬ್ಬಳ್ಳಿ ನಿಲ್ದಾಣಕ್ಕೆ ತಲುಪಲಿದೆ. ಇದು ಟ್ರಿಪ್ ಆಗಿದೆ. ಹುಬ್ಬಳ್ಳಿ–ನಹರ್ಲಗನ್–ಹುಬ್ಬಳ್ಳಿ ನಡುವೆ ಮೇ 8ರಿಂದ ಜೂನ್ 5ರ ವರೆಗೆ 5 ಟ್ರಿಪ್ ವಿಶೇಷ ರೈಲು ಸಂಚರಿಸಲಿದೆ. ಗದಗ, ಹೊಸಪೇಟೆ, ಗುಂತಕಲ್, ಗುಂಟೂರು, ವಿಜಯನಗರ ಮೂಲಕ ಸಾಗಲಿರುವ ಈ ರೈಲು ಅರುಣಾಚಲ ಪ್ರದೇಶದ ನಹರ್ಲಗನ್ ನಿಲ್ದಾಣವನ್ನು ತಲುಪಲಿದೆ.

ಮದುವೆ ಊಟ ಸೇವಿಸಿ 100ಕ್ಕೂ ಹೆಚ್ಚು ಮಂದಿ ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ಪಟ್ಟಣದ ಸಾತನೂರು ವೃತ್ತದ ಬಳಿಯ ಟಿಪ್ಪು ನಗರದಲ್ಲಿ ಭಾನುವಾರ ರಾತ್ರಿ ಮದುವೆ ಕಾರ್ಯಕ್ರಮದಲ್ಲಿ ಊಟ ಸೇವಿಸಿ 100ಕ್ಕೂ ಹೆಚ್ಚು ಮಂದಿ ಅಸ್ವಸ್ಥಗೊಂಡಿದ್ದಾರೆ.

ಅಸ್ವಸ್ಥರನ್ನು ಸ್ಥಳೀಯ ಸರ್ಕಾರಿ ಆಸ್ಪತ್ರೆ, ಮಾಗಡಿ ಸರ್ಕಾರಿ ಆಸ್ಪತ್ರೆ, ರಾಮನಗರ ಜಿಲ್ಲಾಸ್ಪತ್ರೆ ಹಾಗೂ ಮಂಡ್ಯದ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಥಮ ಚಿಕಿತ್ಸೆ ಜತೆಗೆ ಡ್ರಿಪ್ ಹಾಕಲಾಗಿದೆ. ಅಸ್ವಸ್ಥರಲ್ಲಿ ಮಕ್ಕಳೇ ಹೆಚ್ಚಾಗಿದ್ದು ಎಲ್ಲರೂ ಅಪಾಯದಿಂದ ಪಾರಾಗಿದ್ದಾರೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ 'ಪ್ರಜಾವಾಣಿ'ಗೆ ತಿಳಿಸಿದರು.

ಚನ್ನಪಟ್ಟಣದ ವಧು ಹಾಗೂ ಮಾಗಡಿಯ ವರನ ಮದುವೆ ಕಾರ್ಯಕ್ರಮ ಚನ್ನಪಟ್ಟಣದಲ್ಲಿ ನಡೆಯುತ್ತಿತ್ತು. ಮಧ್ಯಾಹ್ನ ಊಟದ ನಂತರ ಐಸ್ ಕ್ರೀಂ ಸೇವಿಸಿದ್ದರು. ಸಂಜೆ ಹೊತ್ತಿಗೆ ಆರೋಗ್ಯದಲ್ಲಿ ಏರುಪೇರಾಗಿ ಅಸ್ವಸ್ಥರಾಗಿದ್ದಾರೆ. ಕೂಡಲೇ ಅಸ್ವಸ್ಥರನ್ನು ಮಾಗಡಿ ಮತ್ತು ಚನ್ನಪಟ್ಟಣ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮಂಡ್ಯ ಮತ್ತು ರಾಮನಗರ ಜಿಲ್ಲಾಸ್ಪತ್ರೆಗೆ ನಾಲ್ಕೈದು ಮಂದಿಯನ್ನು ಕರೆದೊಯ್ಯಲು ಶಿಫಾರಸು ಮಾಡಲಾಗಿದೆ. ಮದುವೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ. ಆಹಾರ ಮತ್ತು ಐಸ್ ಕ್ರೀಂ ಮಾದರಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿದೆ. ವರದಿ ಬಂದ ಬಳಿಕ ಕಾರಣ ಗೊತ್ತಾಗಲಿದೆ ಎಂದು ಆರೋಗ್ಯಾಧಿಕಾರಿ ತಿಳಿಸಿದರು.

ಅಸ್ವಸ್ಥರಾಗಿರುವವರು ಚನ್ನಪಟ್ಟಣದ ಯಾರಬ್ ನಗರ ಮತ್ತು ಕೋಟೆ ನಿವಾಸಿಗಳಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.


'ರೈತರಿಗೆ ಪರಿಹಾರ ವಿತರಿಸದ ಸರ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರದಿಂದ ಬರ ಪರಿಹಾರ ಬಂದ ತಕ್ಷಣವೇ ರೈತರಿಗೆ ವಿತರಿಸುವುದಾಗಿ ಹೇಳಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಈವರೆಗೂ ಪರಿಹಾರವನ್ನು ವಿತರಿಸಿಲ್ಲ. ಕಾಂಗ್ರೆಸ್ ಸರ್ಕಾರ ಇನ್ನೂ ಕುಂಭಕರ್ಣ ನಿದ್ರೆಯಲ್ಲಿದೆ' ಎಂದು ವಿಧಾನಸಭೆಯ ವಿರೋಧ ಪಕ್ಷದ ಆರ್.ಅಶೋಕ ಟೀಕಿಸಿದರು.

'ಕ್ಷಣಗಳು ಹೋಗಿ ಗಂಟೆಗಳಾಗಿ, ಈಗ ಹಲವು ದಿನಗಳೇ ಕಳೆದಿವೆ. ರೈತರು ಬಿಸಿಲ ಬೇಗೆಯಿಂದ ಕಂಗೆಟ್ಟು ಹೋಗಿದ್ದಾರೆ. ರೈತರ ಸಂಕಷ್ಟಕ್ಕೆ ಸ್ಪಂದಿಸದೇ ಬೇರೆಯದೇ ರಾಜಕಾರಣದಲ್ಲಿ ತೊಡಗಿರುವ ಕಟುಕ ಸರ್ಕಾರವಿದು' ಎಂದು ಅವರು ಭಾನುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಮೇವು ಇಲ್ಲದೇ ಜಾನುವಾರುಗಳನ್ನು ಕಟುಕರಿಗೆ ಮಾರಾಟ ಮಾಡುವ ಸ್ಥಿತಿಗೆ ರೈತರು ಬರುತ್ತಿರುವುದು ಬೇಸರದ ಸಂಗತಿ. ಈ ಸರ್ಕಾರ ಬೂಟಾಟಿಕೆಯಲ್ಲಿ ತೊಡಗಿದೆ. ರೈತರ ಸಂಕಷ್ಟಕ್ಕೆ ಸ್ಪಂದಿಸುವ ಗಂಭೀರತೆ ಎಲ್ಲೂ ಕಾಣಿಸುತ್ತಿಲ್ಲ' ಎಂದು ಅವರು ತಿಳಿಸಿದರು.



ಆರ್.ಅಶೋಕ

'ಕಳೆದ ವರ್ಷ ಮುಂಗಾರು, ಹಿಂಗಾರು ಮಳೆ ಕೈಕೊಟ್ಟಿತ್ತು. ಇಂಥ ಸಂದರ್ಭದಲ್ಲಿ ಉರಿಯುವ ಮನೆಯಲ್ಲಿ ಗಳ ಹಿರಿಯುವ ಕೆಲಸ ಸಿದ್ದರಾಮಯ್ಯ ಮಾಡುತ್ತಿದ್ದಾರೆ. ಇವರ ಯೋಗ್ಯತೆಗೆ ಇದುವರೆಗೆ ಒಂದು ನಯಾಪೈಸೆ ಕೂಡ ಬಿಡುಗಡೆ ಮಾಡಿಲ್ಲ. ಬರ ಪೀಡಿತ ಪ್ರದೇಶ ಘೋಷಣೆಯನ್ನೂ ವಿಳಂಬ ಮಾಡುತ್ತಾ ಹೋಗಿದ್ದರು. ಕೇಂದ್ರಕ್ಕೆ ಮೂರೂವರೆ ತಿಂಗಳು ತಡವಾಗಿ ಪರಿಹಾರಕ್ಕಾಗಿ ಮನವಿ ಪತ್ರ ಬರೆದರು' ಎಂದು ಅಶೋಕ ಟೀಕಿಸಿದರು.

'ಕೇಂದ್ರ ಸರ್ಕಾರ ಹಣವನ್ನು ಬಿಡುಗಡೆ ಮಾಡಿದ್ದರೂ ಕೂಡ ರೈತರಿಗೆ ಕೊಟ್ಟಿಲ್ಲ. ಸರ್ಕಾರದ ಖಜಾನೆ ಬರಿದಾಗಿದೆ. ಈ ಹಣವನ್ನು ಗ್ಯಾರಂಟಿಗೆ ಬಳಸಿಕೊಳ್ಳುವಂತಿದೆ. ರೈತರಿಗೆ ₹2,000 ವನ್ನು ಕಳೆದ 2–3 ತಿಂಗಳಿಂದ ಬಿಡುಗಡೆ ಮಾಡಿಲ್ಲ. ಒಂದೇ ಸಲ ಬಿಡುಗಡೆ ಮಾಡಿ ರಾಜಕಾರಣ ಮಾಡುವ ಉದ್ದೇಶವನ್ನು ಹೊಂದಿದೆ' ಎಂದರು.

'ಬರ ಪರಿಹಾರದ ಮೊತ್ತವನ್ನು ಕೇಳಿದರೆ, ಕಾಂಗ್ರೆಸ್ ಸಚಿವರು ಮತ್ತು ಶಾಸಕರು 'ನಿಮ್ಮ ಹೆಂಗಸ್ರಿಗೆ ₹2,000 ಕೊಟ್ಟಿಲ್ವ' ಎಂದು ಧಮ್ಕಿ ಹಾಕುತ್ತಿದ್ದಾರೆ. ಎಷ್ಟು ದಿನ ಗ್ಯಾರಂಟಿ ಹೆಸರಿನಲ್ಲಿ ರೈತರು, ಜನರಿಗೆ ಮೋಸ ಮಾಡುತ್ತೀರಿ? ಕೇಂದ್ರದ ಹಣ ಸದ್ಬಳಕೆ ಮಾಡುವಂತೆ ಮುಖ್ಯಮಂತ್ರಿಯವರಿಗೆ ಪತ್ರ ಬರೆಯುತ್ತೇನೆ' ಎಂದು ಅಶೋಕ ಹೇಳಿದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

'ಗಾಂಧಿ ಪಾರ್ಕ್‌ನಲ್ಲಿ ಕಸದ ರಾಶಿ'

ಉತ್ತರಹಳ್ಳಿ ಮುಖ್ಯರಸ್ತೆಯ ಕೆಎಸ್ಆರ್‌ಟಿಸಿ ಲೇಔಟ್‌ನಲ್ಲಿರುವ ಗಾಂಧಿ ಪಾರ್ಕ್ ಕಸದ ರಾಶಿಯಿಂದ ಗಬ್ಬು ನಾರುತ್ತಿದೆ. ನಿರ್ವಹಣಾ ಕೊರತೆಯಿಂದ ಉದ್ಯಾನ ಕಸದ ತೊಟ್ಟಿಯಾಗಿ ಮಾರ್ಪಟ್ಟಿದೆ. ಈ ಮೊದಲು ಉದ್ಯಾನದ ಸುತ್ತಲೂ ಕಬ್ಬಿಣದ ಬೇಲಿಗಳನ್ನು ಅಳವಡಿಸಲಾಗಿತ್ತು. ಉದ್ಯಾನದ ಒಳಗಡೆ ಕೊಳವೆ ಬಾವಿ ಕೊರೆಯುವ ವೇಳೆ ಕಬ್ಬಿಣದ ಬೇಲಿಗಳನ್ನು ತೆಗೆದು, ಪಕ್ಕದಲ್ಲಿ ಇಡಲಾಗಿತ್ತು. ಆ ಬೇಲಿಗಳು ಈಗ ಕಣ್ಮರೆಯಾಗಿವೆ. ಬಿಬಿಎಂಪಿ ಕೂಡ ಈ ಬಗ್ಗೆ ಗಮನಹರಿಸಿಲ್ಲ. ಈ ಉದ್ಯಾನದಲ್ಲಿನ ಕಲ್ಲಿನ ಆಸನಗಳು ಮದ್ಯವ್ಯಸನಿಗಳಿಗೆ ಸಹಕಾರಿಯಾಗಿದೆ. ಮದ್ಯದ ಬಾಟಲಿ, ಪ್ಲಾಸ್ಟಿಕ್ ಲೋಟಗಳನ್ನು ಎಲ್ಲೆಂದರಲ್ಲಿ ಕಾಣಬಹುದಾಗಿದೆ. ವಿವಾಹ ಸೇರಿ ವಿವಿಧ ಶುಭ ಸಮಾರಂಭಗಳಲ್ಲಿ ಬಳಸಲಾಗುವ ತೆಂಗಿನ ಗರಿಗಳನ್ನೂ ಉದ್ಯಾನದ ಬಳಿಯೇ ಹಾಕಲಾಗುತ್ತಿದೆ. ಇಲ್ಲಿಯೇ ಶುದ್ಧ ಕುಡಿಯುವ ನೀರಿನ ಘಟಕವಿದೆ. ತ್ಯಾಜ್ಯಗಳನ್ನು ಇಲ್ಲಿ ಹಾಕುತ್ತಿರುವುದರಿಂದ ನೀರನ್ನು ಹಿಡಿಯಲೂ ಸಮಸ್ಯೆ ಆಗುತ್ತಿದೆ. ಆದ್ದರಿಂದ ಬಿಬಿಎಂಪಿ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಿ, ಕ್ರಮಕೈಗೊಳ್ಳಬೇಕು.

ಮೂರ್ತಿ, ಕೆಎಸ್ಆರ್‌ಟಿಸಿ ಲೇಔಟ್



ಗಾಂಧಿ ಪಾರ್ಕ್‌ನ ವಿವಿಧೆಡೆ ಕಸ ಎಸೆದಿರುವುದು

'ಗುಂಡಿಗಳಿಂದ ಕೂಡಿದ ರಸ್ತೆ'



ಮಯೂರಿ ಹೋಟೆಲ್ ಸಿಗ್ನಲ್‌ನಿಂದ ಇಸ್ರೊ ಕಡೆಗೆ ಹೋಗುವ ರಸ್ತೆ ಕಿತ್ತು ಹೋಗಿರುವುದು

ನ್ಯೂ ಬಿಇಎಲ್ ರಸ್ತೆಯಲ್ಲಿರುವ ಮಯೂರಿ ಹೋಟೆಲ್ ಸಿಗ್ನಲ್‌ನಿಂದ ಇಸ್ರೊ ಕಡೆಗೆ ಹೋಗುವ ರಸ್ತೆ ಸಂಪೂರ್ಣ ಕಿತ್ತುಹೋಗಿ, ಗುಂಡಿಗಳಿಂದ ಕೂಡಿದೆ. ನೆಲದಡಿಯಲ್ಲಿ ಕೇಬಲ್ ಅಳವಡಿಸುವವರು ರಸ್ತೆಯನ್ನು ಅಗೆದಿದ್ದರು. ಸರಿಯಾಗಿ ಮುಚ್ಚದಿದ್ದರಿಂದ ರಸ್ತೆ ಒಂದು ಭಾಗವು ಸಂಪೂರ್ಣ ಕಿತ್ತುಹೋಗಿದೆ. ಇದರಿಂದಾಗಿ ವಾಹನ ಸಂಚಾರ ದುಸ್ತರವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಕಡೆಗೆ ಗಮನ ಹರಿಸುವ ಗೋಜಿಗೆ ಹೋಗಿಲ್ಲ. ಈಗಲಾದರೂ ಅಧಿಕಾರಿಗಳು ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಬಂದಗಾರ್ ಶಿವಾಜಿ, ನ್ಯೂ ಬಿಇಎಲ್ ರಸ್ತೆ

'ಮಳೆಗೆ ಕಿತ್ತುಹೋದ ರಸ್ತೆ'

ಕಳಪೆ ಕಾಮಗಾರಿಯಿಂದಾಗಿ ಮಳೆಗೆ ನಗರದ ರಸ್ತೆಗಳು ಕಿತ್ತು ಹೋಗುತ್ತಿವೆ. ಕೇವಲ 15 ನಿಮಿಷಗಳು ಸುರಿದ ಮೊದಲ ಮಳೆಗೆ ನಾಗರಬಾವಿಯ 80 ಅಡಿ ರಸ್ತೆ ಕಿತ್ತು ಹೋಗಿದೆ. ಈ ರಸ್ತೆಯನ್ನು ಹೊಸದಾಗಿ ನಿರ್ಮಿಸಲಾಗಿತ್ತು. ಮಳೆಗಾಲ ಪ್ರಾರಂಭವಾಗುವ ಮೊದಲೇ ಈ ಪರಿಸ್ಥಿತಿಯಾದರೆ ಮುಂದೇನು? ಕಿತ್ತು ಹೋದ ರಸ್ತೆಯ ಕಲ್ಲು, ಮಣ್ಣುಗಳು ಚರಂಡಿ ಸೇರಿವೆ. ಅಧಿಕಾರಿಗಳು ಈಗಲೇ ಎಚ್ಚೆತ್ತುಕೊಂಡು ಕ್ರಮವಹಿಸಬೇಕು.

ಕುಮಾರ್, ನಾಗರಬಾವಿ



ನಾಗರಬಾವಿಯ 80 ಅಡಿ ರಸ್ತೆ ಕಿತ್ತು ಹೋಗಿರುವುದು

'ಪಾದಚಾರಿ ಮಾರ್ಗ ಸ್ವಚ್ಛಗೊಳಿಸಿ'



ಇಂದಿರಾನಗರದಿಂದ ಈಜಿಪುರಕ್ಕೆ ಸಾಗುವ ಹೊರವರ್ತುಲ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಸ ಹಾಕಿರುವುದು

ಇಂದಿರಾನಗರದಿಂದ ಈಜಿಪುರಕ್ಕೆ ಸಾಗುವ ಹೊರವರ್ತುಲ ರಸ್ತೆಯ ಪಾದಚಾರಿ ಮಾರ್ಗದುದ್ದಕ್ಕೂ ಕಸ ಹಾಕಲಾಗಿದೆ. ಇದನ್ನು ವಿಲೇವಾರಿ ಮಾಡದಿದ್ದರಿಂದ ಕಸದ ರಾಶಿ ದಿನದಿಂದ ದಿನಕ್ಕೆ ದೊಡ್ಡದಾಗುತ್ತಿದೆ. ಇದರಿಂದಾಗಿ ಪಾದಚಾರಿ ಮಾರ್ಗದಲ್ಲಿ ಓಡಾಡದ ಸ್ಥಿತಿ ನಿರ್ಮಾಣವಾಗಿದೆ. ಈ ಕಸವು ಗಾಳಿಗೆ ರಸ್ತೆಗಳಿಗೆ ಬರುತ್ತಿದೆ. ಮಳೆ ಬಂದಲ್ಲಿ ಇನ್ನಷ್ಟು ಸಮಸ್ಯೆಯಾಗುತ್ತದೆ. ಪಾದಚಾರಿ ಮಾರ್ಗದಲ್ಲಿ ಕಸ ಹಾಕದಂತೆ ಹಾಗೂ ಈಗ ಇರುವ ಕಸದ ವಿಲೇವಾರಿಗೆ ತುರ್ತಾಗಿ ಕ್ರಮಕೈಗೊಳ್ಳಬೇಕು.

ನೀತು, ಸ್ಥಳೀಯ ನಿವಾಸಿ

'ರಸ್ತೆಯ ಪಕ್ಕದಲ್ಲಿ ಕಸದ ರಾಶಿ'

ದಾಸರಹಳ್ಳಿ ವಿಧಾನಸಭೆ ವ್ಯಾಪ್ತಿಯ ಚಿಕ್ಕಬಾಣಾವರದ ರಸ್ತೆ ಬದಿಯಲ್ಲಿ ಹಲವು ದಿನಗಳಿಂದ ಕಸದ ರಾಶಿ ಹಾಗೇ ಉಳಿದಿದೆ. ಅಧಿಕಾರಿಗಳಿಗೆ ದೂರು ನೀಡಿದರೂ ಈ ಬಗ್ಗೆ ಕ್ರಮಕೈಗೊಂಡಿಲ್ಲ. ಇದರಿಂದಾಗಿ ರಸ್ತೆಯು ಕಸದ ತೊಟ್ಟಿಯಾಗಿ ಪರಿಣಮಿಸಿದೆ. ರಸ್ತೆಯಲ್ಲಿ ನಡೆದಾಡಲೂ ಸಾಧ್ಯವಾಗದ ರೀತಿಯಲ್ಲಿ ಕಸ ಸುರಿಯಲಾಗುತ್ತಿದೆ. ಇವು ಕ್ರಮೇಣ ಕೊಳೆತು ದುರ್ನಾತ ಬೀರುತ್ತವೆ. ಇದರಿಂದ ರಸ್ತೆಯಲ್ಲಿ ಮೂಗು ಮುಚ್ಚಿಕೊಂಡೇ ಸಾಗುವ ಪರಿಸ್ಥಿತಿ ಇದೆ. ರಸ್ತೆಯಲ್ಲೆಲ್ಲ ತ್ಯಾಜ್ಯ ಹರಡಿ, ವಾಹನ ಸವಾರರು ಮತ್ತು ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ. ರಸ್ತೆ ಬದಿಯ ಚರಂಡಿಯನ್ನೂ ಸ್ವಚ್ಛಗೊಳಿಸಬೇಕಿದೆ. ಇಲ್ಲಿ ಕಸ ಹಾಕದಂತೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು

ಚನ್ನಿಗಪ್ಪಗೌಡ, ಗಣಪತಿನಗರ



ಚಿಕ್ಕಬಾಣಾವರದ ರಸ್ತೆ ಬದಿಯಲ್ಲಿ ಕಸದ ರಾಶಿ ಹಾಕಿರುವುದು








ಶಿಕಾರಿಪುರ ಪಟ್ಟಣದಲ್ಲಿ ಭಾನುವಾರ ಕಾಂಗ್ರೆಸ್ ಅಭ್ಯರ್ಥಿ ಗೀತಾ ಶಿವರಾಜಕುಮಾರ್ ರೋಡ್ ಶೋ ಮೂಲಕ ಮತಯಾಚಿಸಿದರು. ನಟ ಶಿವರಾಜಕುಮಾರ್, ದುನಿಯಾ ವಿಜಯ್ ಇದ್ದರು –ಪ್ರಜಾವಾಣಿ ಚಿತ್ರ/ ಎಚ್.ಎಸ್.ರಘು (1) ಶಿರಾಳಕೊಪ್ಪದಲ್ಲಿ ಭಾನುವಾರ ರಾಜ್ಯ ಬಿಜೆಪಿ ಅಧ್ಯಕ್ಷ ಹಾಗೂ ಶಿಕಾರಿಪುರದ ಶಾಸಕ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಬಿಜೆಪಿ ಅಭ್ಯರ್ಥಿ ಬಿ.ವೈ.ರಾಘವೇಂದ್ರ ಪರವಾಗಿ ರೋಡ್ ಶೋ ಮೂಲಕ ಮತ ಯಾಚಿಸಿದರು. –ಪ್ರಜಾವಾಣಿ ಚಿತ್ರ/ ಎಂ.ನವೀನ ಕುಮಾರ್ (2) ಹರಿಹರದಲ್ಲಿ ಭಾನುವಾರ ಪ್ರದೇಶ ಕಾಂಗ್ರೆಸ್ ಸಮಿತಿವತಿಯಿಂದ ಆಯೋಜಿಸಲಾಗಿದ್ದ 'ಪ್ರಜಾಧ್ವನಿ–2' ಪ್ರಚಾರ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಪಕ್ಷದ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ ಪರ ಮತ ಯಾಚಿಸಿದರು. ಎಸ್.ಎಸ್.ಮಲ್ಲಿಕಾರ್ಜುನ ಮತ್ತಿತರರು ಪಾಲ್ಗೊಂಡಿದ್ದರು (3)

ಮಾಳವೀಯ, ನಡ್ಡಾ, ವಿಜಯೇಂದ್ರ ವಿರುದ್ಧ ಎಫ್ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೀಸಲಾತಿಗೆ ಸಂಬಂಧಿಸಿದಂತೆ ತಪ್ಪು ಮಾಹಿತಿಯುಳ್ಳ ವಿಡಿಯೊ ತುಣುಕನ್ನು ಬಿಜೆಪಿ ರಾಜ್ಯ ಘಟಕದ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡು ದ್ವೇಷ ಸೃಷ್ಟಿಸಲು ಯತ್ನಿಸಿದ್ದ ಆರೋಪದ ಮೇಲೆ ಬಿಜೆಪಿ ರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಿಸಲಾಗಿದೆ.

'ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ವರ್ಗಗಳನ್ನು ಮೊಟ್ಟೆಗಳೆಂದು ಬಿಂಬಿಸಿ, ಆ ಮೊಟ್ಟೆಗಳಿರುವ ಬುಟ್ಟಿಗೆ ಮುಸ್ಲಿಂ ಮೊಟ್ಟೆಯನ್ನು ರಾಹುಲ್ ಗಾಂಧಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ತಂದಿರಿಸಿದ್ದಾರೆ. ಮರಿಯಾದ ಬಳಿಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಮರಿಗಳಿಗೆ ಸೇರಬೇಕಾದ ಅನುದಾನವನ್ನು ಮುಸ್ಲಿಂ ಮರಿಗಳಿಗೆ ಮಾತ್ರ ನೀಡುತ್ತಾರೆ...' ಎಂಬ ಹೇಳಿಕೆಯುಳ್ಳ ವಿಡಿಯೊ ತುಣುಕನ್ನು ಬಿಜೆಪಿ ರಾಜ್ಯ ಘಟಕದ 'ಎಕ್ಸ್' ಖಾತೆಯಲ್ಲಿ ಶನಿವಾರ ಹಂಚಿಕೊಳ್ಳಲಾಗಿತ್ತು.

ಈ ಕುರಿತು ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಮುಖ್ಯಸ್ಥ ರಮೇಶ್ ಬಾಬು, ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಪ್ರಧಾನಿ ಹುದ್ದೆಯಲ್ಲಿದ್ದರೂ ನರೇಂದ್ರ ಮೋದಿ ದ್ವೇಷದ ಮಾತು ಬಿಟ್ಟಿಲ್ಲ: ಸಿದ್ದರಾಮಯ್ಯ ವಾಗ್ದಾಳಿ

'ಚುನಾವಣೆ 2ನೇ ಸ್ವಾತಂತ್ರ್ಯ ಸಂಗ್ರಾಮ'

ಪ್ರಜಾವಾಣಿ ವಾರ್ತೆ



ಬೆಳಗಾವಿ: 'ಈ ಬಾರಿಯ ಲೋಕಸಭೆ ಚುನಾವಣೆ ಎರಡನೇ ಸ್ವಾತಂತ್ರ್ಯ ಸಂಗ್ರಾಮ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಪ್ರಧಾನಿ ಹುದ್ದೆಯಲ್ಲಿದ್ದರೂ ನರೇಂದ್ರ ಮೋದಿ ದ್ವೇಷದ ಮಾತು ಬಿಟ್ಟಿಲ್ಲ. ಬಜರಂಗದಳದ ಕಾರ್ಯಕರ್ತರಂತೆ ಮಾತನಾಡುತ್ತಿದ್ದಾರೆ. ಇಂಥವರಿಗೆ ಚಾಟಿ ಬೀಸುವ ಅವಕಾಶ ಈಗ ಮತದಾರರಿಗೆ ಒದಗಿಬಂದಿದೆ' ಎಂದು ಅವರು ನಗರದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ದಶಕದವರೆಗೆ ಆಡಳಿತ ಮಾಡಿದ ಮೋದಿ ಒಂದೂ ಸಾಧನೆ ಹೇಳಿಕೊಳ್ಳುತ್ತಿಲ್ಲ. ಬದಲಿಗೆ ದೇಶ ಒಡೆಯುವ ಕೆಲಸ ಮುಂದುವರಿಸಿದ್ದಾರೆ. ಧರ್ಮ ಕ್ರೋಡೀಕರಣ, ಮತಗಳ ಕ್ರೋಡೀಕರಣ ನಡೆಸಿದ್ದಾರೆ' ಎಂದೂ ಹರಿಹಾಯ್ದರು.

'ಇಂಥ ರಾಜಕಾರಣದಿಂದ ದೇಶ ಉಳಿಸುವ ಸಲುವಾಗಿಯೇ ರಾಹುಲ್ ಗಾಂಧಿ ಭಾರತ ಜೋಡೊ ಯಾತ್ರೆ, ನ್ಯಾಯ ಯಾತ್ರೆ ಮಾಡಿದರು. ಯಾತ್ರೆಗಳ ಮೂಲಕ ಜನರ ನೋವು ಏನೆಂದು ಅರಿತರು. 25 ಗ್ಯಾರಂಟಿಗಳನ್ನು ಘೋಷಣೆ ಮಾಡಿದ್ದು ಕೂಡ ದೇಶವನ್ನು ರಕ್ಷಿಸುವುದಕ್ಕಾಗಿ' ಎಂದು ಹೇಳಿದರು.

'ಕಾಂಗ್ರೆಸ್‌ನ ಗ್ಯಾರಂಟಿಗಳಿಂದಾಗಿ ಪ್ರಧಾನಿ ಹತಾಶರಾಗಿದ್ದಾರೆ. ಸೋಲುವ ಭೀತಿ ಕಾಡುತ್ತಿದೆ. ಸಂವಿಧಾನ ಬದಲಾಯಿಸುತ್ತೇವೆ ಎಂದು ಹೇಳುತ್ತಿದ್ದವರು ಈಗ 'ಸಂವಿಧಾನವೇ ನಮ್ಮ ಧರ್ಮಗ್ರಂಥ' ಎಂದು ಜಾಹೀರಾತು ನೀಡುತ್ತಿದ್ದಾರೆ. ಅಂತರಂಗದಲ್ಲಿ ಒಂದು, ಬಹಿರಂಗದಲ್ಲಿ ಇನ್ನೊಂದು ನಡತೆ ಎದ್ದುಕಾಣುತ್ತಿದೆ' ಎಂದೂ ಟೀಕಿಸಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 'ಮಾಂಗಲ್ಯದ ಬಗ್ಗೆ ಮಾತನಾಡುವ ಹಕ್ಕು, ನೈತಿಕತೆ ಈ ಪ್ರಧಾನಿಗೆ ಇಲ್ಲ. ಮನಮೋಹನ ಸಿಂಗ್ ಅವರು ಪ್ರಧಾನಿ ಆಗಿದ್ದಾಗ ಒಂದು ತೊಲ ಚಿನ್ನಕ್ಕೆ ₹24 ಸಾವಿರ ದರವಿತ್ತು. ಈಗ ₹74 ಸಾವಿರ ಆಗಿದೆ. ಮಾಂಗಲ್ಯ ಕಿತ್ತುಕೊಂಡಿದ್ದು ಯಾರು ಹಾಗಾದರೆ? ಇದರ ಬಗ್ಗೆ ಮಾತನಾಡುವ ಧೈರ್ಯವಾದರೂ ಹೇಗೆ ಮಾಡುತ್ತಾರೆ?' ಎಂದು ಕಿಡಿ ಕಾರಿದರು.

'ಈ ಚುನಾವಣೆ 'ಕಾಂಗ್ರೆಸ್‌ನ ಭರವಸೆ– ಬಿಜೆಪಿಯ ಬುರುಡೆ' ಎಂಬ ತತ್ವದ ಮೇಲೆ ನಡೆಯುತ್ತಿದೆ. ಜನರ ಬದುಕನ್ನು ಮರೆತು ಕೇವಲ ಭಾವನೆಗಳ ಮೇಲೆ ಮಾತನಾಡುತ್ತಿದ್ದಾರೆ. ಒಂದು ವೋಟಿಗೆ ನಾವು ಹತ್ತು ಗ್ಯಾರಂಟಿಗಳನ್ನು ನೀಡುತ್ತಿದ್ದೇವೆ' ಎಂದು ಹೇಳಿದರು.



ಬಿಜೆಪಿ– ಜೆಡಿಎಸ್‌ನವರು ಈಗ ಒಂದೇ ಮಂಚದ ಮೇಲಿದ್ದಾರೆ. ನಮ್ಮ ಹೆಣ್ಣುಮಕ್ಕಳ ಗೌರವ, ಸ್ವಾಭಿಮಾನಕ್ಕೆ ಧಕ್ಕೆ ತರಲು ನಾವು ಬಿಡುವುದಿಲ್ಲ

ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ



ಸಂತ್ರಸ್ತ ಹೆಣ್ಣುಮಕ್ಕಳ ಕಾನೂನು ಹೋರಾಟಕ್ಕೆ ಸಿದ್ದರಾಮಯ್ಯ ಆರ್ಥಿಕ ನೆರವು ನೀಡಲು ಮುಂದಾಗಿದ್ದಾರೆ. ಅವರ, ಆರೋಪಿಗೆ ಬಿಜೆಪಿ ರಕ್ಷಣೆ ನೀಡುತ್ತಿದೆ

ರಣದೀಪ್ ಸಿಂಗ್ ಸುರ್ಜೇವಾಲಾ ಎಐಸಿಸಿ ಪ್ರಧಾನ ಕಾರ್ಯದರ್ಶಿ

ಸಿ.ಎಂ ಹೇಳಿದ್ದೇನು?

- ಬಿಜೆಪಿಯಿಂದ ಧರ್ಮ ಕ್ರೋಡೀಕರಣ, ಮತಗಳ ಕ್ರೋಡೀಕರಣ
- ಕಾಂಗ್ರೆಸ್‌ನ ಗ್ಯಾರಂಟಿಗಳಿಂದಾಗಿ ಹತಾಶರಾದ ಪ್ರಧಾನಿ

'ಕೈ' ಮುಖಂಡನ ಕಪಾಳಕ್ಕೆ ಹೊಡೆದ ಡಿಕೆಶಿ

ಹಾವೇರಿ: ಜಿಲ್ಲೆಯ ಸವಣೂರು ಪಟ್ಟಣಕ್ಕೆ ಶನಿವಾರ ರಾತ್ರಿ ಚುನಾವಣಾ ಪ್ರಚಾರಕ್ಕೆ ಬಂದಿದ್ದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಾಂಗ್ರೆಸ್ ಮುಖಂಡನಿಗೆ ಕಪಾಳಕ್ಕೆ ಹೊಡೆದಿದ್ದಾರೆ.

ಧಾರವಾಡ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವಿನೋದ ಅಸೂಟಿ ಪರ ಪ್ರಚಾರಕ್ಕೆ ಬಂದಿದ್ದ ವೇಳೆ, 'ಡಿ.ಕೆ. ಡಿ.ಕೆ' ಎಂದು ಕಾರ್ಯಕರ್ತರು ಘೋಷಣೆ ಹಾಕಿದರು. ಕಾರಿನಿಂದ ಇಳಿದ ಡಿ.ಕೆ. ಶಿವಕುಮಾರ್ ಅವರು, ತಮ್ಮ ಹೆಗಲ ಮೇಲೆ ಕೈ ಹಾಕಿದ ಎಂಬ ಕಾರಣಕ್ಕಾಗಿ ಪುರಸಭೆ ಸದಸ್ಯ ಅಲ್ಲಾವುದ್ದೀನ್ ಮನಿಯಾರ್ ಎಂಬವರಿಗೆ ಕಪಾಳಕ್ಕೆ ಹೊಡೆದಿದ್ದಾರೆ. ಅಲ್ಲದೇ ಕಾರ್ಯಕರ್ತನ ವರ್ತನೆ ಬಗ್ಗೆ ಅಲ್ಲಿಯೇ ಅಸಮಾಧಾನ ಹೊರಹಾಕಿದ್ದಾರೆ.

'ಇದರಿಂದ ಅಕ್ಷಪಕ್ಷದಲ್ಲಿದ್ದ ಪಕ್ಷದ ಸ್ಥಳೀಯ ಮುಖಂಡರು ಒಂದು ಕ್ಷಣ ತಬ್ಬಿಬ್ಬಾದರು. ಆಗ ಅಲ್ಲಿದ್ದ ಪೊಲೀಸರು ಪುರಸಭೆ ಸದಸ್ಯನನ್ನು ಪಕ್ಕಕ್ಕೆ ತಳ್ಳಿ ಕಳುಹಿಸಿದರು. ಡಿ.ಕೆ.ಶಿವಕುಮಾರ್ ಆತನಿಗೆ ಹೊಡೆದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

'ಕಾಂಗ್ರೆಸ್ ಸಂಸ್ಕೃತಿ ತೋರಿಸುತ್ತದೆ'

ಹುಬ್ಬಳ್ಳಿ: 'ಕಾಂಗ್ರೆಸ್ ನಲ್ಲಿ ಆ ಪಕ್ಷದ ಸ್ವಂತ ಕಾರ್ಯಕರ್ತರಿಗೇ ರಕ್ಷಣೆ, ಮರ್ಯಾದೆ ಇಲ್ಲದಾಗಿದೆ. ಇನ್ನು ಇವರು ಜನಸಾಮಾನ್ಯರಿಗೆ ಯಾವ ರಕ್ಷಣೆ, ಮರ್ಯಾದೆ ಕೊಡುತ್ತಾರೆ?' ಎಂದು ಪ್ರಶ್ನಿಸಿರುವ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, 'ಮುಂದೊಂದು ದಿನ ಕಾರ್ಯಕರ್ತರೇ ಇವರಿಗೆ ಬುದ್ಧಿ ಕಲಿಸಲಿದ್ದಾರೆ' ಎಂದು ಎಚ್ಚರಿಸಿದ್ದಾರೆ.

ಡಿ.ಕೆ. ಶಿವಕುಮಾರ್ ಕಾಂಗ್ರೆಸ್ ಪಕ್ಷದ ಪುರಸಭೆ ಸದಸ್ಯನಿಗೆ ಕಪಾಳ ಮೋಕ್ಷ ಮಾಡಿರುವ ಬಗ್ಗೆ ಜೋಶಿ ತಮ್ಮ 'ಎಕ್ಸ್' ಖಾತೆಯಲ್ಲಿ ಹೀಗೆ ಪ್ರತಿಕ್ರಿಯಿಸಿದ್ದಾರೆ. 'ಸದ್ಯ, ಆ ಸದಸ್ಯ ಮಹಾತ್ಮ ಗಾಂಧಿ ಹೇಳಿದಂತೆ ತಮ್ಮ ಇನ್ನೊಂದು ಕೆನ್ನೆ ತೋರಿಸುವ ಸಾಹಸ ಮಾಡಲಿಲ್ಲ. ಅದೇ ಪುಣ್ಯ' ಎಂದಿರುವ ಜೋಶಿ, 'ಇದು ಕಾಂಗ್ರೆಸ್ಸಿನ ಸಂಸ್ಕೃತಿಯನ್ನು ತೋರಿಸುತ್ತದೆ' ಎಂದು ಲೇವಡಿ ಮಾಡಿದ್ದಾರೆ.

ಬಹಿರಂಗಕ್ಕೆ ತೆರೆ; ಅಂತರಂಗಕ್ಕೆ ಮೊರೆ

ಒಂದನೇ ಪುಟದಿಂದ...

ಪ್ರಧಾನಿ ನರೇಂದ್ರ ಮೋದಿ ಎರಡು ದಿನ ಸತತವಾಗಿ ಶಿರಸಿ, ಬೆಳಗಾವಿ, ಬಳ್ಳಾರಿ, ಬಾಗಲಕೋಟೆ ಮತ್ತು ದಾವಣಗೆರೆಯಲ್ಲಿ ಬಹಿರಂಗ ಸಭೆಗಳಲ್ಲಿ ಪಾಲ್ಗೊಂಡು ಮತದಾರರನ್ನು ಬಿಜೆಪಿಯತ್ತ ಸೆಳೆಯುವ ಪ್ರಯತ್ನ ಮಾಡಿದ್ದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾವೇರಿ, ಹುಬ್ಬಳ್ಳಿ–ಧಾರವಾಡ, ಕಲಬುರಗಿ, ಚಿಕ್ಕೋಡಿ ಕ್ಷೇತ್ರಗಳಲ್ಲಿ ಪ್ರಚಾರ ನಡೆಸಿದ್ದಾರೆ.

ಎಐಸಿಸಿ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಶಿವಮೊಗ್ಗ, ರಾಯಚೂರು, ಕಲಬುರಗಿಯಲ್ಲಿ ಪ್ರಚಾರ ನಡೆಸಿದ್ದಾರೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ದಾವಣಗೆರೆ, ಹಾವೇರಿ, ಕಲಬುರಗಿಯಲ್ಲಿ ಪ್ರಚಾರದಲ್ಲಿ ಭಾಗಿಯಾಗಿದ್ದರು. ತಮ್ಮ ಅಳಿಯನನ್ನು ಗೆಲ್ಲಿಸಿಕೊಳ್ಳುವ ಉದ್ದೇಶದಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಲಬುರಗಿ ಕ್ಷೇತ್ರದ ಪ್ರಚಾರದಲ್ಲೇ ಹೆಚ್ಚು ಮಗ್ನರಾಗಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಹುತೇಕ ಎಲ್ಲ ಕ್ಷೇತ್ರಗಳಲ್ಲೂ ಪ್ರಚಾರ ನಡೆಸಿದ್ದಾರೆ. ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಕೂಡ ಹೆಚ್ಚಿನ ಕ್ಷೇತ್ರಗಳಲ್ಲಿ ಪ್ರಚಾರದಲ್ಲಿ ಭಾಗಿಯಾಗಿದ್ದರು.

ಮೊದಲ ಹಂತದ ಚುನಾವಣೆ ಮುಗಿದ ಬೆನ್ನಲ್ಲೇ, ಎಲ್ಲ ಕ್ಷೇತ್ರಗಳಲ್ಲಿ ಓಡಾಡಿ ಮೈತ್ರಿಕೂಟದ ಅಭ್ಯರ್ಥಿಗಳನ್ನು ಗೆಲ್ಲಿಸುವುದಾಗಿ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ದೇವೇಗೌಡ ಹೇಳಿದ್ದರು. ಆದರೆ, ಮೊಮ್ಮಗ ಪ್ರಜ್ವಲ್ ರೇವಣ್ಣ ಅವರ ಲೈಂಗಿಕ ಹಗರಣ ಹೊರಬಂದ ಬಳಿಕ ಅವರು ಮನೆಯಿಂದ ಹೊರಬರಲಿಲ್ಲ. ಆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಕೆಲವೆಡೆ ಪ್ರಚಾರದಲ್ಲಿ ಭಾಗಿಯಾಗಿ, ಬಿಜೆಪಿ ಪರ ಮತ ಯಾಚಿಸಿದರು.

ಮೊದಲ ಹಂತಕ್ಕೆ ಹೋಲಿಸಿದರೆ ಎರಡನೇ ಹಂತದಲ್ಲಿ ಮತದಾನ ನಡೆಯುವ ಕ್ಷೇತ್ರಗಳಲ್ಲಿ ಬಹಿರಂಗ ಪ್ರಚಾರ ತುಸು ಬಿರುಸಿನಿಂದಲೇ ನಡೆಯಿತು. ಬಿಜೆಪಿ– ಕಾಂಗ್ರೆಸ್ ನಾಯಕರು ನೇರಾನೇರ ಆರೋಪ–ಪ್ರತ್ಯಾರೋಪಕ್ಕೆ ಇಳಿದಿದ್ದರು. ನಿತ್ಯವೂ ಹೊಸ ವಿಷಯ ತೇಲಿಬಿಟ್ಟು ರಾಜಕೀಯ ಲಾಭ ಪಡೆಯುವ ಪ್ರಯತ್ನವೂ ನಡೆಯಿತು.

ಮನೆ, ಮನೆ ಪ್ರಚಾರ: ಸೋಮವಾರ 'ಇಡೀ ದಿನ ಮನೆ, ಮನೆ ಪ್ರಚಾರಕ್ಕೆ ಅವಕಾಶವಿದೆ. ಕೊನೆಯ ಕ್ಷಣಗಳಲ್ಲಿ ಮತದಾರರ ಮನವೊಲಿಕೆ ಮಾಡಲು ಅಭ್ಯರ್ಥಿಗಳು ಸಜ್ಜಾಗಿದ್ದಾರೆ.

ಮೈತ್ರಿಯ ಭವಿಷ್ಯ: ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣ ಬಿಜೆಪಿ– ಜೆಡಿಎಸ್ ಮೈತ್ರಿಯ ಭವಿಷ್ಯದ ಮೇಲೆ ಪರಿಣಾಮ ಬೀರುವುದೇ ಎಂಬ ಚರ್ಚೆ ರಾಜಕೀಯ ವಲಯದಲ್ಲಿ ಬಿರುಸಾಗಿದೆ. ಮೈತ್ರಿ ಮುಂದುವರಿಕೆ ಕುರಿತು ಬಿಜೆಪಿ ನಾಯಕರ ಮಧ್ಯೆಯೂ ಚಿಂತನ–ಮಂಥನ ಆರಂಭವಾಗಿದೆ.

ಜೂನ್ 3 ರಂದು ವಿಧಾನಪರಿಷತ್‌ನ ಆರು ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಈ ಚುನಾವಣೆಯನ್ನೂ ಮೈತ್ರಿಕೂಟದ ಮೂಲಕ ಎದುರಿಸಬೇಕೆ? ಅಥವಾ ಸ್ವತಂತ್ರವಾಗಿ ಎದುರಿಸಬೇಕೆ ಎಂಬ ಪ್ರಶ್ನೆ ರಾಜ್ಯದ ಬಿಜೆಪಿ ನಾಯಕರ ಮುಂದಿದೆ. ಪ್ರಜ್ವಲ್ ಭಾಗಿಯಾಗಿದ್ದಾರೆ ಎನ್ನಲಾದ ಲೈಂಗಿಕ ಹಗರಣ ಬಿಜೆಪಿಗೆ ತೀವ್ರ ಮುಜುಗರ ಉಂಟು ಮಾಡಿದೆ. ಈ ಹಿನ್ನೆಲೆಯಲ್ಲಿ ಮೈತ್ರಿ ಮುಂದುವರಿಸುವ ಅಗತ್ಯವಿದೆಯೇ ಎಂಬ ಚರ್ಚೆ ಬಿಜೆಪಿ ರಾಜ್ಯ ಘಟಕದಲ್ಲಿ ನಡೆದಿದೆ ಎಂದು ಮೂಲಗಳು ಹೇಳಿವೆ.

ಈ ಮಧ್ಯೆ ಜೆಡಿಎಸ್ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಜತೆ ಚರ್ಚೆ ನಡೆಸಿ, ಪ್ರಜ್ವಲ್ ಪ್ರಕರಣದ ವಿಚಾರವಾಗಿ ನಡೆಯುತ್ತಿರುವ ಬೆಳವಣಿಗೆಗಳ ಕುರಿತು ಸಂಪೂರ್ಣ ಮಾಹಿತಿ ನೀಡಿದ್ದಾರೆ. ಅಮಿತ್ ಶಾ ಅವರು ಎರಡೂ ಪಕ್ಷಗಳ ಮಧ್ಯೆ ಮೈತ್ರಿ ಮುಂದುವರಿಸುವ ಬಗ್ಗೆ ಸ್ಪಷ್ಟ ಸೂಚನೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಕುರಿತು ಪ್ರತಿಕ್ರಿಯಿಸಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, 'ಎಚ್.ಡಿ.ಕುಮಾರಸ್ವಾಮಿ ಮತ್ತು ಅಮಿತ್ ಶಾ ಅವರು ಏನು ಮಾತನಾಡಿದ್ದಾರೆ ಎನ್ನುವುದು ಗೊತ್ತಿಲ್ಲ. ಮೈತ್ರಿ ತೀರ್ಮಾನ ಕೇಂದ್ರ ಮಟ್ಟದಲ್ಲಿ ಆಗಿದೆ. ಮೈತ್ರಿ ಮುಂದುವರಿಸುವ ಬಗ್ಗೆ ವರಿಷ್ಠರೇ ತೀರ್ಮಾನ ಮಾಡುತ್ತಾರೆ.

ಪದವೀಧರ, ಶಿಕ್ಷಕರ ಕ್ಷೇತ್ರಗಳ ಚುನಾವಣೆಯಲ್ಲಿ ಮೈತ್ರಿ ಮಾಡಿಕೊಳ್ಳುವ ಬಗ್ಗೆ ಕೇಂದ್ರ ನಾಯಕರ ಜತೆ ಚರ್ಚೆ ಮಾಡುತ್ತೇವೆ' ಎಂದು ಹೇಳಿದರು.

ಈಶಾನ್ಯ ಪದವೀಧರ, ನೈರುತ್ಯ ಪದವೀಧರ, ಬೆಂಗಳೂರು ಪದವೀಧರ ಕ್ಷೇತ್ರ, ಆಗ್ನೇಯ ಶಿಕ್ಷಕರ ಕ್ಷೇತ್ರ, ನೈರುತ್ಯ ಶಿಕ್ಷಕರ ಕ್ಷೇತ್ರ, ದಕ್ಷಿಣ ಶಿಕ್ಷಕರ ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ.

ಕಾನೂನಿನಿಂದ ಬಿಡುಗಡೆ ಸುಲಭವಲ್ಲ: ಖರ್ಗೆ

ಪ್ರಜಾವಾಣಿ ವಾರ್ತೆ



ಮಲ್ಲಿಕಾರ್ಜುನ ಖರ್ಗೆ

ಕಲಬುರಗಿ: 'ಎಸ್‌ಐಟಿ ಅಧಿಕಾರಿಗಳು ಕಾನೂನು ಪ್ರಕಾರ ತಮ್ಮ ಕೆಲಸವನ್ನು ಮಾಡುತ್ತಿದ್ದಾರೆ. ಸಂತ್ರಸ್ತ ಕುಟುಂಬಸ್ಥರಿಗೆ ನ್ಯಾಯ ಸಿಗಬೇಕು. ಇದನ್ನು ಯಾರೂ ರಾಜಕೀಯವಾಗಿ ಬೆಳೆಸಬಾರದು' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶಾಸಕ ಎಚ್.ಡಿ.ರೇವಣ್ಣ ಬಂಧನ ಪ್ರಕರಣಕ್ಕೆ ಪ್ರತಿಕ್ರಿಯಿಸಿದರು.

ನಗರದಲ್ಲಿ ಭಾನುವಾರ ಮಾಧ್ಯಮ ಗಳೊಂದಿಗೆ ಮಾತನಾಡಿದ ಅವರು, 'ಕಠಿಣವಾದ ಕಾನೂನು ಇರುವುದರಿಂದ ಬಿಡುಗಡೆ ಸುಲಭವಲ್ಲ. ಇಂತಹ ಕೆಲಸ ಮಾಡಿದವರಿಗೆ ಬುದ್ಧಿ ಬರಬೇಕು. ಇನ್ನು ಮೇಲೆ ಇಂತಹದ್ದು ಮಾಡಬಾರದು. ಇಂತಹ ಪ್ರಕರಣದಲ್ಲಿ ಯಾರೂ ರಾಜಕೀಯ ಮಾಡಬಾರದು' ಎಂದರು.

'ಚುನಾವಣೆಯಲ್ಲಿ ಗ್ಯಾರಂಟಿ ಫಲಿತಾಂಶ ಬರುವುದಿಲ್ಲ ಎಂದು ಬಿಜೆಪಿಗರು ಹೇಳಿಕೆಗೆ ಪ್ರತಿಕ್ರಿಯಿಸಿದ ಖರ್ಗೆ, 'ಆ ರೀತಿ ಹೇಳುವವರ ಉದ್ದೇಶ ಸರಿ ಇಲ್ಲ. ಕಾಂಗ್ರೆಸ್ ಬಗ್ಗೆ ಪೂರ್ವಾಗ್ರಹ ಪೀಡಿತರು ಆ ರೀತಿ ಮಾತನಾಡುತ್ತಾರೆ. ಮಹಿಳೆಯರಿಗೆ ತಿಂಗಳಿಗೆ ₹2000, ಉಚಿತ ಬಸ್ ಪ್ರಯಾಣ, ಕುಟುಂಬಕ್ಕೆ ಉಚಿತವಾಗಿ 200 ಯೂನಿಟ್ ವಿದ್ಯುತ್, ನಿರುದ್ಯೋಗಿ ಯುವಕರಿಗೆ ಯುವನಿಧಿ ಸಿಗುತ್ತಿಲ್ಲವೇ' ಎಂದು ಪ್ರಶ್ನಿಸಿದರು.

'ಸೋಲಿನ ಭಯಕ್ಕೆ ಕಲಬುರಗಿಯಲ್ಲಿ ಠಿಕಾಣಿ ಹೂಡಿದ್ದಾರೆ' ಎಂಬ ಸಂಸದ ಡಾ.ಉಮೇಶ ಜಾಧವ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಇದು ನನ್ನೂರು, ನನ್ನ ಭೂಮಿ, ನನ್ನ ನೀರು. ಇಲ್ಲಿಗೆ ಬರಬಾರದು ಎಂದರೆ ಹೇಗೆ? ಎರಡು ಸಭೆಗಳು ಮಾಡಿದ್ದು ಬಿಟ್ಟರೆ ಬೇರೆ ಎಲ್ಲಿ ಓಡಾಡಿದ್ದೇನೆ? ಏನೂ ಸಂಬಂಧವಿಲ್ಲದ ಮೋದಿ ಎರಡು ಬಾರಿ ಬಂದು ಹೋದರು. ಅವರ ನಾಯಕರು ಬಂದಿದ್ದರು. ಆರ್‌ಎಸ್‌ಎಸ್‌ನ ವರು ಇಲ್ಲಿಯೇ ಠಿಕಾಣಿ ಹೂಡಿದ್ದಾರೆ' ಎಂದರು.

'2019ರ ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಪ್ರಜ್ವಲ್ ಬಗ್ಗೆ ಹಾಡಿ ಹೊಗಳಿದ್ದ ಸಿದ್ದರಾಮಯ್ಯ'

ರೇವಣ್ಣ ಬಂಧನ ಸರಿಯಾದ ಕ್ರಮ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅತ್ಯಾಚಾರ ಪ್ರಕರಣದ ಸಂತ್ರಸ್ತೆಯನ್ನು ಅಪಹರಿಸಿ, ಅಕ್ರಮ ಬಂಧನದಲ್ಲಿ ಇರಿಸಿದ ಆರೋಪದ ಮೇಲೆ ಶಾಸಕ ಎಚ್.ಡಿ.ರೇವಣ್ಣ ಅವರನ್ನು ಬಂಧಿಸಿರುವುದು ಸರಿಯಾದ ಕ್ರಮ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

'ಅಲ್ಲದೇ, ಪ್ರಜ್ವಲ್ ರೇವಣ್ಣ ಈಗಲೂ ಕಾಂಗ್ರೆಸ್– ಜೆಡಿಎಸ್ ಮೈತ್ರಿ ಸಂಸದರಾಗಿಯೇ ಇದ್ದಾರೆ. ಅವರು ಈ ಚುನಾವಣೆಯಲ್ಲಿ ಗೆದ್ದು ಎನ್‌ಡಿಎ ಸಂಸದರಾದರೆ ಅವರ ವಿರುದ್ಧ ಪಕ್ಷದ ವತಿಯಿಂದಲೇ ಕಾನೂನು ಕ್ರಮ ಜರುಗಿಸುವ ಸಾಧ್ಯತೆಗಳ ಬಗ್ಗೆ ಪರಿಷ್ಕರಣ ಜತೆ ಚರ್ಚಿಸಿಸುವುದಾಗಿ' ಅವರು ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಪ್ರಜ್ವಲ್ ರೇವಣ್ಣ ನಡೆಸಿದ ಮಹಿಳಾ ದೌರ್ಜನ್ಯದ ಘಟನೆಗಳು ಯಾವಾಗ ನಡೆದಿವೆ ಎಂಬ ಬಗ್ಗೆ ತನಿಖಾ ತಂಡ ಎದುರು ನೀಡಬೇಕಿದೆ. ನಮ್ಮ ಹೊಂದಾಣಿಕೆಯಲ್ಲಿ ಇನ್ನೂ ಪ್ರಜ್ವಲ್ ರೇವಣ್ಣ ಗೆದ್ದಿಲ್ಲ. ಈಗ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸಂಸದರಾಗಿಯೇ ಇದ್ದಾರೆ. ಜೆಡಿಎಸ್ ಪಕ್ಷ ಈಗಾಗಲೇ ಪ್ರಜ್ವಲ್ ವಿರುದ್ಧ ಕ್ರಮ ಕೈಗೊಂಡಿದೆ' ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಜೆಡಿಎಸ್ ಜತೆಗೆ ಇದೇ ಮೊದಲ ಬಾರಿ ಚುನಾವಣಾ ಮೈತ್ರಿ ಏರ್ಪಟ್ಟಿದೆ. ಸಿದ್ದರಾಮಯ್ಯ ತನ್ನ ಕೋಟಾದಲ್ಲಿ ಪ್ರಜ್ವಲ್‌ಗೆ ಟಿಕೆಟ್ ಕೊಟ್ಟಿದ್ದರು. ಹಾಗೆಯೇ ಅವರ ಮೇಲೆ ಆರೋಪ ಕೇಳಿ ಬಂದ ಬಳಿಕ ಅವರನ್ನು ಜೆಡಿಎಸ್ ಅಮಾನತು ಮಾಡಿದೆ' ಎಂದರು.

'ಈಗ ಪ್ರಜ್ವಲ್ ಅವರನ್ನು ಅತ್ಯಾಚಾರಿ ಎಂದು ಕರೆಯುವ ಸಿದ್ದರಾಮಯ್ಯ 2019ರ ಏಪ್ರಿಲ್‌ನಲ್ಲಿ ಕಡೂರಿನ ಎಪಿಎಂಸಿ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಜ್ವಲ್ ರೇವಣ್ಣ ಅವರನ್ನು ಪಕ್ಕದಲ್ಲಿ ಕೂರಿಸಿಕೊಂಡು ಹಾಡಿ ಹೊಗಳಿದ್ದರು. 'ಪ್ರಜ್ವಲ್ ಯುವ ನಾಯಕ, ಓಡಾಡಿ ಕೆಲಸ ಮಾಡ್ತಾರೆ. ಇವರಿಗೆ ಅವಕಾಶ ನೀಡಿ ಗೆಲ್ಲಿಸಿಕೊಡಿ ಎಂದು ಟ್ವೀಟ್ ಮಾಡಿದ್ದರು. ಈ ಮೂಲಕ ಪ್ರಜ್ವಲ್ ಪರ ಕೆಲಸ ಮಾಡಿ ಸಿದ್ದರಾಮಯ್ಯ ಮತ ಯಾಚಿಸಿದ್ದರು' ಎಂದು ಅಶೋಕ ಹೇಳಿದರು.

'ಮೈತ್ರಿ ಇದ್ದಾಗ ಪ್ರಕರಣ ಇರಲಿಲ್ಲ'

ಬೆಳಗಾವಿ: 'ನಾವು ಜೆಡಿಎಸ್ ಜೊತೆಗೆ ಸಮ್ಮಿಶ್ರ ಸರ್ಕಾರ ರಚಿಸಿದ ಸಂದರ್ಭದಲ್ಲಿ ಪ್ರಜ್ವಲ್ ಮೇಲೆ ಯಾವುದೇ ದೂರು ಇರಲಿಲ್ಲ. ಪ್ರಕರಣವೂ ಗೊತ್ತಾಗಿರಲಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಪ್ರಜ್ವಲ್ ಲೈಂಗಿಕ ದೌರ್ಜನ್ಯಗಳನ್ನು ನಡೆಸಿದ ಅವಧಿಯಲ್ಲಿ ಜೆಡಿಎಸ್ ಪಕ್ಷವು ಕಾಂಗ್ರೆಸ್ ಜತೆಗೆ ಸಮ್ಮಿಶ್ರ ಸರ್ಕಾರ ರಚಿಸಿತ್ತು' ಎಂಬ ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯಿಸಿದ ಭಾನುವಾರ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಅವರು, 'ಕೋಮುವಾದಿಗಳನ್ನು ದೂರ ಇಡೋಣ ಎಂದು ದೇವೇಗೌಡರು ಹೇಳಿದ್ದರು. ಮೋದಿ ಇನ್ನೊಮ್ಮೆ ಪ್ರಧಾನಿಯಾದರೆ ನಾನು ದೇಶ ಬಿಟ್ಟು ಹೋಗುತ್ತೇನೆ ಎಂದು ಇದೇ ದೇವೇಗೌಡರು ಹೇಳಿದ್ದರು. ಅವರ ಮಾತು ನಂಬಿ ನಾವು ಮೈತ್ರಿ ಮಾಡಿಕೊಂಡಿದ್ದೆವು. ಈಗ ಎಲ್ಲ ಗೊತ್ತಿದ್ದೂ ಬಿಜೆಪಿ ಮೈತ್ರಿ ಮಾಡಿಕೊಂಡಿದೆ' ಎಂದು ಹೇಳಿದರು.

ಪ್ರಜ್ವಲ್‌ಗೆ ವಾಷಿಂಗ್ ಮಷಿನ್ ಸಿದ್ಧವಾಗಿದೆ: ಶ್ರೀನಿವಾಸ್ ಲೇವಡಿ

ಬಳ್ಳಾರಿ: 'ತಪ್ಪು ಮಾಡಿದವರ ಪಾಪ ತೊಳೆಯಲು ಬಿಜೆಪಿ ವಾಷಿಂಗ್ ಮಷಿನ್ ಇಟ್ಟುಕೊಂಡಿದೆ. ಮೋದಿ ಬಳಿ ವಾಷಿಂಗ್ ಪೌಡರ್ ಇದೆ. ಆದರಲ್ಲಿ ಒಗೆದರೆ ಎಲ್ಲರೂ ಪಾಪ ಮುಕ್ತರಾಗುತ್ತಾರೆ. ಹಾಗೆಯೇ ಪ್ರಜ್ವಲ್ ರೇವಣ್ಣ ಅವರಿಗೂ ವಾಷಿಂಗ್ ಮಷಿನ್ ಸಿದ್ಧವಾಗಿದೆ' ಎಂದು ಯುವ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷ ಬಿ.ವಿ.ಶ್ರೀನಿವಾಸ್ ವ್ಯಂಗ್ಯವಾಡಿದರು.

ಬಳ್ಳಾರಿಯ ಯುವ ಕಾಂಗ್ರೆಸ್ ವತಿಯಿಂದ ನಗರದ ಗಡಿಗಿ ಚನ್ನಪ್ಪ (ರಾಯಲ್) ವೃತ್ತದಲ್ಲಿ ಭಾನುವಾರ ಪ್ರಜ್ವಲ್ ವಿರುದ್ಧ ಪ್ರತಿಭಟನೆ ನಡೆಯಿತು.

ನಂತರ ಮಾತನಾಡಿದ ಶ್ರೀನಿವಾಸ್, 'ರಾಜ್ಯದ ಮರ್ಯಾದೆಯನ್ನು ಬಿಜೆಪಿ ರಾಷ್ಟ್ರ ಮಟ್ಟದಲ್ಲಿ ತೆಗೆದಿದೆ. ಪ್ರಜ್ವಲ್ ಅಂಥವರಿಗೆ ಟಿಕೆಟ್ ಕೊಟ್ಟು ತಪ್ಪು ಮಾಡಿದ್ದೇವೆ ಎಂದು ಬಿಜೆಪಿಯವರು ರಾಜ್ಯದ ಕ್ಷಮೆ ಕೇಳಬೇಕು' ಎಂದು ಆಗ್ರಹಿಸಿದರು.

'ಪ್ರಜ್ವಲ್ ಪ್ರಕರಣ ಪರಿಣಾಮ ಬೀರದು'

ಬಳ್ಳಾರಿ: 'ಪ್ರಜ್ವಲ್ ರೇವಣ್ಣ ಅವರ ಪೆನ್‌ಡ್ರೈವ್ ಪ್ರಕರಣ ರಾಜ್ಯದ 2ನೇ ಹಂತದ ಚುನಾವಣೆಯ ಮೇಲೆ ಪರಿಣಾಮ ಬೀರುವುದಿಲ್ಲ' ಎಂದು ಸಂಸದ ಡಿ.ವಿ. ಸದಾನಂದ ಗೌಡ ಹೇಳಿದರು.

ಬಳ್ಳಾರಿಯಲ್ಲಿ ಭಾನುವಾರ ಸುದ್ದಿಗೋಷ್ಠಿ ನಡೆಸಿದ ಅವರು, 'ಎರಡನೇ ಹಂತದ ಚುನಾವಣೆಯ ಮೇಲೆ ಪೆನ್‌ಡ್ರೈವ್ ಪ್ರಕರಣ ಭಾರಿ ದೊಡ್ಡ ಪ್ರಮಾಣದಲ್ಲಿ ಪರಿಣಾಮ ಬೀರುತ್ತದೆ ಎಂದು ಅನಿಸುತ್ತಿಲ್ಲ. ಮೊದಲ ಹಂತದ ಕ್ಷೇತ್ರಗಳಲ್ಲಿ ಜೆಡಿಎಸ್ ಪ್ರಭಾವ ಇದೆ. ಎರಡನೇ ಹಂತದಲ್ಲಿ ರಾಯಚೂರು, ವಿಜಯಪುರ ಬಿಟ್ಟರೆ ಎಲ್ಲಿಯೂ ಅವರ ಪ್ರಭಾವ ಇಲ್ಲ. ಇನ್ನು ತನಿಖೆ ನಡೆಯುತ್ತಿದೆ. ಸತ್ಯ ಹಿಂದರವುದು ನೀರು ಕುಡಿಯಲೇ ಬೇಕು. ಆದರೆ, ಆದನ್ನೇ ಕಾಂಗ್ರೆಸ್ ದೊಡ್ಡದು ಮಾಡುತ್ತಿದೆ. ಈಗಾಗಲೇ ನ್ಯಾಯಾಲಯದಲ್ಲಿರುವ ಪ್ರಕರಣದ ಬಗ್ಗೆ ಮಾತನಾಡುವುದು ಸರಿಯಲ್ಲ' ಎಂದರು.

'ಮೊದಲ ಹಂತದ ಮತದಾನಕ್ಕೆ ಮೂರ್ನಾಲ್ಕು ದಿನಗಳ ಮೊದಲೇ ಪೆನ್‌ಡ್ರೈವ್ ಪ್ರಕರಣ ಬಯಲಾಗಿದ್ದರೆ ಅದು ಅಲ್ಲಿನ 14 ಕ್ಷೇತ್ರಗಳ ಮೇಲೂ ಪರಿಣಾಮ ಬೀರುತ್ತಿತ್ತು. ಜೆಡಿಎಸ್ ಜತೆಗೆ ಮೈತ್ರಿ ಮಾಡಿದ ನಮ್ಮ ಮೇಲೂ ಪರಿಣಾಮ ಉಂಟಾಗುತ್ತಿತ್ತು' ಎಂದು ಹೇಳಿದರು.

'ಈ ಬಾರಿಯ ಚುನಾವಣೆ ದೇಶವನ್ನು ತಾರ್ಕಿಕ ಅಂತ್ಯಕ್ಕೆ ಕರೆದುಕೊಂಡು ಹೋಗಲಿದೆ. ಸಾಧನೆ ಆಧಾರದಲ್ಲಿ ಜನ ಬೆಂಬಲ ನೀಡಲಿದ್ದಾರೆ. ಕಳೆದ ಚುನಾವಣೆಯ ಪ್ರಣಾಳಿಕೆಯಲ್ಲಿ ಹೇಳಿದ ಹಾಗೆ ಶ್ರೀರಾಮ ಮಂದಿರ ಸೇರಿ ಎಲ್ಲವನ್ನೂ ಬಿಜೆಪಿ ಈಡೇರಿಸಿದೆ' ಎಂದು ಹೇಳಿದರು.

ರೇವಣ್ಣ ಬಂಧನ ದುರ್ದೈವ: ಜೋಶಿ

ಹುಬ್ಬಳ್ಳಿ: 'ರೇವಣ್ಣ ಅವರಿಗೆ ವಯಸ್ಸಾಗಿದೆ. ಅವರನ್ನು ಬಂಧಿಸಿರುವುದು ದುರ್ದೈವ' ಎಂದು ಧಾರವಾಡ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರಲ್ಹಾದ ಜೋಶಿ ವಿಷಾದ ವ್ಯಕ್ತಪಡಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರೇವಣ್ಣ ವಿರುದ್ಧ ಸಾಕಷ್ಟು ಆರೋಪ ಕೇಳಿ ಬಂದಿರುವುದರಿಂದ ತನಿಖೆ ನಡೆಯುವುದು ಒಳ್ಳೆಯದೇ. ಆದರೆ ರೇವಣ್ಣ ಬಂಧನ ಎಷ್ಟು ಸರಿ ಎಂಬುದನ್ನು ನ್ಯಾಯಾಲಯ ತೀರ್ಮಾನಿಸಬೇಕಿದೆ' ಎಂದು ಹೇಳಿದರು.

ನಿಧನ ವಾರ್ತೆ

ಪ್ರೊ. ಎಂ. ಮಾದಯ್ಯ



ಮೈಸೂರು: ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಎಂ. ಮಾದಯ್ಯ (88) ಅನಾರೋಗ್ಯದಿಂದ ಭಾನುವಾರ ಇಲ್ಲಿ ನಿಧನರಾದರು.

ಮಂಡ್ಯ ಜಿಲ್ಲೆಯ ದುದ್ದ ಗ್ರಾಮದ ವರಾದ ಅವರು ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿದ್ದು, ಮಾಜಿ ಪ್ರಧಾನಿ ಮನಮೋಹನ ಸಿಂಗ್ ಜೊತೆ ಒಡನಾಟ ಹೊಂದಿದ್ದರು. 1991ರಿಂದ 1993 ಹಾಗೂ 1993–1997ರವರೆಗೆ 2 ಅವಧಿಗೆ ಕುಲಪತಿ ಯಾಗಿ ಕಾರ್ಯ ನಿರ್ವಹಿಸಿದ್ದರು. ಅವರಿಗೆ ಪತ್ನಿ ವಿಶ್ರಾಂತ ಕುಲಪತಿ ಪ್ರೊ.ಇಂದುಮತಿ, ಪುತ್ರ, ಪುತ್ರಿ ಇದ್ದಾರೆ. ಮೇ 8ರಂದು ಮೈಸೂರಿನಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ.

ಎಸ್ಐಟಿ ಕಸ್ಟಡಿಗೆ ರೇವಣ್ಣ

ಒಂದನೇ ಪುಟದಿಂದ

'ಇದೀಗ, ಸಂತ್ರಸ್ತೆಯನ್ನು ರಕ್ಷಿಸಲಾಗಿದೆ. ಜೊತೆಗೆ, ಅಪಹರಣ ಸಂಚಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ರೇವಣ್ಣ ಅವರನ್ನು ಬಂಧಿಸಲಾಗಿದೆ. ಪ್ರಕರಣದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿದ್ದಾರೆ. ಈ ಬಗ್ಗೆ ಮಾಹಿತಿ ಕಲೆಹಾಕಲು ರೇವಣ್ಣ ಅವರನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಬೇಕಿದೆ. ಹೀಗಾಗಿ, ಕಸ್ಟಡಿಗೆ ನೀಡಬೇಕು' ಎಂದು ಎಸ್‌ಐಟಿ ಪರ ವಕೀಲರು ಕೋರಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ರೇವಣ್ಣ ಪರ ವಕೀಲರು, 'ನಮ್ಮ ಕಕ್ಷಿದಾರರಿಗೆ ಎಸ್‌ಐಟಿ ಅಧಿಕಾರಿಗಳು ವಿನಾಕಾರಣ ಕಿರುಕುಳ ನೀಡುತ್ತಿದ್ದಾರೆ. ಯಾವುದೇ ಪುರಾವೆಗಳು ಇಲ್ಲದಿದ್ದರೂ, ಕೃತ್ಯ ಒಪ್ಪಿಕೊಳ್ಳುವಂತೆ ಪೀಡಿಸುತ್ತಿದ್ದಾರೆ. ಜೊತೆಗೆ, ಕಕ್ಷಿದಾರರಿಗೆ ಆರೋಗ್ಯ ಸಮಸ್ಯೆ ಇದೆ. ಹೀಗಾಗಿ, ಸೂಕ್ತ ಚಿಕಿತ್ಸೆ ಅಗತ್ಯವಿದೆ. ರೇವಣ್ಣ ಅವರನ್ನು ಪುನಃ ಎಸ್‌ಐಟಿ ಅಧಿಕಾರಿಗಳ ಕಸ್ಟಡಿಗೆ ನೀಡಬಾರದು' ಎಂದು ವಿನಂತಿಸಿದರು.

'ಆರೋಪಿಯನ್ನು ಕಸ್ಟಡಿಗೆ ನೀಡಿದರೆ, ಪ್ರಕರಣದ ನಿಜಾಂಶ ಪತ್ತೆ ಮಾಡಲು ಸಹಾಯವಾಗುತ್ತದೆ' ಎಂದು ಪುನಃ ವಾದಿಸಿದ ಎಸ್‌ಐಟಿ ಅಧಿಕಾರಿಗಳು, ರೇವಣ್ಣ ಅವರನ್ನು ಏಕೆ ಕಸ್ಟಡಿಗೆ ನೀಡಬೇಕು ಎಂಬುದಕ್ಕೆ 15 ಅಂಶಗಳ ಪಟ್ಟಿಯನ್ನು ನ್ಯಾಯಾಧೀಶರಿಗೆ ಸಲ್ಲಿಸಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶ ರವೀಂದ್ರ ಕಟ್ಟಿಮನಿ ಅವರು, ರೇವಣ್ಣ ಅವರನ್ನು ಇದೇ 8ರವರೆಗೆ ಕಸ್ಟಡಿಗೆ ನೀಡಿ ಆದೇಶಿಸಿದರು.

ನಿಂಬೆಹಣ್ಣು ಹಿಡಿದ ರೇವಣ್ಣ: ನ್ಯಾಯಾಧೀಶರ ಎದುರು ಹಾಜರುಪಡಿಸುವ ಸಂದರ್ಭದಲ್ಲಿ ಎಚ್.ಡಿ.ರೇವಣ್ಣ ಅವರು ಮೂರು ನಿಂಬೆಹಣ್ಣು ಕೈಯಲ್ಲಿ ಹಿಡಿದುಕೊಂಡಿದ್ದರು. ಪೊಲೀಸ್ ವಾಹನದಿಂದ ಇಳಿದಿದ್ದ ರೇವಣ್ಣ, ನಿಂಬೆ ಹಣ್ಣುಗಳ ಸಮೇತ ನ್ಯಾಯಾಧೀಶರ ಮನೆಯತ್ತ ಹೆಜ್ಜೆ ಹಾಕಿದರು. ವಿಶೇಷ ಕೊಠಡಿಯಲ್ಲಿ ವಿಚಾರಣೆ ನಡೆಯುತ್ತಿದ್ದ ಸಂದರ್ಭದಲ್ಲೂ ರೇವಣ್ಣ ನಿಂಬೆ ಹಣ್ಣು ಬಿಟ್ಟಿರಲಿಲ್ಲ. ವಿಚಾರಣೆ ವೇಳೆ ನ್ಯಾಯಾಧೀಶರ ಎದುರು ಕಣ್ಣೀರು ಹಾಕಿದ ರೇವಣ್ಣ, 'ನನ್ನ ಮೇಲೆ ಸುಳ್ಳು ಆರೋಪ ಹೊರಿಸಲಾಗಿದೆ. ರಾಜಕೀಯ ದುರುದ್ದೇಶಕ್ಕಾಗಿ ಸುಳ್ಳು ಪ್ರಕರಣದಲ್ಲಿ ನನ್ನನ್ನು ಸಿಲುಕಿಸಲಾಗಿದೆ. ನನಗೆ ನ್ಯಾಯ ಕೊಡಿ' ಎಂದು ಕೋರಿದ್ದಾರೆಂದು ಗೊತ್ತಾಗಿದೆ.

ಎಸ್‌ಐಟಿ ಕಚೇರಿಯತ್ತ ರೇವಣ್ಣ: ನ್ಯಾಯಾಧೀಶರಿಂದ ವಿಚಾರಣೆ ಮುಗಿಯುತ್ತಿದ್ದಂತೆಯೇ ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿದ ಎಸ್‌ಐಟಿ ಅಧಿಕಾರಿಗಳು, ರೇವಣ್ಣ ಅವರನ್ನು ಪೊಲೀಸ್ ವಾಹನದಲ್ಲಿ ತಮ್ಮ ಕಚೇರಿಗೆ ಕರೆದೊಯ್ದರು. ಸೋಮವಾರ ರಾತ್ರಿಯೂ ರೇವಣ್ಣ ಎಸ್‌ಐಟಿ ಕಚೇರಿಯಲ್ಲಿಯೇ ಇರಲಿದ್ದಾರೆ.

ಸಂತ್ರಸ್ತೆಯರ ನೆರವಿಗೆ ಸಹಾಯವಾಣಿ

'ಪ್ರಜ್ವಲ್ ಅವರಿಂದ ನಡೆದಿದೆ' ಎನ್ನಲಾದ ಲೈಂಗಿಕ ದೌರ್ಜನ್ಯದ ಸಂತ್ರಸ್ತೆಯರ ನೆರವಿಗಾಗಿ ಎಸ್‌ಐಟಿ ಅಧಿಕಾರಿಗಳು ಸಹಾಯವಾಣಿ ಆರಂಭಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಎಸ್‌ಐಟಿ ಮುಖ್ಯಸ್ಥ ಬಿ.ಕೆ. ಸಿಂಗ್, 'ಹಾಸನ ಜಿಲ್ಲೆಯಲ್ಲಿ ಮಹಿಳೆಯರ ಮೇಲೆ ನಡೆದಿರುವ ಲೈಂಗಿಕ ದೌರ್ಜನ್ಯ ಕುರಿತು ತನಿಖೆಗಾಗಿ ಎಸ್‌ಐಟಿ ತಂಡ ರಚಿಸಲಾಗಿದೆ. ಸಂತ್ರಸ್ತೆಯರು ಹಾಗೂ ಅವರಿಗೆ ಸಂಬಂಧಿಸಿದವರು 6360938947 ಸಂಖ್ಯೆಗೆ ಕರೆ ಮಾಡಬಹುದು' ಎಂದು ತಿಳಿಸಿದ್ದಾರೆ.

'ರಾಜಕೀಯ ಷಡ್ಯಂತ್ರ'

'ಯಾವುದೇ ಪುರಾವೆ ಇಲ್ಲದೇ ನನ್ನ ಮೇಲೆ ಸುಳ್ಳು ಪ್ರಕರಣ ದಾಖಲಿಸಲಾಗಿದೆ. ಇದು ರಾಜಕೀಯ ಷಡ್ಯಂತ್ರ' ಎಂದು ಎಚ್.ಡಿ.ರೇವಣ್ಣ ಆರೋಪಿಸಿದರು. ಬೌರಿಂಗ್ ಆಸ್ಪತ್ರೆ ಬಳಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, '40 ವರ್ಷಗಳ ರಾಜಕಾರಣದಲ್ಲಿ ನನ್ನ ಮೇಲೆ ಯಾವುದೇ ಆಪಾದನೆ ಇಲ್ಲ. ದುರುದ್ದೇಶದಿಂದ ಏಪ್ರಿಲ್ 28ರಂದು ನನ್ನ ಮೇಲೆ ಪ್ರಕರಣ ದಾಖಲಿಸಿದರು. ಯಾವುದೇ ಪುರಾವೆ ಸಿಗದಿದ್ದರಿಂದ, ಮೇ 2ರಂದು ಅಪಹರಣ ಪ್ರಕರಣ ದಾಖಲಿಸಿದ್ದಾರೆ. ಇದೊಂದು ರಾಜಕೀಯ ಷಡ್ಯಂತ್ರ' ಎಂದರು.

ಇನ್ನೂ ಪತ್ತೆಯಾಗದ ಪ್ರಜ್ವಲ್

ಒಂದನೇ ಪುಟದಿಂದ...

ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ಮಂಗಳೂರಿನ ವಿಮಾನ ನಿಲ್ದಾಣಗಳಲ್ಲಿ ಎಸ್‌ಐಟಿ ಅಧಿಕಾರಿಗಳು ಭಾನುವಾರ ಬೆಳಿಗ್ಗೆಯಿಂದಲೇ ಮೊಕ್ಕಾಂ ಹೂಡಿದ್ದರು. ಸ್ಥಳೀಯ ಪೊಲೀಸರು ಸಹಕಾರ ನೀಡಿದ್ದರು. ಆದರೆ, ಪ್ರಜ್ವಲ್ ವಾಪಸ್ ಬರಲಿಲ್ಲ.

ರೈಲಿನಲ್ಲಿ ಪ್ರಯಾಣ: 'ವಿದೇಶದಲ್ಲಿರುವ ಪ್ರಜ್ವಲ್, ಬಂಧನ ಭೀತಿಯಲ್ಲಿ ಸುತ್ತಾಡುತ್ತಿದ್ದಾರೆ. ವಿಮಾನ ನಿಲ್ದಾಣಗಳ ಬದಲು ರೈಲುಗಳಲ್ಲಿ ಪ್ರಯಾಣಿಸುತ್ತಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ. 'ಪ್ರಜ್ವಲ್ ಪತ್ತೆಗಾಗಿ ಕೇಂದ್ರ ತನಿಖಾ ಸಂಸ್ಥೆಗಳ ಜೊತೆ ಮಾಹಿತಿ ವಿನಿಮಯ ಮಾಡಿಕೊಳ್ಳಲಾಗಿದೆ. ದೇಶದಲ್ಲಿರುವ ಕೆಲವರ ಜೊತೆ ಪ್ರಜ್ವಲ್ ಆಗಾಗ ಮಾತನಾಡುತ್ತಿದ್ದಾರೆ. ಅವರ ಮೇಲೂ ನಿಗಾ ಇಡಲಾಗಿದೆ' ಎಂದು ಮೂಲಗಳು ಹೇಳಿವೆ.

ಸಂಸದರ ಸರ್ಕಾರಿ ನಿವಾಸ ಎಸ್‌ಐಟಿ ವಶಕ್ಕೆ

ಒಂದನೇ ಪುಟದಿಂದ...

ಸಾಕ್ಷ್ಯ ನಾಶದ ಸಾಧ್ಯತೆ ಇರುವುದರಿಂದ ಹಾಗೂ ಇನ್ನೂ ಹೆಚ್ಚಿನ ತನಿಖೆ ಅಗತ್ಯ ಬೇಕಾಗಬಹುದು ಎಂಬ ಉದ್ದೇಶದಿಂದ ಮನೆಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ. ನಿವಾಸದ ಎದುರು ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದ್ದು, ಯಾರನ್ನೂ ಒಳಗೆ ಬಿಡದಂತೆ ಸೂಚನೆ ನೀಡಲಾಗಿದೆ.

ಸ್ಕೂಲ್‌ಬ್ಯಾಗ್ ಭಾರ ತಗ್ಗಿಸಲು ರಾಜ್ಯ ಸರ್ಕಾರದ ಕ್ರಮ

- ಶಾಲಾ ಬ್ಯಾಗ್‌ಗಳ ಅಧಿಕ ತೂಕದ ಬಗ್ಗೆ ಶಿಕ್ಷಣತಜ್ಞರು ಮತ್ತು ಪೋಷಕರು ಎತ್ತಿರುವ ಕಳವಳಕ್ಕೆ ಪ್ರತಿಕ್ರಿಯಿಸಿದ ಕರ್ನಾಟಕ ಸರ್ಕಾರ ಪಠ್ಯಪುಸ್ತಕಗಳ ತೂಕವನ್ನು ಶೇ 50ರಷ್ಟು ಕಡಿಮೆ ಮಾಡಲು ಆದೇಶವನ್ನು ಹೊರಡಿಸಿದ್ದು, 2024-25ರ ಶೈಕ್ಷಣಿಕ ವರ್ಷದಿಂದ 1 ರಿಂದ 10ನೆಯ ತರಗತಿಯ ವಿದ್ಯಾರ್ಥಿಗಳಿಗೆ ಜಾರಿಯಾಗಲಿದೆ. ಹೊಸ ವ್ಯವಸ್ಥೆಯಲ್ಲಿ, ಪಠ್ಯಪುಸ್ತಕಗಳನ್ನು ವರ್ಷಕ್ಕೆ ಎರಡು ಬಾರಿಯಂತೆ ವಿಂಗಡಿಸಿ ಭಾಗ 1 ಮತ್ತು 2 ಎಂದು ನೀಡಲಾಗುತ್ತದೆ.
- 2019ರಲ್ಲಿ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) ಈ ಸಮಸ್ಯೆಯನ್ನು ಕೂಲಂಕಷವಾಗಿ ತನಿಖೆ ಮಾಡಲು ಶಿಕ್ಷಣತಜ್ಞರು, ವೈದ್ಯಕೀಯ ವೃತ್ತಿಪರರು, ಕಾನೂನುತಜ್ಞರು ಮತ್ತು ಮಕ್ಕಳ ವೈದ್ಯರನ್ನು ಒಳಗೊಂಡ ಸಮಿತಿಯನ್ನು ಸ್ಥಾಪಿಸಿತು. ವ್ಯಾಪಕ ಅಧ್ಯಯನವನ್ನು ನಡೆಸಿದ ನಂತರ, ಸಮಿತಿಯು ವಿವಿಧ ತರಗತಿಯ ಮಕ್ಕಳಿಗೆ ಶಾಲಾ ಬ್ಯಾಗ್‌ಗಳಿಗೆ ಸೂಕ್ತವಾದ ತೂಕವನ್ನು ನಿರ್ಧರಿಸಿತು. ಆ ಪ್ರಕಾರ ವಿದ್ಯಾರ್ಥಿಗಳು ವರ್ಷದ ಮೊದಲಾರ್ಧದಲ್ಲಿ ಪಠ್ಯಪುಸ್ತಕಗಳ ಭಾಗ 1 ಮತ್ತು ದ್ವಿತೀಯಾರ್ಧದಲ್ಲಿ ಭಾಗ 2 ಅನ್ನು ಬಳಸಲು ಶಿಫಾರಸು ಮಾಡಿದೆ.



ವಿದ್ಯಾರ್ಥಿಸ್ನೇಹಿ 'ಬ್ಯಾಗ್‌ಲೆಸ್ ಸ್ಕೂಲ್' ದಿನ

ಯು.ಟಿ.ಆಯಿಷಾ ಫರ್ಝಾನ

ಮಧ್ಯಪ್ರದೇಶ ಸರ್ಕಾರವು ಇತ್ತೀಚೆಗೆ 'ಬ್ಯಾಗ್‌ಲೆಸ್ ಸ್ಕೂಲ್' ದಿನ ಎಂಬ ಹೊಸ ಯೋಜನೆಯನ್ನು ಪರಿಚಯಿಸಿದೆ. ಎಲ್ಲ ಸರ್ಕಾರಿ ಹಾಗೂ ಖಾಸಗಿ ಶಾಲೆಗಳ 1ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ವಾರಕ್ಕೊಮ್ಮೆ 'ಬ್ಯಾಗ್‌ಲೆಸ್ ಸ್ಕೂಲ್' ದಿನವನ್ನು ನಿಗದಿಪಡಿಸಲಾಗಿದ್ದು, ಮುಂಬರುವ 2024-25ರ ಶೈಕ್ಷಣಿಕ ವರ್ಷದಿಂದ ಜಾರಿಯಾಗಲಿದೆ.

ವಿದ್ಯಾರ್ಥಿಗಳ ಮೇಲಿನ ಹೊರೆಯನ್ನು ತಗ್ಗಿಸಲು ವಿವಿಧ ತರಗತಿಗಳ ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಶಾಲಾ ಬ್ಯಾಗ್‌ಗಳಿಗೆ ಸಂಬಂಧಿಸಿದಂತೆ ಗರಿಷ್ಠ ತೂಕವನ್ನು ನಿಗದಿಪಡಿಸಿದೆ.

ಮಾರ್ಗಸೂಚಿ ಏನು ಹೇಳುತ್ತದೆ?: ಮಾರ್ಗಸೂಚಿಗಳ ಪ್ರಕಾರ, 1 ಮತ್ತು 2ನೇ ತರಗತಿಯ ವಿದ್ಯಾರ್ಥಿಗಳ ಬ್ಯಾಗುಗಳು 1.6 ರಿಂದ 2.2 ಕೆಜಿ ತೂಕವನ್ನು ಮೀರಬಾರದು. 3 ರಿಂದ 5 ನೇ ತರಗತಿಯಲ್ಲಿರುವವರ ಬ್ಯಾಗ್‌ಗಳ ತೂಕ 1.7-2.5 ಕೆಜಿಗೆ ಮಿತಿಗೊಳಿಸಬೇಕು. 6 ಮತ್ತು 7ನೇ ತರಗತಿಯ ವಿದ್ಯಾರ್ಥಿಗಳಿಗೆ, 2-3 ಕೆಜಿ ಮತ್ತು 8ನೇ ತರಗತಿಯಲ್ಲಿರುವವರಿಗೆ 2.5ರಿಂದ 4 ಕೆಜಿಯಷ್ಟು ಭಾರವನ್ನು ಅನುಮತಿಸಲಾಗಿದೆ. 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳ ಶಾಲಾಚೀಲಗಳು 2.5ರಿಂದ 4.5 ಕೆ.ಜಿಗಳಷ್ಟೇ ಇರಬೇಕೆಂದು ಅನುಮತಿಸಲಾಗಿದೆ.

ಬ್ಯಾಗ್‌ಗಳ ತೂಕದ ಮಹತ್ವ: ಶಾಲಾ ಮಕ್ಕಳ ಒಟ್ಟು ಬೆಳವಣಿಗೆಯಲ್ಲಿ ಶಾಲಾ ಬ್ಯಾಗ್‌ಗಳ ತೂಕದ ಪಾತ್ರವು ಮುಖ್ಯವಾಗಿದೆ. ಶೈಕ್ಷಣಿಕ ಸಾಮಗ್ರಿಗಳನ್ನು ಕೊಂಡೊಯ್ಯಲು ಬ್ಯಾಗ್ ಅಗತ್ಯವಾಗಿದ್ದರೂ ಅತಿ ತೂಕದ ಬ್ಯಾಗ್‌ಗಳನ್ನು ಹೊರುವ ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ.

ದೈಹಿಕ ಆರೋಗ್ಯದ ಮೇಲೆ ಬೀರುವ ಪರಿಣಾಮಗಳು: ಅತಿ ತೂಕವಿರುವ ಶಾಲಾ ಬ್ಯಾಗ್‌ಗಳಿಂದ ಮಸ್ಕ್ಯುಲೋಸ್ಕೆಲಿಟಲ್ ಡಿಸಾರ್ಡರ್, ಬೆನ್ನುನೋವು, ಕತ್ತುನೋವು ಮತ್ತು ಬೆನ್ನು ಬಾಗಿಸಿ ನಡೆಯುವ, ಅಸಮತೋಲಿತ ದೇಹ ಭಂಗಿಯಂಥ ಸಮಸ್ಯೆಗಳು ಉಂಟಾಗಬಹುದು. ಅಲ್ಲದೇ ಸ್ನಾಯುಗಳು ಮತ್ತು ಕೀಲುಗಳು ಬಳಲಿ, ದೀರ್ಘಾವಧಿಯ ತೊಂದರೆ ಬರಬಹುದು. ಭಾರವಾದ ಚೀಲಗಳು ಮಕ್ಕಳ ಬೆನ್ನುಮೂಳೆ ಮತ್ತು ಮೂಳೆ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತವೆ. ಭಾರವಾದ ಚೀಲಗಳನ್ನು ದೀರ್ಘಕಾಲದವರೆಗೆ ಹೊತ್ತು ಸಾಗುವುದರಿಂದ ಸ್ಕೋಲಿಯೋಸಿಸ್ ಅಥವಾ ಕೈಫೋಸಿಸ್‌ನಂಥ ಅನಾರೋಗ್ಯ ಪರಿಸ್ಥಿತಿಗಳಿಗೂ ಕಾರಣವಾಗಬಹುದು.



ಮಾನಸಿಕ ಯೋಗಕ್ಷೇಮ: ಭಾರವಾದ ಶಾಲಾ ಚೀಲಗಳನ್ನು ಒಯ್ಯುವುದು ಮಕ್ಕಳ ಮಾನಸಿಕ ಸ್ವಾಸ್ಥ್ಯದ ಮೇಲೂ ಪರಿಣಾಮ ಬೀರಬಹುದು. ಭಾರವಾದ ಚೀಲಗಳಿಂದ ಉಂಟಾಗುವ ದೈಹಿಕ ಅಸ್ವಸ್ಥತೆ ಮತ್ತು ಒತ್ತಡ, ಆತಂಕಗಳು ಶಾಲೆಗೆ ಹಾಜರಾಗಲು ಅನಾಸಕ್ತಿ ಅಥವಾ ದೈಹಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ನಿರಾಸಕ್ತಿ ತೋರಬಹುದು.

ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆ: ಭಾರವಾದ ಶಾಲಾ ಚೀಲಗಳು ಮಕ್ಕಳ ಸಾಮಾಜಿಕ ಸಂವಹನ ಮತ್ತು ಭಾವನಾತ್ಮಕ ಬೆಳವಣಿಗೆಗೆ ಅಡ್ಡಿಯಾಗಬಹುದು. ಭಾರವಾದ ಚೀಲಗಳನ್ನು ಹೊತ್ತೊಯ್ಯುವ ಭಾರ ಮತ್ತು ನೋವು ಮಕ್ಕಳ ಮನಸ್ಸಿನಲ್ಲಿ ಅಶಾಂತಿ ಮೂಡಿಸಲು ಕಾರಣವಾಗಬಹುದು. ಶಾಲೆಗೆ ತೆರಳುವ ಸಮಯದಲ್ಲಿ ನಡೆಯುವ ಯಾವುದೇ ಸಣ್ಣಪುಟ್ಟ ಕಿರಿಕಿರಿಗಳಿಗೂ ಮಕ್ಕಳು ಜಗಳ ಮಾಡುವುದು ಅಥವಾ ಅಸಹಿಷ್ಣುತೆ ತೋರಿಸುವುದು ಮತ್ತು ಮೂಡ್ ಸ್ವಿಂಗ್‌ಗಳಿಗೆ ಹೆಚ್ಚು ಒಳಗಾಗಬಹುದು. ಇದು ಗೆಳೆಯರು ಮತ್ತು ಶಿಕ್ಷಕರೊಂದಿಗಿನ ಅವರ ಸಂಬಂಧಗಳ ಮೇಲೆ ಪರಿಣಾಮ ಬೀರುತ್ತದೆ.

ಕಲಿಕೆಯ ಮೇಲೆ ಪರಿಣಾಮ: ಭಾರವಾದ ಚೀಲಗಳಿಂದ ಉಂಟಾಗುವ ದೈಹಿಕ ಒತ್ತಡದಿಂದ ಮಕ್ಕಳ ಏಕಾಗ್ರತೆಗೆ ಭಂಗ ಬರಬಹುದು. ಮಾಹಿತಿಯನ್ನು ಸಮರ್ಪಕವಾಗಿ ಅರ್ಥಮಾಡಿಕೊಳ್ಳದೇ ಹೋಗಬಹುದು. ಇದು ಕ್ರಮೇಣ ಕಲಿಯುವ ಮತ್ತು ಕಲಿತಿದ್ದನ್ನು ಅರ್ಥೈಸಿಕೊಳ್ಳುವ ಅವರ ಸಾಮರ್ಥ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಅಂತಿಮವಾಗಿ ಅವರ ಶೈಕ್ಷಣಿಕ ಪ್ರಗತಿ ಕುಗ್ಗುತ್ತದೆ.

ಪೋಷಕರ ಕಾಳಜಿ ಮತ್ತು ಒಳಗೊಳ್ಳುವಿಕೆ: ಪಾಲಕರು ಸಾಮಾನ್ಯವಾಗಿ ಶಾಲಾ ಬ್ಯಾಗ್‌ಗಳ ತೂಕ ಅದರಿಂದ ತಮ್ಮ ಮಕ್ಕಳ ಯೋಗಕ್ಷೇಮದ ಮೇಲೆ ಬೀರುವ ಪ್ರಭಾವದ ಬಗ್ಗೆ ಕಳವಳಕ್ಕೆ ಒಳಗಾಗುತ್ತಾರೆ. ಬ್ಯಾಗ್ ತೂಕವನ್ನು ಕಡಿಮೆ ಮಾಡುವ ಕ್ರಮಗಳ ಅನುಷ್ಠಾನದ ಬಗ್ಗೆ ಪೋಷಕರು ಮತ್ತು ಶಾಲಾ ಅಧಿಕಾರಿಗಳ ನಡುವೆ ಘರ್ಷಣೆ ಉಂಟಾಗಬಹುದು.

ಪಾಲಕರು ತಮ್ಮ ಮಕ್ಕಳ ಬ್ಯಾಗ್ ತೂಕ, ಪ್ಯಾಕಿಂಗ್ ಅಭ್ಯಾಸಗಳ ಬಗ್ಗೆ ಹೆಚ್ಚಿನ ರೀತಿಯ ಮೇಲ್ವಿಚಾರಣೆ ಮಾಡಲು ತೊಡಗಿ ಪೋಷಕರು ಮತ್ತು ಮಕ್ಕಳ ಸಂಬಂಧಗಳ ಮೇಲೂ ಪರಿಣಾಮ ಬೀರಬಹುದು.

ಮಕ್ಕಳ ದೈಹಿಕ ಆರೋಗ್ಯ, ಮಾನಸಿಕ ಯೋಗಕ್ಷೇಮ ಮತ್ತು ಒಟ್ಟಾರೆ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮಗಳನ್ನು ತಡೆಗಟ್ಟಲು ಅವುಗಳ ತೂಕವನ್ನು ಎಚ್ಚರಿಕೆಯಿಂದ ಮೇಲ್ವಿಚಾರಣೆ ಮಾಡಬೇಕು.

ಶಾಲೆಗಳು, ಪೋಷಕರು ಮತ್ತು ನೀತಿ ನಿರೂಪಕರು ಬ್ಯಾಗ್ ತೂಕವನ್ನು ಕಡಿಮೆ ಮಾಡಲು, ಆರೋಗ್ಯಕರ ಅಭ್ಯಾಸಗಳನ್ನು ಉತ್ತೇಜಿಸಲು ಮತ್ತು ಮಕ್ಕಳ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡುವಂಥ ಪರಿಸರ ರೂಪಿಸಬೇಕಿದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ –ಗಣಿತ

ಅಧ್ಯಾಯ–1 ಸಮಾಂತರ ಶ್ರೇಢಿ

ಗಮನಿಸಿ:– ಈ ಭಾಗದಲ್ಲಿ ಬರುವ ಸಮಸ್ಯೆಗಳನ್ನು ಬಿಡಿಸುವ ಮೊದಲು ಈ ಕೆಳಗಿನ ಅಂಶಗಳನ್ನು ತಿಳಿದುಕೊಂಡಿರಿ

* ನಿರ್ದಿಷ್ಟ ನಿಯಮಕ್ಕೆ ಅನುಸಾರವಾಗಿ ವ್ಯವಸ್ಥಿತಗೊಳಿಸಿರುವ ಸಂಖ್ಯೆಗಳ ಗಣವೇ ಶ್ರೇಢಿಯಾಗಿದೆ
* ಶ್ರೇಢಿಯ ಯಾವುದೇ ಒಂದು ಪದ ಮತ್ತು ಅದರ ಹಿಂದಿನ ಪದಗಳ ನಡುವಿನ ವ್ಯತ್ಯಾಸವು ಸ್ಥಿರಾಂಕವಾಗಿದ್ದರೆ ಆ ಶ್ರೇಢಿಯು ಸಮಾಂತರ ಶ್ರೇಢಿಯಾಗಿರುತ್ತದೆ.
* ಸಮಾಂತರ ಶ್ರೇಢಿಯ ಒಂದು ಪದ ಮತ್ತು ಅದರ ಹಿಂದಿನ ಪದಗಳ ನಡುವಿನ ವ್ಯತ್ಯಾಸವು ಸ್ಥಿರಾಂಕವಾಗಿದ್ದು ಅದನ್ನು ಸಾಮಾನ್ಯ ವ್ಯತ್ಯಾಸ (c.d) ಎನ್ನುತ್ತಾರೆ ಮತ್ತು ಅದನ್ನು dಯಿಂದ ಸೂಚಿಸುತ್ತಾರೆ.
* ಸಮಾಂತರ ಶ್ರೇಢಿಯ nನೇ ಪದ $T_n = a + (n - 1)d$ ಆಗಿರುತ್ತದೆ.
* ಸಮಾಂತರ ಶ್ರೇಢಿಯಲ್ಲಿನ ಒಂದು ಪದಕ್ಕೆ ಸಾಮಾನ್ಯ ವ್ಯತ್ಯಾಸ dಯನ್ನು ಕೂಡಿದಾಗ ಅದರ ಮುಂದಿನ ಪದ ದೊರೆಯುತ್ತದೆ

$$T_{n+1} = T_n + d$$

* ಸಮಾಂತರ ಶ್ರೇಢಿಯಲ್ಲಿನ ಒಂದು ಪದಕ್ಕೆ ಸಾಮಾನ್ಯ ವ್ಯತ್ಯಾಸ dಯನ್ನು ಕಳೆದಾಗ ಅದರ ಹಿಂದಿನ ಪದ ದೊರೆಯುತ್ತದೆ

$$T_{n-1} = T_n - d$$

* ಸಮಾಂತರ ಶ್ರೇಢಿಯ ಸಾಮಾನ್ಯರೂಪ

$$a, a + d, a + 2d \ldots\ldots a + (n - 1) d$$

* ಸಮಾಂತರ ಶ್ರೇಢಿಯ nನೇ ಪದಗಳ ಮೊತ್ತ ಮೊದಲ ಮತ್ತು ಕೊನೆಯ ಪದಗಳ ಸರಾಸರಿಯು nನಷ್ಟು ಇರುತ್ತದೆ.
* ಸ್ವಾಭಾವಿಕ ಸಂಖ್ಯೆಗಳ ಮೊದಲ n ಪದಗಳ ಮೊತ್ತ ಇದನ್ನು $\sum n$ ಎಂದು ಸಹ ಸೂಚಿಸುತ್ತಾರೆ.

$$\therefore \sum n = \frac{n(n+1)}{2}$$

* ಸಮಾಂತರ ಶ್ರೇಢಿಯ ಮೊದಲ n ಪದಗಳ ಮೊತ್ತ

$$S_n = \frac{n}{2}\left[2a+(n-1)d\right]$$

<u>ಈ ವರ್ಷ ನಡೆದ (ಮಾರ್ಚ್– 2024) ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿ ಈ ಪಾಠದಿಂದ ನೀಡಲಾದ ಪ್ರಶ್ನೆಗಳನ್ನು ಮೊದಲಿಗೆ ನೋಡೋಣ.</u>

1) ಒಂದು ಸಮಾಂತರ ಶ್ರೇಢಿಯ ಮೊದಲ ಆರು ಪದಗಳ ಮೊತ್ತವು ಕ್ರಮವಾಗಿ 78 ಮತ್ತು 55 ಆಗಿವೆ, ಹಾಗಾದರೆ ಶ್ರೇಢಿಯ ಆರನೇ ಪದವನ್ನು ಕಂಡುಹಿಡಿಯಿರಿ

ಪರಿಹಾರ:–

$$S_6 = 78$$
$$S_5 = 55$$
$$a_n = S_n - S_{n-1}$$
$$a_6 = S_6 - S_5 = 78 - 55$$
$$\therefore a_6 = 23$$

2) ಒಂದು ಸಮಾಂತರ ಶ್ರೇಢಿಯ ಮೊದಲ n ಪದಗಳವರೆಗಿನ ಮೊತ್ತ 210 ಮತ್ತು ಮೊದಲ (n-1) ಪದಗಳವರೆಗಿನ ಮೊತ್ತ 171 ಆಗಿವೆ, ಆ ಸಮಾಂತರ ಶ್ರೇಢಿಯ ಮೊದಲ ಪದ 3 ಆದರೆ, ಆ ಸಮಾಂತರ ಶ್ರೇಢಿಯನ್ನು ಕಂಡುಹಿಡಿಯಿರಿ ಮತ್ತು ಆ ಶ್ರೇಢಿಯ 20ನೇ ಪದವನ್ನು ಕಂಡುಹಿಡಿಯಿರಿ

ಪರಿಹಾರ:–

$S_n = 210, \quad S_{n-1} = 171 \quad a_n = ?$

$$a_n = S_n - S_{n-1}$$
$$= 210 - 171$$
$$\boxed{a_n = 39}$$

$S_n = 210, \quad a = 3, \quad a_n = 39, \quad n = ?$

$$S_n = \frac{n}{2}(a + a_n)$$
$$210 = \frac{n}{2}(3+39)$$
$$210 = \frac{n}{2} \times \overset{21}{\cancel{42}}$$
$$21n = 210$$
$$n = \frac{210}{21}$$
$$\boxed{n = 10}$$

$a = 3, n = 10, a_n = 39, d = ?$

$$a_n = a + (n-1)d$$
$$39 = 3 + (10-1)d$$
$$39 - 3 = 9d$$
$$9d = 36$$
$$\boxed{d = 4}$$

ಬೇಕಾದ ಸಮಾಂತರ ಶ್ರೇಢಿಯು $a, a+d, a+2d \ldots\ldots\ldots$

$3, 3+4, 3 = 8 \ldots\ldots\ldots$
$3, 7, 11, 15 \ldots\ldots\ldots$

$a = 3, d = 4, n = 20, a_{20} = ?$

$$a_n = a + (n-1)d$$
$$a_{20} = 3 + (20-1)4$$
$$= 3 + 19 \times 4 = 3 + 76$$
$$\boxed{a_{20} = 79}$$

<u>ಮಾರ್ಚ್– 2023 ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿ ಈ ಪಾಠದಿಂದ ನೀಡಲಾದ ಪ್ರಶ್ನೆಗಳನ್ನು ನೋಡೋಣ.</u>

1) 4, 7, 10 ...... ಸಮಾಂತರ ಶ್ರೇಢಿಯ 20ನೇ ಪದವನ್ನು ಕಂಡುಹಿಡಿಯಿರಿ

ಪರಿಹಾರ 4, 7, 10 ....

ಇಲ್ಲಿ $a = 4, \quad d = 7 - 4 = 3, \quad n = 20$

$$t_n = a + (n-1)d$$
$$t_{20} = 4 + (20-1)3$$
$$= 4 + 19 \times 3$$
$$= 4 + 57 = 61$$

2) ಒಂದು ಸಮಾಂತರ ಶ್ರೇಢಿಯ 2ನೇ ಮತ್ತು 4ನೇ ಪದಗಳ ಮೊತ್ತ 54 ಹಾಗೂ ಅದರ ಮೊದಲ 11 ಪದಗಳ ಮೊತ್ತ 693 ಆದರೆ, ಸಮಾಂತರ ಶ್ರೇಢಿಯನ್ನು ಕಂಡುಹಿಡಿಯಿರಿ ಮತ್ತು ಈ ಶ್ರೇಢಿಯ ಎಷ್ಟನೇ ಪದವು ಅದರ 54ನೇ ಪದಕ್ಕಿಂತ 132 ಹೆಚ್ಚಾಗಿರುತ್ತದೆ?

ಪರಿಹಾರ:– ಒಂದು ಸಮಾಂತರ ಶ್ರೇಢಿಯ 2ನೇ ಮತ್ತು 4ನೇ ಪದಗಳ ಮೊತ್ತ 54

$$a_2 + a_4 = 54$$
$$a + d + a + 3d = 54$$
$$2a + 4d = 54$$
$$a + 2d = 27 \ldots\ldots (i)$$

ಮೊದಲ 11 ಪದಗಳ ಮೊತ್ತ 693

$$S_{11} = 693$$
$$\frac{11}{2}\left[2a+(11-1)d\right] = 693$$
$$2a + 10d = 693\frac{2}{11}$$

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC MATHS

DIFFERENTIABILITY

(....Contd)

29) Differentiate $\tan^{-1}\left(\frac{\sqrt{1+x^2}-1}{x}\right)$ w.r.t $\cos^{-1}\left(\frac{1-x^2}{1+x^2}\right)$

Soln:-

$$y = \tan^{-1}\left(\frac{\sqrt{1+\tan^2\theta}-1}{\tan\theta}\right)$$
$$= \tan^{-1}\left(\frac{\sec\theta-1}{\tan\theta}\right) = \tan^{-1}\left(\frac{\frac{1}{\cos\theta}-1}{\frac{\sin\theta}{\cos\theta}}\right)$$
$$= \tan^{-1}\left(\frac{1-\cos\theta}{\sin\theta}\right) = \tan^{-1}\left(\frac{2\sin^2\theta/2}{2\sin\theta/2\cos\theta/2}\right)$$
$$\Rightarrow y = \tan^{-1}(\tan\theta/2)$$
$$\therefore \frac{dy}{dx} = \frac{d}{dx}\left(\frac{\tan^{-1}(x)}{2}\right) = \frac{1}{2}\cdot\frac{1}{(1+x^2)} = \frac{1}{2(1+x^2)}$$

In eqn (2) Put $x = \tan\theta$ then, $\theta = \tan^{-1}x$

$$z = \cos^{-1}\left(\frac{1-\tan^2\theta}{1+\tan^2\theta}\right)$$
$$= \cos^{-1}(\cos 2\theta) \quad \left[\because \cos 2\theta = \frac{1-\tan^2\theta}{1+\tan^2\theta}\right]$$
$$= 2\theta = 2\tan^{-1}x$$
$$\therefore \frac{dz}{dx} = 2.\frac{1}{1+x^2}$$
$$\therefore \frac{dy}{dz} = \frac{\frac{dy}{dx}}{\frac{dz}{dx}} = \frac{\frac{1}{2(1+x^2)}}{\frac{2}{1+x^2}} = \frac{1}{4}$$

30) If $y = (x^2+a^2)^6$; show that $(x^2+a^2)\frac{d^2y}{dx^2} - 10x\frac{dy}{dx} - 12y = 0$

Soln: - Given $y = (x^2+a^2)^6$

$$\frac{dy}{dx} = 6(x^2+a^2)^5.2x$$

Multiply both sides by (x^2+a^2)

$$(x^2+a^2)\frac{dy}{dx} = 6(x^2+a^2)^6\,2x$$
$$= 12x(x^2+a^2)^6 = 12xy$$
$$\therefore (x^2+a^2)\frac{dy}{dx} = 12xy$$

Differentiating w.r.t x, on both sides

$$\Rightarrow (x^2+a^2)\frac{d^2y}{dx^2} + \frac{dy}{dx}.2x$$
$$= 12\left(x.\frac{dy}{dx} + y.1\right) = 12x\frac{dy}{dx} + 12y$$
$$\Rightarrow (x^2+a^2)\frac{d^2y}{dx^2} + 2x\frac{dy}{dx} - 12x\frac{dy}{dx} - 12y = 0$$
$$(x^2+a^2)\frac{d^2y}{dx^2} - 10x\frac{dy}{dx} - 12y = 0; \text{hence proved.}$$

31) If $x = a\left[\cos t + \log(\tan t/2)\right]$ and $y = a\sin t$. Find the value of $\frac{d^2y}{dx^2}$ at $t = \frac{\pi}{4}$.

Soln :– Given, $x = a\left[\cos t + \log(\tan t/2)\right]$

$$\frac{dx}{dt} = a\left(-\sin t + \frac{1}{\tan t/2}.\sec^2 t/2.\frac{1}{2}\right)$$
$$= a\left(-\sin t + \frac{1}{\frac{\sin t/2}{\cos t/2}}\cdot\frac{1}{\cos^2 t/2}\cdot\frac{1}{2}\right)$$
$$= a\left(-\sin t + \frac{1}{2\sin t/2\cos t/2}\right)$$
$$= a\left(-\sin t + \frac{1}{\sin t}\right) = a\left(\frac{-\sin^2 t+1}{\sin t}\right)$$
$$= a\left(\frac{1-\sin^2 t}{\sin t}\right) = \frac{a\cos^2 t}{\sin t}$$
$$(\because 1-\sin^2 t = \cos^2 t)$$

Now consider $y = a\sin t$

$$\therefore \frac{dy}{dx} = \frac{a\cos t}{a.\frac{\cos^2 t}{\sin t}} = \frac{\sin t}{\cos t} = \tan t$$
$$\therefore \frac{d^2y}{dx^2} = \frac{d}{dx}(\tan t)$$
$$= \sec^2 t.\frac{dt}{dx}\frac{1}{\frac{a\cos^2 t}{\sin t}} = \frac{\sin t}{a\cos^4 t}$$
$$\therefore \left(\frac{d^2y}{dx^2}\right)_{t=\frac{\pi}{4}} = \frac{\sin\frac{\pi}{4}}{a\cos^4\frac{\pi}{4}} = \frac{2\sqrt{2}}{a}.$$

32) If $y = x^{x^{x^{\cdot^{\cdot^{\infty}}}}}$ find $\frac{dy}{dx}$

Soln: - $y = x^{x^{x^{\cdot^{\cdot^{\infty}}}}}$ i.e., $y = x^y$

Taking logarithm on both sides,

$$\log_e y = \log_e(x^y) = y\log_e x$$
$$\frac{dy}{dx}(\log_e y) = \frac{d}{dx}(y\log_e x)$$
$$\frac{1}{y}.\frac{dy}{dx} = y.\frac{1}{x} + \log x.\frac{dy}{dx}$$
$$\Rightarrow \frac{1}{y}.\frac{dy}{dx} - \log x.\frac{dy}{dx} = y.\frac{1}{x}$$
$$\Rightarrow \frac{dy}{dx}\left(\frac{1}{y} - \log x\right) = \frac{y}{x}$$

(Contd...)



❦ ಸುಭಾಷಿತ ❦

ಅಧಿಕಾರ ಹೆಚ್ಚಿದಷ್ಟೂ ದುರುಪಯೋಗದ ಅಪಾಯ ಹೆಚ್ಚು.
–ಚಾಣಕ್ಯ

ಮತದಾನದ ನಿಖರ ಸಂಖ್ಯೆಯನ್ನು ಪ್ರಕಟಿಸದಿರುವುದು ಸರಿಯಲ್ಲ

ಲೋಕಸಭೆ ಚುನಾವಣೆಯ ಮೊದಲ ಎರಡು ಹಂತಗಳ ಮತದಾನ ಪ್ರಮಾಣದ ದತ್ತಾಂಶವನ್ನು ಪ್ರಕಟಿಸುವಲ್ಲಿ ಚುನಾವಣಾ ಆಯೋಗವು ವಿಳಂಬ ಮಾಡಿರುವುದರ ಕುರಿತು ಪ್ರಶ್ನೆಗಳು ಎದ್ದಿವೆ. ಆಯೋಗವು ಪ್ರಕಟಿಸಿರುವ ಮಾಹಿತಿ ಮತ್ತು ಅದರ ಸತ್ಯಾಸತ್ಯತೆಯ ಕುರಿತು ಕೂಡ ಸಂದೇಹಗಳು ವ್ಯಕ್ತವಾಗಿವೆ. ಏಪ್ರಿಲ್ 19ರಂದು ನಡೆದ ಮೊದಲ ಹಂತದ ಮತದಾನದ ಪ್ರಮಾಣದ ಮಾಹಿತಿಯನ್ನು ಆಯೋಗವು 11 ದಿನಗಳ ಬಳಿಕ ಪ್ರಕಟಿಸಿದೆ. ಏಪ್ರಿಲ್ 26ರಂದು ನಡೆದ ಎರಡನೆ ಹಂತದ ಮತದಾನದ ಪ್ರಮಾಣ ನಾಲ್ಕು ದಿನಗಳ ಬಳಿಕ ಪ್ರಕಟವಾಯಿತು. ಕಂಪ್ಯೂಟರ್‌ಗಳ ಬಳಕೆ ಇಲ್ಲದ ಕಾಲದಲ್ಲಿ ಕೂಡ ಮತದಾನ ನಡೆದ ಒಂದೆರಡು ದಿನಗಳಲ್ಲಿ ಮತದಾನ ಪ್ರಮಾಣವನ್ನು ಪ್ರಕಟಿಸಲಾಗುತ್ತಿತ್ತು. ಹಾಗಾಗಿ, ಈ ಬಾರಿ ಆಗಿರುವ ವಿಳಂಬವು ಅಸಹಜವೇ ಆಗಿದೆ. 2019ರಲ್ಲಿ ನಡೆದ ಲೋಕಸಭೆ ಚುನಾವಣೆಯ ಮತದಾನದ ನಿಖರ ಪ್ರಮಾಣವನ್ನು ಮತದಾನ ನಡೆದ ಎರಡು ದಿನಗಳಲ್ಲಿಯೇ ಪ್ರಕಟಿಸಲಾಗಿತ್ತು. ಮತದಾನದ ಪ್ರಮಾಣವನ್ನು ಪ್ರಕಟಿಸುವಲ್ಲಿ ಆಗಿರುವ ವಿಳಂಬದ ಕುರಿತು ವಿರೋಧ ಪಕ್ಷಗಳು ಕಳವಳ ವ್ಯಕ್ತಪಡಿಸಿವೆ. ಈ ವಿಳಂಬಕ್ಕೆ ನಂಬುವಂತಹ ಯಾವ ಕಾರಣವೂ ಇಲ್ಲ ಎಂದು ಈ ಪಕ್ಷಗಳು ಹೇಳಿವೆ. ಮತದಾನ ಪ್ರಕ್ರಿಯೆ ಪೂರ್ಣಗೊಂಡ ಕೆಲವೇ ತಾಸುಗಳಲ್ಲಿ ಮತಚಲಾವಣೆ ಪ್ರಮಾಣವನ್ನು ಸಂಗ್ರಹಿಸಿ, ಪ್ರಕಟಿಸಬಹುದಾದ ತಂತ್ರಜ್ಞಾನ ಈಗ ನಮ್ಮಲ್ಲಿ ಇದೆ.



ಚುನಾವಣೆ ನಡೆಯುವ ಪ್ರತಿಯೊಂದು ಹಂತದಲ್ಲಿಯೂ ಚುನಾವಣಾ ಆಯೋಗವು ಯಾವುದೇ ಸಂದೇಹಕ್ಕೆ ಆಸ್ಪದ ಇಲ್ಲದ ರೀತಿಯಲ್ಲಿ ಸಮರ್ಪಕವಾಗಿ ನಡೆದುಕೊಳ್ಳಬೇಕು

ಚುನಾವಣಾ ಆಯೋಗ ಪ್ರಕಟಿಸಿರುವ ದತ್ತಾಂಶವು ಪರಿಪೂರ್ಣವೂ ಅಲ್ಲ. ವಿವಿಧ ಕ್ಷೇತ್ರಗಳಲ್ಲಿ ಆಗಿರುವ ಮತದಾನದ ಶೇಕಡಾವಾರು ಪ್ರಮಾಣವನ್ನು ಮಾತ್ರ ಆಯೋಗವು ನೀಡಿದೆ; ಎಷ್ಟು ಸಂಖ್ಯೆಯ ಮತ ಚಲಾವಣೆಯಾಗಿದೆ ಎಂಬ ವಿವರವನ್ನು ನೀಡಿಲ್ಲ. ಈ ಹಿಂದೆ, ಎಷ್ಟು ಮತಗಳು ಚಲಾವಣೆ ಆಗಿವೆ ಎಂಬುದನ್ನು ಪ್ರಕಟಿಸುವ ಸಂಪ್ರದಾಯ ಇತ್ತು. ದತ್ತಾಂಶವನ್ನು ಅರ್ಥ ಮಾಡಿಕೊಳ್ಳಲು ಮತ್ತು ವ್ಯಾಖ್ಯಾನಿಸಲು ಶೇಕಡಾವಾರು ಪ್ರಮಾಣ ಸಾಕಾಗುವುದಿಲ್ಲ. ಚಲಾವಣೆಯಾದ ಮತಗಳ ಒಟ್ಟು ಸಂಖ್ಯೆಯ ಆಧಾರದಲ್ಲಿ ಶೇಕಡಾವಾರು ಪ್ರಮಾಣವನ್ನು ಕಂಡುಕೊಳ್ಳಲಾಗುತ್ತದೆ. ಮತದಾನವನ್ನು ಅರ್ಥ ಮಾಡಿಕೊಳ್ಳಲು ಮತ್ತು ವಿಶ್ಲೇಷಣೆಗೆ ಒಳಪಡಿಸಲು ನಿಖರವಾದ ಸಂಖ್ಯೆಯನ್ನೇ ಕೊಡಬೇಕು. ಮತದಾನ ಮಾಡಿದ ಜನರ ಸಂಖ್ಯೆಯು ದೊಡ್ಡದಿರುವ ಕಾರಣ ಶೇಕಡಾವಾರು ಪ್ರಮಾಣವು ಸತ್ಯವನ್ನು ಮರೆಮಾಚಬಹುದು. ಕೆಲವು ಸಂದರ್ಭಗಳಲ್ಲಿ ಕೆಲವೇ ಕೆಲವು ಮತಗಳ ವ್ಯತ್ಯಾಸ ಕೂಡ ಬಹುದೊಡ್ಡ ಪರಿಣಾಮಕ್ಕೆ ಕಾರಣ ಆಗಬಹುದು. ಶೇಕಡಾವಾರು ಪ್ರಮಾಣದಲ್ಲಿ ಕೂಡ ಆರಂಭದಲ್ಲಿ ಕೊಟ್ಟ ದತ್ತಾಂಶ ಹಾಗೂ ಅಂತಿಮ ದತ್ತಾಂಶದ ನಡುವೆ ದೊಡ್ಡ ಅಂತರ ಇರುವುದರ ಕುರಿತು ಕೂಡ ಕೆಲವು ರಾಜಕೀಯ ಪಕ್ಷಗಳು ಕಳವಳ ವ್ಯಕ್ತಪಡಿಸಿವೆ. ಆರಂಭದಲ್ಲಿ ಕೊಟ್ಟ ದತ್ತಾಂಶ ಮತ್ತು ಅಂತಿಮ ದತ್ತಾಂಶದ ನಡುವೆ ಶೇ 5ರಿಂದ ಶೇ 6ರಷ್ಟು ವ್ಯತ್ಯಾಸ ಕಂಡುಬಂದಿದೆ. ಇದು ಕೂಡ ಅಸಹಜವೇ ಆಗಿದೆ.

ಚುನಾವಣೆ ನಡೆಯುವ ಪ್ರತಿಯೊಂದು ಹಂತದಲ್ಲಿಯೂ ಚುನಾವಣಾ ಆಯೋಗವು ಯಾವುದೇ ಸಂದೇಹಕ್ಕೆ ಆಸ್ಪದ ಇಲ್ಲದ ರೀತಿಯಲ್ಲಿ ಸಮರ್ಪಕವಾಗಿ ನಡೆದುಕೊಳ್ಳಬೇಕು. ಆದರೆ, ಚುನಾವಣಾ ಆಯೋಗವು ಹಲವು ವಿಚಾರಗಳಲ್ಲಿ ಟೀಕೆಗೆ ಒಳಗಾಗಿದೆ. ಆಯೋಗವು ಸಿದ್ಧಪಡಿಸಿದ ಚುನಾವಣಾ ವೇಳಾಪಟ್ಟಿಯ ಕುರಿತೇ ಟೀಕೆಗಳು ಕೇಳಿಬಂದಿದ್ದವು. ಬಿಜೆಪಿಯ ಮುಖಂಡರು ಮತ್ತು ಕೇಂದ್ರದ ಸಚಿವರು ಚುನಾವಣಾ ಮಾದರಿ ನೀತಿ ಸಂಹಿತೆಯನ್ನು ಉಲ್ಲಂಘಿಸಿ ಮಾಡಿದ ದ್ವೇಷ ಭಾಷಣಗಳ ಕುರಿತು ಆಯೋಗವು ಯಾವ ಕ್ರಮವನ್ನೂ ಕೈಗೊಂಡಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಮಾಡಿದ ದ್ವೇಷ ಭಾಷಣದ ಕುರಿತು ಆಯೋಗವು ಯಾವುದೇ ಕ್ರಮಕ್ಕೆ ಮುಂದಾಗಿಲ್ಲ. ಎಷ್ಟು ಜನರು ಮತದಾನ ಮಾಡಿದ್ದಾರೆ ಎಂಬ ಸಂಖ್ಯೆಯು ಬಹಳ ಮುಖ್ಯವಾದುದು. ಚುನಾವಣಾ ಆಯೋಗವು ನೀಡಿರುವ ಅಪೂರ್ಣ ಅಂಕಿ ಅಂಶವನ್ನು ಫಲಿತಾಂಶವನ್ನು ತಿರುಚಲು ಬಳಸಿಕೊಳ್ಳಬಹುದು ಎಂಬ ಆತಂಕವೂ ವ್ಯಕ್ತವಾಗಿದೆ. ಚುನಾವಣಾ ಆಯೋಗದ ಅಸಹಜ ನಡವಳಿಕೆಯೇ ಇಂತಹ ಆತಂಕಕ್ಕೆ ಕಾರಣವಾಗಿದೆ. ಚುನಾವಣಾ ಆಯೋಗದ ನಡವಳಿಕೆಯಲ್ಲಿ ರಹಸ್ಯ ಇರಬಾರದು; ಎಲ್ಲ ಹಂತಗಳಲ್ಲಿಯೂ ಪಾರದರ್ಶಕತೆ ಇರಬೇಕು; ಅದಕ್ಷವಾದ ನಡವಳಿಕೆ ಇರಲೇಬಾರದು. ಆಯೋಗವು ಮತದಾನಕ್ಕೆ ಸಂಬಂಧಿಸಿದ ಅಪೂರ್ಣ ಮತ್ತು ಅಸಮರ್ಪಕ ದತ್ತಾಂಶವನ್ನು ಪ್ರಕಟಿಸಿರುವುದು ಸರಿಯಲ್ಲ. ಒಂದು ವೇಳೆ ದತ್ತಾಂಶ ಪ್ರಕಟಣೆಯಲ್ಲಿ ಆಗಿರುವ ವಿಳಂಬ ಮತ್ತು ಮತದಾನದ ಸಂಖ್ಯೆಯನ್ನು ನೀಡದಿರುವುದಕ್ಕೆ ಕಾರಣಗಳಿದ್ದರೆ ಅವುಗಳನ್ನು ವಿವರಿಸಬೇಕಿತ್ತು.

ದಿನದ ಟ್ವೀಟ್

ಬೇಕಾಗಿದೆ ಬೆಂಬಲ



ಪ್ರಜ್ವಲ್ ರೇವಣ್ಣ ಅವರಿಗೆ ಸಂಬಂಧಿಸಿದೆ ಎನ್ನಲಾದ ವಿಡಿಯೊಗಳ ಭಯಾನಕತೆಗಳು ಒಂದರ ಹಿಂದೆ ಮತ್ತೊಂದರಂತೆ ಅನಾವರಣಗೊಳ್ಳುತ್ತಿವೆ. ಸಂತ್ರಸ್ತ ಮಹಿಳೆಯರಿಗೆ ಸಹಾಯ ಮತ್ತು ಬೆಂಬಲದ ಅಗತ್ಯವಿದೆ. ಆದರೆ, ಒಂದೆಡೆ ಅದಕ್ಕೆ ನಿರಾಕರಣೆ ಕಂಡುಬರುತ್ತಿದೆ. ಮತ್ತೊಂದೆಡೆ, ಈ ವಿಡಿಯೊಗಳಲ್ಲಿರುವ ದೃಶ್ಯಗಳನ್ನು ನೋಡಿ ಖುಷಿಪಡುತ್ತಿರುವ ಹೀನಾಯ ಮನಃಸ್ಥಿತಿ ಕಂಡುಬರುತ್ತಿದೆ.

ಕಲ್ಪನಾ ಶರ್ಮಾ, ಲೇಖಕಿ

ಕಿಡಿನುಡಿ



ಆಹಾರ ಸುರಕ್ಷತೆಯ ಹೆಸರಿನಲ್ಲಿ ನಮ್ಮ ಆಡಳಿತ ವ್ಯವಸ್ಥೆಯು ವಿವಿಧ ಕಾನೂನು, ನಿಯಮಗಳು ಮತ್ತು ಮಾರ್ಗದರ್ಶಿ ಸೂತ್ರಗಳನ್ನು ಸೃಷ್ಟಿಸುವುದು ಜನರಿಗೆ ನಿಜವಾದ ಪ್ರಯೋಜನ ದೊರೆಯಲಿ ಎಂದಲ್ಲ. ಲಂಚ ನೀಡದವರು ಅಥವಾ ಅಧಿಕಾರಿಗಳ ಹುಕುಂ ಪಾಲಿಸದವರನ್ನು ಶೋಷಿಸುವ ಸಲುವಾಗಿ ಮಾತ್ರ ಈ ನಿಯಮಗಳನ್ನು ಮಾಡಲಾಗಿರುತ್ತದೆ.

ಪ್ರಿಯಾಂಕಾ ಲಾಹಿರಿ, ಫಿಟ್‌ನೆಸ್ ಕೋಚ್

25 ವರ್ಷಗಳ ಹಿಂದೆ

ಗುರುವಾರ, 6-5-1999

• **ಕೊಯಮತ್ತೂರು ಸ್ಫೋಟ ಬಾಷಾ, ಮದನಿ ಸೇರಿ 180 ಜನರ ವಿರುದ್ಧ ಆರೋಪಪಟ್ಟಿ**

ಕೊಯಮತ್ತೂರು, ಮೇ 5 (ಪಿಟಿಐ)– ಬಿಜೆಪಿ ಮುಖಂಡ ಹಾಗೂ ಕೇಂದ್ರ ಗೃಹ ಸಚಿವ ಎಲ್.ಕೆ. ಅಡ್ವಾಣಿ ಅವರನ್ನು ಹತ್ಯೆ ಮಾಡುವ ಉದ್ದೇಶದಿಂದ ರೂಪಿಸಿದ್ದ ಫೆಬ್ರುವರಿ 14ರ ಸರಣಿ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಷೇಧಿತ ಅಲ್–ಉಮ್ಮಾ ಸಂಘಟನೆಯ ಅಧ್ಯಕ್ಷ ಎಸ್.ಎ. ಬಾಷಾ ಹಾಗೂ ಕೇರಳ ಮೂಲದ 'ಪೀಪಲ್ಸ್ ಡೆಮಾಕ್ರಟಿಕ್ ಪಕ್ಷ'ದ ಅಧ್ಯಕ್ಷ ಅಬ್ದುಲ್ ನಜೀರ್ ಮದನಿ ಸೇರಿದಂತೆ 180 ಜನರ ವಿರುದ್ಧ ಆರೋಪಪಟ್ಟಿ ಸಲ್ಲಿಸಲಾಗಿದೆ.

ಸುಮಾರು 59 ಜನರನ್ನು ಬಲಿ ತೆಗೆದುಕೊಂಡ ಸರಣಿ ಬಾಂಬ್ ಸ್ಫೋಟ ಪ್ರಕರಣದ ಕುರಿತು 14 ತಿಂಗಳು ಸುದೀರ್ಘ ತನಿಖೆ ನಡೆಸಿದ ರಾಜ್ಯ ಸಿಐಡಿ ವಿಭಾಗದ ವಿಶೇಷ ಪೊಲೀಸ್ ತಂಡ ಇಂದು ಇಲ್ಲಿನ ಐದನೇ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಅಂತಿಮ ಆರೋಪಪಟ್ಟಿ ಸಲ್ಲಿಸಿತು.

ಫೆಬ್ರುವರಿ 14ರಂದು ಚುನಾವಣಾ ಸಭೆಯಲ್ಲಿ ಭಾಗವಹಿಸಲಿದ್ದ ಅಡ್ವಾಣಿ ಅವರ ಹತ್ಯೆಗೆ ಏಳು ಮಂದಿ ಮಾನವ ಬಾಂಬ್‌ಗಳನ್ನು ನಿಯೋಜಿಸಲಾಗಿತ್ತು ಎಂದು ಆರೋಪ ಪಟ್ಟಿಯಲ್ಲಿ ಹೇಳಲಾಗಿದೆ.

• **ನಗರದಲ್ಲಿ ಸುರಿಮಳೆಗೆ ಉರುಳಿದ ಮರಗಳು**

ಬೆಂಗಳೂರು, ಮೇ 5– ಇಂದು ಮಧ್ಯಾಹ್ನದಿಂದಲೇ ಮೋಡ ಕವಿದ ವಾತಾವರಣದಲ್ಲಿ ನಗರದ ಎಲ್ಲಾ ಪ್ರದೇಶದಲ್ಲಿ ಮಳೆಯಾಗಿದ್ದು, ಅನೇಕ ಕಡೆ ಮರ ಉರುಳಿಬಿದ್ದು ಅನನುಕೂಲವಾಗಿರುವ ವರದಿಯಾಗಿದೆ.

50 ವರ್ಷಗಳ ಹಿಂದೆ

ಸೋಮವಾರ, 6-5-1974

• **ಸರ್ಕಾರದ ಬಿಗಿ ನಿಲುವು: ಬಂಧಿತರ ಬಿಡುಗಡೆ ಸಂಧಾನಕ್ಕೆ ವಿರೋಧಿಗಳ ಕರೆ**

ನವದೆಹಲಿ, ಮೇ 5– ಮೇ 8ರಿಂದ ಆರಂಭಿಸಲುದ್ದೇಶಿಸಿರುವ ರೈಲ್ವೆ ಮುಷ್ಕರದ ಬಗ್ಗೆ ಸರ್ಕಾರದ ಗಡಸು ಧೋರಣೆ ಮುಂದುವರಿದಿದ್ದು, ಈ ಮಧ್ಯೆ ಇಂದು ಇಲ್ಲಿ ಸಭೆ ಸೇರಿದ್ದ ಐದು ವಿರೋಧ ಪಕ್ಷಗಳ ಪ್ರತಿನಿಧಿಗಳು ಬಂಧಿತ ರೈಲ್ವೆ ನಾಯಕರುಗಳನ್ನು ತಕ್ಷಣ ಬಿಡುಗಡೆ ಮಾಡಿ ಸಂಧಾನ ಪುನರಾರಂಭಿಸುವಂತೆ ಮನವಿ ಮಾಡಿದ್ದಾರೆ.

ಜನತೆಯನ್ನು ತಪ್ಪುಹಾದಿಗೆಳೆಯುವ ಉದ್ದೇಶದಿಂದ ರೈಲ್ವೆ ನೌಕರರ ಮುಷ್ಕರದ ಬಗ್ಗೆ ಕೇಂದ್ರ ಸರ್ಕಾರ ಸುಳ್ಳು ಹೇಳಿಕೆಗಳನ್ನು ಮುಂದೊಡ್ಡುತ್ತಿದೆಯೆಂದು ವಿರೋಧ ಪಕ್ಷಗಳ ಪ್ರತಿನಿಧಿಗಳು ಇಂದು ಇಲ್ಲಿ ಆಪಾದಿಸಿದರು.

• **ಪ್ರಮುಖ ಬಂದರಾಗಿ 'ಹೊಸ ಮಂಗಳೂರು'**

ನವದೆಹಲಿ, ಮೇ 5– ಮಂಗಳೂರು ಬಂದರು ಯೋಜನೆ ಪ್ರದೇಶ ಇನ್ನು ಮುಂದೆ 'ಹೊಸ ಮಂಗಳೂರು' ಎಂಬ ಅಭಿನಾಮ ಪಡೆದು ಭಾರತದ ಒಂಬತ್ತನೆಯ ಪ್ರಮುಖ ಬಂದರಾಗಿ ಪರಿಗಣಿಸಲ್ಪಡಲಿದೆ.

ಹೊಸ ಮಂಗಳೂರಿನಲ್ಲಿ ಮೂರು ಹಡಗು ನಿಲ್ದಾಣಗಳಿರುತ್ತವೆ. ಮಾಮೂಲಿ ಸರಕು ಸಾಗಾಣಿಕೆ ಹಡಗುಗಳಿಗಾಗಿ ಒಂದು; ಕಬ್ಬಿಣ, ಮ್ಯಾಂಗನೀಸ್‌ಗಳ ಅದಿರು, ಕಲ್ಲಿದ್ದಲು ಮತ್ತು ಕಟ್ಟ ಇವುಗಳ ರಫ್ತು ಹಡಗುಗಳಿಗಾಗಿ ಇನ್ನೊಂದು; ಕಚ್ಚಾ ಸಾಮಗ್ರಿ ಹಾಗೂ ಗೊಬ್ಬರಗಳ ಆಮದು ಹಡಗುಗಳಿಗಾಗಿ ಮತ್ತೊಂದು.

ಇಸ್ರೇಲ್– ಇರಾನ್: ಮಧ್ಯಪ್ರಾಚ್ಯದ ನಿಗಿ ಕೆಂಡ, ಪ್ರಾದೇಶಿಕ ರಾಜಕಾರಣದಲ್ಲಿ ಹಗೆತನದ ಬೇರು

ಇರಾನ್ ಅಣ್ವಸ್ತ್ರ ಇರಾದೆ, ಇಸ್ರೇಲ್ ತಗಾದೆ



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಇತ್ತ, ಚೀನಾ ಮತ್ತು ಫಿಲಿಪ್ಪೀನ್ಸ್ ರಾಷ್ಟ್ರಗಳು ಒಂದರ ಮೇಲೆ ಮತ್ತೊಂದು ಮುನಿಸಿಕೊಂಡು ದಕ್ಷಿಣ ಚೀನಾ ಸಮುದ್ರ ತೀರದಲ್ಲಿ ಬೇಗೆಯನ್ನು ಹೆಚ್ಚಿಸಿದ್ದರೆ, ಅತ್ತ, ಇಸ್ರೇಲ್ ಮತ್ತು ಇರಾನ್ ಮೇಲ್ನೋಟಕ್ಕೆ ಸಹಜ ಸ್ಥಿತಿಗೆ ಮರಳಿದಂತೆ ಕಂಡರೂ ಒಳಗೆ ಹಗೆಯನ್ನು ಪೋಷಿಸುತ್ತಿವೆ.

ದಕ್ಷಿಣ ಚೀನಾ ಸಮುದ್ರವು ಖನಿಜ, ತೈಲ, ಅನಿಲದಂತಹ ನೈಸರ್ಗಿಕ ಸಂಪನ್ಮೂಲಗಳ ಆಗರವಷ್ಟೇ ಅಲ್ಲ, ವ್ಯೂಹಾತ್ಮಕ ದೃಷ್ಟಿಯಿಂದ ಅದೊಂದು ಆಯಕಟ್ಟಿನ ಪ್ರದೇಶ. ಹಾಗಾಗಿ, ದಕ್ಷಿಣ ಚೀನಾ ಸಮುದ್ರದ ಮೇಲೆ ಸಂಪೂರ್ಣ ಹಿಡಿತ ಸಾಧಿಸಬೇಕು ಎಂಬುದು ಚೀನಾದ ಮಹತ್ವಾಕಾಂಕ್ಷೆ. ಆದ್ದರಿಂದಲೇ ಫಿಲಿಪ್ಪೀನ್ಸ್, ವಿಯೆಟ್ನಾಂ ಮತ್ತು ಮಲೇಷ್ಯಾವನ್ನು ಅಂಕೆಯಲ್ಲಿ ಇಟ್ಟುಕೊಳ್ಳಲು ಚೀನಾ ತಂತ್ರ ರೂಪಿಸುತ್ತದೆ. ದಕ್ಷಿಣ ಚೀನಾ ಸಮುದ್ರ ಸಂಪೂರ್ಣವಾಗಿ ಚೀನಾದ ಹಿಡಿತಕ್ಕೆ ಸಿಗಬಾರದು ಎಂದು ಅಮೆರಿಕ ಬಯಸುತ್ತದೆ. ಹಾಗಾಗಿ, ಫಿಲಿಪ್ಪೀನ್ಸ್‌ನಂತಹ ಪುಟ್ಟ ರಾಷ್ಟ್ರವನ್ನು ತನ್ನ ಪ್ರಭಾವ ವಲಯದಲ್ಲಿ ಉಳಿಸಿಕೊಳ್ಳಲು ಅಮೆರಿಕ ಪ್ರಯತ್ನಿಸುತ್ತದೆ.

ಫಿಲಿಪ್ಪೀನ್ಸ್‌ಗೆ ಸೇರಿದ ಗಸ್ತು ಹಡಗುಗಳ ಮೇಲೆ ಚೀನಾದ ಕಡಲು ಕಾವಲು ಪಡೆ ಹೋದ ವಾರ ಜಲ ಫಿರಂಗಿಯನ್ನು ಬಳಸಿತು. ಹಾಗಂತ ಇದು ಮೊದಲ ಪ್ರಕರಣ ಆಗಿರಲಿಲ್ಲ. ಫಿಲಿಪ್ಪೀನ್ಸ್‌ಗೆ ಸೇರಿದ ಮೀನುಗಾರಿಕಾ ಹಡಗುಗಳ ಮೇಲೆ ಈ ಹಿಂದೆ ಚೀನಾ ದಾಳಿ ಮಾಡಿತ್ತು. ಇದೀಗ ಚೀನಾದ ವಿರುದ್ಧ ಫಿಲಿಪ್ಪೀನ್ಸ್ ತಿರುಗಿಬಿದ್ದಿದೆ. ಈ ಬಗೆಯ ಕಿರುಕುಳ ಮತ್ತು ಆಕ್ರಮಣಶೀಲತೆಯನ್ನು ಸಹಿಸಲು ಸಾಧ್ಯವಿಲ್ಲ ಎಂದಿದೆ. ಭಾರತವೂ ಸೇರಿದಂತೆ ಜಗತ್ತಿನ ಹಲವು ದೇಶಗಳು ಫಿಲಿಪ್ಪೀನ್ಸ್ ನಿಲುವನ್ನು ಬೆಂಬಲಿಸಿವೆ ಮತ್ತು ಚೀನಾದ ಧೋರಣೆಯನ್ನು ಖಂಡಿಸಿವೆ.

ದಕ್ಷಿಣ ಚೀನಾ ಸಮುದ್ರದ ಮೇಲಿನ ಹಕ್ಕಿಗಾಗಿ ಮುಂದೊಂದು ದಿನ ಕದನ ಅನಿವಾರ್ಯವಾಗಬಹುದು ಎನ್ನುವುದು ಖರೆಯಾದರೂ, ಪ್ರಸ್ತುತ ಚೀನಾ ಮತ್ತು ಫಿಲಿಪ್ಪೀನ್ಸ್ ನಡುವಿನ ಬಿಕ್ಕಟ್ಟು ದೊಡ್ಡ ಮಟ್ಟದ ಸಂಘರ್ಷಕ್ಕೆ ಕಾರಣವಾಗುವ ಸಾಧ್ಯತೆ ಕಡಿಮೆ. ಆದರೆ ಇಸ್ರೇಲ್ ಮತ್ತು ಇರಾನ್ ವಿಷಯ ಹಾಗಲ್ಲ. ಅದು ಯಾವ ಕ್ಷಣದಲ್ಲಾದರೂ ಹೊಸ ರೂಪವನ್ನು ತಾಳಬಹುದು, ಎರಡು ದೇಶಗಳ ನಡುವಿನ ನೇರ ಯುದ್ಧಕ್ಕೆ ನಾಂದಿಯಾಗಬಹುದು. ಇತರ ರಾಷ್ಟ್ರಗಳ ಪಾಲ್ಗೊಳ್ಳುವಿಕೆಯಿಂದ ಪ್ರಾಂತೀಯ ಕದನವಾಗಿ ಹಿಗ್ಗಬಹುದು. ಹಾಗಾಗಿ, ಇರಾನ್ ಮತ್ತು ಇಸ್ರೇಲ್ ಬಿಕ್ಕಟ್ಟಿನ ಕುರಿತು ಕೊಂಚ ವಿವರವಾಗಿಯೇ ನೋಡಬೇಕು.

ಇರಾನ್ ಮತ್ತು ಇಸ್ರೇಲ್ ನಡುವಿನ ಪ್ರಸ್ತುತ ಸಂಘರ್ಷ ಆರಂಭವಾಗಿದ್ದು ಆರು ತಿಂಗಳ ಹಿಂದೆ. 2023ರ ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ಹಮಾಸ್ ಏಕಾಏಕಿ ದಾಳಿ ಆರಂಭಿಸಿತು. ನಂತರ ಇಸ್ರೇಲ್, ಗಾಜಾ ಪಟ್ಟಿಯ ಒಳಗೆ ನುಗ್ಗಿ ಕಾರ್ಯಾಚರಣೆ ನಡೆಸಿತು. ಹಮಾಸ್ ಮತ್ತು ಹಿಜ್ಬುಲ್ಲಾ ಉಗ್ರರಿಗೆ ಇರಾನ್ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದೆ ಎಂದು ಇಸ್ರೇಲ್ ಆರೋಪಿಸಿತು. ಸಿರಿಯಾದ ಉಗ್ರ ನೆಲೆಗಳ ಮೇಲೆ ಇಸ್ರೇಲ್ ದಾಳಿ ಮಾಡಿತು. ಅಲ್ಲಿಗೆ ಒಂದು ಹಂತ ಮುಗಿದಿತ್ತು.

ಈ ವರ್ಷದ ಏಪ್ರಿಲ್ 1ರಂದು ನಡೆದ ಅಂತಹದೇ ದಾಳಿ ಸಿರಿಯಾದಲ್ಲಿನ ಇರಾನ್ ದೂತಾವಾಸ ಕಚೇರಿಯಿದ್ದ ಕಟ್ಟಡವನ್ನು ಗುರಿಯಾಗಿಸಿಕೊಂಡಿತು. ಈ ದಾಳಿಯಲ್ಲಿ ಇರಾನಿನ ಹಲವು ಅಧಿಕಾರಿಗಳು ಸಾವನ್ನಪ್ಪಿದರು. ಇರಾನ್ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಹೇಳಿತು. ಏಪ್ರಿಲ್ 13ರಂದು, ಇಸ್ರೇಲ್ ಒಡೆತನದ್ದು ಎನ್ನಲಾದ, ಪೋರ್ಚುಗೀಸ್ ಧ್ವಜವಿದ್ದ ಹಡಗೊಂದನ್ನು ಇರಾನ್ ನೌಕಾಪಡೆ ವಶಕ್ಕೆ ಪಡೆದುಕೊಂಡಿತು. ಅದರಲ್ಲಿ 17 ಭಾರತೀಯ ನೌಕರರು ಇದ್ದರು! ಏಪ್ರಿಲ್ 13 ಮತ್ತು 14ರಂದು ಇಸ್ರೇಲ್ ಮೇಲೆ ಹಿಜ್ಬುಲ್ಲಾ ಮತ್ತು ಇರಾನ್ ಡ್ರೋನ್ ಮತ್ತು ಕ್ಷಿಪಣಿಗಳ ದಾಳಿ ನಡೆಸಿದವು. ಏಪ್ರಿಲ್ 19ರಂದು ಇಸ್ರೇಲ್ ಪ್ರತಿದಾಳಿ ನಡೆಸಿತು. ನಂತರ ಇರಾನ್ ಮತ್ತು ಇಸ್ರೇಲ್ ಪರಸ್ಪರ ಪ್ರಚೋದನೆಗೆ ಇಳಿಯಲಿಲ್ಲ.

ಹಾಗಾದರೆ ಇರಾನ್ ಮತ್ತು ಇಸ್ರೇಲ್ ಬಿಕ್ಕಟ್ಟು ಸದ್ಯಕ್ಕೆ ಶಮನವಾಯಿತೆ? ಇರಾನ್ ಮತ್ತು ಇಸ್ರೇಲ್ ನಡುವಿನ ಹಗೆತನದ ಬೇರುಗಳು ಇರುವುದು ಮಧ್ಯಪ್ರಾಚ್ಯದ ಪ್ರಾದೇಶಿಕ ರಾಜಕಾರಣದಲ್ಲಿ. ಇರಾನ್‌ಗೆ ಅಣ್ವಸ್ತ್ರ ಹೊಂದುವ ಮಹದಾಸೆಯಿದೆ. ಒಂದೊಮ್ಮೆ ಇರಾನ್ ಅಣ್ವಸ್ತ್ರ ಹೊಂದಿದರೆ ಅದು ತನ್ನ ಅಸ್ತಿತ್ವಕ್ಕೆ ಮಾರಕ ಎಂದು ಇಸ್ರೇಲ್ ಸಹಜವಾಗಿಯೇ ಭಾವಿಸಿದೆ. ಆ ಕಾರಣದಿಂದಲೇ ಜಾಗತಿಕವಾಗಿ ರಾಜಕೀಯ ಒತ್ತಡ ತಂದು, ಇರಾನ್ ಅನ್ನು ಆರ್ಥಿಕ ದಿಗ್ಬಂಧನಕ್ಕೆ ಒಳಪಡಿಸುವಲ್ಲಿ ಇಸ್ರೇಲ್ ಯಶ ಕಂಡಿದೆ.

ಆದರೆ ಇರಾನ್ ಮಾತ್ರ ಅಣ್ವಸ್ತ್ರ ಹೊಂದುವ ಪ್ರಯತ್ನವನ್ನು ಕೈಬಿಟ್ಟಿಲ್ಲ. ಏನೇ ಬೆಲೆ ತೆತ್ತಾದರೂ ತಾನು ಅಣ್ವಸ್ತ್ರ ರಾಷ್ಟ್ರವಾಗಬೇಕು ಎಂಬ ಗುರಿಯನ್ನು ಇರಾನ್ ಹೊಂದಿದೆ. ಅಂತೆಯೇ ಯಾವುದೇ ಮಾರ್ಗ ಬಳಸಿಯಾದರೂ ಸರಿ, ಇರಾನ್ ಅಣ್ವಸ್ತ್ರ ಹೊಂದಲು ಬಿಡುವುದಿಲ್ಲ ಎಂದು ಇಸ್ರೇಲ್ ಟೊಂಕಕಟ್ಟಿದೆ. ಇರಾನ್‌ನ ಕೆಲವು ಪರಮಾಣು ವಿಜ್ಞಾನಿಗಳನ್ನು ಹತ್ಯೆ ಮಾಡಿರುವ ಆರೋಪ ಇಸ್ರೇಲ್ ಮೇಲಿದೆ. ಹಾಗಾಗಿ, ಇಸ್ರೇಲ್ ಮತ್ತು ಇರಾನ್ ನಡುವೆ ದಾಳಿ- ಪ್ರತಿದಾಳಿ ಹೊಸದಲ್ಲ ಮತ್ತು ಇಷ್ಟಕ್ಕೇ ನಿಲ್ಲುವುದಿಲ್ಲ.

ಹಾಗಾದರೆ ಇಸ್ರೇಲ್ ಮೇಲಿನ ಹಗೆಯ ಕಾರಣಕ್ಕೆ ಇರಾನ್ ಅಣ್ವಸ್ತ್ರ ಹೊಂದುವ ಪ್ರಯತ್ನದಲ್ಲಿದೆಯೇ ಎಂದರೆ ಅದು ಅರ್ಧಸತ್ಯ. ಇರಾನ್ ಮತ್ತು ಸೌದಿ ಅರೇಬಿಯಾ ನಡುವಿನ ದೀರ್ಘಕಾಲದ ವೈರತ್ವವನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು.

1998ರಲ್ಲಿ ಪಾಕಿಸ್ತಾನ ಪರಮಾಣು ಪರೀಕ್ಷೆಗಳನ್ನು ನಡೆಸಿ, ಇಸ್ಲಾಮಿಕ್ ರಾಷ್ಟ್ರಗಳ ಪೈಕಿ ಅಣ್ವಸ್ತ್ರ ಹೊಂದಿದ ಏಕೈಕ ರಾಷ್ಟ್ರ ಎನಿಸಿಕೊಂಡಿತು. ಚೀನಾದ ತಾಂತ್ರಿಕ ಸಹಾಯ ಮತ್ತು ಅಮೆರಿಕದ ಜಾಣ ಕುರುಡು ಪಾಕಿಸ್ತಾನಕ್ಕೆ ಸಹಾಯವಾಗಿ ಒದಗಿದವು. ಪಾಕಿಸ್ತಾನದ ಪರಮಾಣು ಬಾಂಬ್ ಅನ್ನು 'ಇಸ್ಲಾಮಿಕ್ ಬಾಂಬ್' ಎಂದು ಕರೆಯಲಾಯಿತು. ಅರ್ಥಾತ್ ಒಂದೊಮ್ಮೆ ಇಸ್ಲಾಮಿಕ್ ರಾಷ್ಟ್ರಗಳ ಮೇಲೆ ದಾಳಿಯಾದರೆ, ಪಾಕಿಸ್ತಾನದ ಪರಮಾಣು ಬಾಂಬ್ ನೆರವಿಗೆ ಬರಲಿದೆ ಎಂದು ಮುಸ್ಲಿಂ ಜಗತ್ತು ಭಾವಿಸಿತ್ತು. ಆದರೆ ಪಾಕಿಸ್ತಾನದ ಅಣ್ವಸ್ತ್ರವನ್ನು 'ಸೌದಿ ಬಾಂಬ್' ಎಂದು ಇರಾನ್ ಬೇರೆಯದೇ ದೃಷ್ಟಿಕೋನದಿಂದ ನೋಡಿತು. ತನ್ನದೇ ಆದ ಅಣ್ವಸ್ತ್ರ ಹೊಂದುವ ಪ್ರಯತ್ನಕ್ಕೆ ವೇಗ ನೀಡಿತು.

ಒಬಾಮ ಅವರು ಅಮೆರಿಕದ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಇರಾನ್ ಅಣ್ವಸ್ತ್ರ ಹೊಂದುವುದನ್ನು ತಡೆಯಲು ಅದರ ಜೊತೆಗೆ ಪರಮಾಣು ಒಪ್ಪಂದ ಮಾಡಿಕೊಳ್ಳಲಾಯಿತು. ಆದರೆ ನಂತರ ಅಮೆರಿಕದ ಅಧ್ಯಕ್ಷರಾದ ಡೊನಾಲ್ಡ್ ಟ್ರಂಪ್, ಆ ಒಪ್ಪಂದದಿಂದ ಹಿಂದೆ ಸರಿದರು. ಇರಾನನ್ನು ಏಕಾಂಗಿಯಾಗಿಸುವ ಪ್ರಯತ್ನಕ್ಕೆ ಚಾಲನೆ ಕೊಟ್ಟರು. ಯುಎಇ ಮತ್ತು ಬಹರೇನ್ ದೇಶಗಳು ಇಸ್ರೇಲ್ ಜೊತೆ ಕೈ ಕುಲುಕಿದವು. ಕಳವಳಗೊಂಡ ಇರಾನ್ ಅಣ್ವಸ್ತ್ರ ಯೋಜನೆಗೆ ಮತ್ತಷ್ಟು ಪುಷ್ಟಿ ನೀಡಿತು. ಆದರೆ ವೇಗದ ದಾಪುಗಾಲಿಡಲು ಆರ್ಥಿಕತೆ ತೊಡಕಾಯಿತು.

ಈಗಲೂ ಇರಾನ್ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲ. ಹಾಗಾಗಿ ಅದು ದೊಡ್ಡ ಮಟ್ಟದ ಯುದ್ಧವನ್ನು ಎದುರು ನೋಡುತ್ತಿಲ್ಲ. ಹಾಗಂತ ಅಣ್ವಸ್ತ್ರವನ್ನು ಹೊಂದುವ ಇರಾದೆಯನ್ನೂ ಬಿಟ್ಟುಕೊಟ್ಟಿಲ್ಲ. ಕೆಲವು ವಿಶ್ಲೇಷಣೆಗಳ ಪ್ರಕಾರ, ಅಣ್ವಸ್ತ್ರ ಹೊಂದಲು ಬೇಕಾದ ಬಹುಮಟ್ಟಿನ ತಯಾರಿಯನ್ನು ಇರಾನ್ ಈಗಾಗಲೇ ಮಾಡಿಕೊಂಡಿದೆ. ಹಾಗಾಗಿ, ಮಧ್ಯಪ್ರಾಚ್ಯದ ನಿಗಿ ಕೆಂಡ ಯಾವಾಗ ಜ್ವಾಲಾಗ್ನಿಯಾಗುತ್ತದೆಯೋ ಕಾದು ನೋಡಬೇಕು.

ಅದೇನೇ ಇರಲಿ, ಹಗಲಿನ ಸುಡುಬಿಸಿಲ ತಾಪ ಕಳೆಯಲು ಸಂಜೆ ಮಳೆ ಬಿದ್ದಂತೆ ಇರಾನಿನಿಂದ ಸಂತಸದ ಸುದ್ದಿಯೊಂದು ಬಂದಿದೆ. ತಾನು ವಶಪಡಿಸಿಕೊಂಡಿದ್ದ ಹಡಗಿನಲ್ಲಿದ್ದ ಅಷ್ಟೂ ಸಿಬ್ಬಂದಿಯನ್ನು ಬಿಡುಗಡೆಗೊಳಿಸಿರುವುದಾಗಿ ಅದು ಹೇಳಿದೆ. ಈ ಹಡಗಿನಲ್ಲಿದ್ದ 25 ನೌಕರರ ಪೈಕಿ ಭಾರತ ಮೂಲದ 17 ಮಂದಿ ಇದ್ದರು. ಅವರೆಲ್ಲರೂ ತಮ್ಮ ಸ್ವಸ್ಥಾನಗಳಿಗೆ ಮರಳಬಹುದು. ಇರಾನ್ ಈ ನಿಲುವು ತಳೆಯಲು ಭಾರತದ ನಾಗರಿಕರು ಆ ಹಡಗಿನಲ್ಲಿದ್ದರು ಎಂಬುದು ಮುಖ್ಯ ಕಾರಣವಾಗಿರಲಿಕ್ಕೆ ಸಾಕು.



ಚುರುಮುರಿ



ನೈತಿಕತೆ ಸೂಚ್ಯಂಕ

• ಸುಮಂಗಲಾ

ಬೆಕ್ಕಣ್ಣ ಬೆಳಗ್ಗೆ ಐದಕ್ಕೇ ನನ್ನ ಎಬ್ಬಿಸಿ, 'ಏಳು, ಲಗೂನೆ ಎದ್ದು ವಾಕಿಂಗ್ ಹೋಗು' ಎಂದು ಮುಖಕ್ಕೆ ತಿವಿಯಿತು.

'ಭಾನುವಾರ ಒಂದಿನಾದ್ರೂ ಛಲೋತ್ನಾಗೆ ಮಲಗಾಕೆ ಬಿಡಲೇ' ಎಂದರೂ ಕೇಳಲಿಲ್ಲ. ಕಣ್ಣುಜ್ಜಿಕೊಂಡು ಎದ್ದವಳ ಮುಂದೆ ಪೇಪರು ಹಿಡಿದು, 'ನೋಡು... ಬೊಜ್ಜು ಕರಗಿಸಿಕೊಳ್ಳದ ಪೊಲೀಸರಿಗೆ ಎತ್ತಂಗಡಿ ಮಾಡ್ಯಾರಂತೆ. ನಿಮ್ಮ ಆಫೀಸಿನೊಳಗೂ ಹಂಗೆ ಮಾಡಿದರ ಏನು ಗತಿ? ಅದಕ್ಕೇ ಫಿಟ್ ಅಂಡ್ ಫೈನ್ ಆಗಿರಬಕು' ಎಂದಿತು.

'ಪೊಲೀಸಿನವರು ಕಳ್ಳರನ್ನು ಓಡಾಡಿ ಹಿಡಿಬೇಕಾಗತೈತಿ. ಹಿಂಗಾಗಿ ಅವರು ಫಿಟ್ ಆಗಿರಬೇಕಂತ ಬೊಜ್ಜು ಕರಗಿಸಿಕೊಳ್ಳಬೇಕು. ನಾವು ಆಫೀಸಿನಾಗೆ ಕುಂತು ಕೆಲಸ ಮಾಡೋರು, ಕಳ್ಳರನ್ನು ಹಿಡಿಯಾಕೆ ಓಡಂಗಿಲ್ಲ' ಎಂದರೂ ಬೆಕ್ಕಣ್ಣ ಬಿಡಲಿಲ್ಲ.

'ಎಲ್ಲ ಪ್ರಜೆಗಳೂ ಫಿಟ್ ಆಗಿರಬಕು. ಅದಕ್ಕೇ ನಮ್ಮ ಮೋದಿಮಾಮಾರು ವಿಶ್ವ ಯೋಗ ದಿನ ಜಾರಿಗೆ ತಂದಾರೆ' ಎಂದು ವಿತಂಡವಾದ ಹೂಡಿತು.

'ಹಂಗಾರೆ ಮೊದ್ಲು ಎಲ್ಲಾ ರಾಜಕಾರಣಿಗಳು ಫಿಟ್ ಆಗಿರಬಕು. ಮುಕ್ಕಾಲು ಭಾಗ ರಾಜಕಾರಣಿಗಳಿಗೆ ಬೊಜ್ಜು ಐತಿ' ನಾ ಮರು ವಾದಿಸಿದೆ.

'ರಾಜಕಾರಣಿಗಳು ಸಮಸ್ತ ಜನತೆಯ ಸಂಕಟಗಳನ್ನು ತಮ್ಮ ಹೊಟ್ಯಾಗೆ ಹಾಕ್ಕೋತಾರೆ, ಅದಕ್ಕೇ ಅವರಿಗೆ ಸ್ವಲ್ಪ ಬೊಜ್ಜು ಬಂದಿರತೈತಿ' ಎಂದು ಬೆಕ್ಕಣ್ಣ ಮುಸಿಮುಸಿ ನಕ್ಕಿತು.

'ಚುನಾವಣೆಯೊಳಗೆ ಅಭ್ಯರ್ಥಿಗಳು ಆಸ್ತಿ ಘೋಷಣೆ ಮಾಡಿದಂಗೆ, ಅವರ ಬಾಡಿ ಮಾಸ್ ಇಂಡೆಕ್ಸ್ ಎಷ್ಟೈತಿ ಅಂತನೂ ಘೋಷಣೆ ಮಾಡಬಕು' ಎಂದೆ.

'ಅಷ್ಟೇ ಅಲ್ಲ... ಹಾಸನ ಪ್ರಕರಣದ ಅವತಾರಗಳನ್ನು ನೋಡಿದರೆ ನೈತಿಕತೆ ಇಂಡೆಕ್ಸ್ ಅಂತ ಹೊಸ ಸೂಚ್ಯಂಕ ಸಿದ್ಧಪಡಿಸಿ, ಅದನ್ನೂ ಘೋಷಣೆ ಮಾಡಬಕು' ಬೆಕ್ಕಣ್ಣನ ವಾದ.

'ದೈಹಿಕ ನೈತಿಕತೆ ಸೂಚ್ಯಂಕ ಮತ್ತು ಮಾತಿನ ನೈತಿಕತೆ ಸೂಚ್ಯಂಕ ಅಂತ ಎರಡು ವಿಭಾಗ ಮಾಡಬಕು'.

'ಎಲ್ಲ ಪಕ್ಷದವರೂ ಬಾಯಿಗೆ ಬಂದದ್ದನ್ನು ನಿರ್ಲಜ್ಜವಾಗಿ ಒದರೋದನ್ನು ನೋಡಿದರೆ ಮಾತಿನ ನೈತಿಕತೆ ಸೂಚ್ಯಂಕ ವಿಭಾಗದಾಗೆ ಯಾವ ರಾಜಕಾರಣಿಯೂ ಸೊನ್ನೆಗಿಂತ ಹೆಚ್ಚು ಸ್ಕೋರ್ ಮಾಡಂಗಿಲ್ಲ!' ಎಂದು ಬೆಕ್ಕಣ್ಣ ಗಹಗಹಿಸಿತು.

ಸಂಗತ

ಮಡುಗಟ್ಟಿದ ನೋವು: ನಿರ್ಲಜ್ಜ ವ್ಯವಸ್ಥೆ

ಅಸಹಾಯಕತೆ ಈ ಮಟ್ಟಿಗೆ ಆವರಿಸಿಕೊಳ್ಳಲು ಕಾರಣವಾದದ್ದು ಏನು? ಅಂತಹ ಸ್ಥಿತಿಯಿಂದ ಮಹಿಳೆಯರಿಗೆ ಮುಕ್ತಿ ದೊರಕಿಸುವ ಬಗೆ ಹೇಗೆ?

• ನಾ.ದಿವಾಕರ

ಹಾಸನದಲ್ಲಿ ನಡೆದಿದೆ ಎನ್ನಲಾದ ಲೈಂಗಿಕ ದೌರ್ಜನ್ಯ ಪ್ರಕರಣಗಳು ದಿನದಿಂದ ದಿನಕ್ಕೆ ರೋಚಕ ತಿರುವು ಪಡೆದುಕೊಳ್ಳುತ್ತಿವೆ ಹಾಗೂ ನಾಗರಿಕ ಸಮಾಜ ಬೆಚ್ಚಿಬೀಳುವಂತೆ ಮಾಡಿವೆ. ಅಧಿಕಾರ ವಲಯದಲ್ಲಿರುವ ಜನಪ್ರತಿನಿಧಿಗಳು ಹಾಗೂ ಆಡಳಿತ ವಲಯದ ಅಧಿಕಾರಿಶಾಹಿಯು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಮರೆತು, ಸ್ವೇಚ್ಛಾಚಾರದಲ್ಲಿ ತೊಡಗಿದರೆ ಏನಾಗಬಹುದು ಎಂಬ ಪ್ರಶ್ನೆಗೆ ಈ ಪ್ರಕರಣಗಳು ನಿದರ್ಶನಗಳಾಗಿ ನಿಲ್ಲುತ್ತವೆ.

ಸಮಾಜದ ದುರ್ಬಲ ವರ್ಗಗಳ ಮೇಲೆ, ಅಸಹಾಯಕರು ಮತ್ತು ಅಮಾಯಕ ಶ್ರೀಸಾಮಾನ್ಯರ ವಿರುದ್ಧ ಒಂದು ಬಲಿಷ್ಠ ಸಾಮಾಜಿಕ ವ್ಯವಸ್ಥೆಯು ಯಜಮಾನಿಕೆಯನ್ನು ಸ್ಥಾಪಿಸಿದ್ದಕ್ಕೆ ಹಾಸನದ ಬೆಳವಣಿಗೆಗಳು ನಿದರ್ಶನಗಳಾಗಿವೆ. ಇಂತಹ ವಿಕೃತಗಳು ಈಗಿನ ಜನತಂತ್ರ ವ್ಯವಸ್ಥೆಯಲ್ಲೂ ಸಾಧ್ಯವಾಗಿರುವುದು ಯಾರನ್ನಾದರೂ ಚಕಿತಗೊಳಿಸುತ್ತವೆ. ಈ ಯಜಮಾನಿಕೆ ವ್ಯವಸ್ಥೆಯನ್ನು ಪ್ರೋತ್ಸಾಹಿಸುವ ಮೇಲ್ಪದರದ ಸಮಾಜ ಹಾಗೂ ಇದನ್ನು ತನ್ನ ಹಿತಾಸಕ್ತಿಗೆ ಬಳಸಿಕೊಳ್ಳುವ ರಾಜಕೀಯ ಶಕ್ತಿ ಇವೆರಡೂ ಅಪರಾಧಿ ಸ್ಥಾನದಲ್ಲಿ ನಿಲ್ಲುತ್ತವೆ.

ಅಸಹಾಯಕ ಮಹಿಳೆಯರ ಮೇಲೆ ನಡೆದಿವೆ ಎನ್ನಲಾದ ಲೈಂಗಿಕ ದೌರ್ಜನ್ಯಗಳು ಯಾರಿಂದ ನಡೆದಿವೆ ಮತ್ತು ಇವು ಯಾರಿಂದ, ಯಾವ ಸಂದರ್ಭದಲ್ಲಿ, ಹೇಗೆ, ಏತಕ್ಕಾಗಿ ಬಯಲಾದವು ಎನ್ನುವುದಕ್ಕಿಂತಲೂ ಹೆಚ್ಚಾಗಿ ನಮ್ಮನ್ನು ಕಾಡಬೇಕಿರುವುದು, ಈ ದೌರ್ಜನ್ಯಗಳನ್ನು ಸಹಿಸಿಕೊಳ್ಳುವಂತಹ ಒಂದು ಕಲಿತ ಸಮಾಜ ನಮ್ಮ ನಡುವೆ ಇದೆ ಎಂಬುದು. ಈ ಪ್ರಕರಣದಲ್ಲಿ ಕೆಲವು ಅಧಿಕಾರಿಗಳೂ ಸಿಲುಕಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ. ಇದು ನಿಜವೇ ಆಗಿದ್ದರೆ, ಅಧಿಕಾರಿಗಳಾದವರೂ ಇಷ್ಟೊಂದು ಅಸಹಾಯಕರಾಗಿದ್ದು ಏಕೆ ಎಂಬ ಪ್ರಶ್ನೆ ಎದುರಾಗುವುದು ಸಹಜ.

ಏಕೆಂದರೆ, ಕೆಲಸದ ಸ್ಥಳಗಳಲ್ಲಾಗಲೀ ಅಧಿಕಾರ ಕೇಂದ್ರಗಳಲ್ಲಾಗಲೀ ಸಾಮಾನ್ಯ ಮಹಿಳೆ ತನ್ನ ಸ್ಥಾನಮಾನದ ಹೊರತಾಗಿಯೂ ಸ್ಥಾಪಿತ ವ್ಯವಸ್ಥೆಗೆ ಅಧೀನಳಾಗಿಯೇ ಇರುವ ಸ್ಥಿತಿ ಈಗಲೂ ನಮ್ಮಲ್ಲಿ ಇದೆ. ಈ ವ್ಯವಸ್ಥೆಯನ್ನು ಅಥವಾ ಇದರ ವಾರಸುದಾರರನ್ನು ಧಿಕ್ಕರಿಸುವ, ವಿರೋಧಿಸುವ ಅಥವಾ ಆಜ್ಞೆಯನ್ನು ಉಲ್ಲಂಘಿಸುವ ಯಾವುದೇ ನಡೆಗೆ ಮಹಿಳೆ ಅಪಾರ ಬೆಲೆ ತೆರಬೇಕಾಗುತ್ತದೆ. ಇದು ಗ್ರಾಮ ಪಂಚಾಯಿತಿಯಿಂದ ಬ್ಯಾಂಕಿಂಗ್ ಕ್ಷೇತ್ರದವರೆಗೂ, ಸಾಫ್ಟ್‌ವೇರ್ ಉದ್ದಿಮೆಯಲ್ಲೂ ಕಾಣಬಹುದಾದ ವಾಸ್ತವ. ಹಾಸನದ ಪ್ರಕರಣದಲ್ಲಿ ನಮಗೆ ಕಾಣಿಸಬೇಕಾದದ್ದು ವ್ಯಕ್ತಿಗತ ಸಂತ್ರಸ್ತೆಯರಲ್ಲ ಅಥವಾ ವೈಯಕ್ತಿಕ ಅಪರಾಧವೂ ಅಲ್ಲ. ಇಲ್ಲಿ ಢಾಳಾಗಿ ಕಾಣುತ್ತಿರುವುದು ನಮ್ಮ ಸಮಾಜದೊಳಗಿನ ಭೌತಿಕ ಮಾಲಿನ್ಯ, ಬೌದ್ಧಿಕ ತ್ಯಾಜ್ಯ ಹಾಗೂ ಊಳಿಗಮಾನ್ಯ ಸಾಮಾಜಿಕ ಮನಃಸ್ಥಿತಿ.

ಹಲ್ಲೆ ಅಥವಾ ದಾಳಿಗೊಳಗಾದ ಮಹಿಳೆ ತನ್ನ ಮೇಲೆ ನಡೆದ ದೌರ್ಜನ್ಯವನ್ನು ತಾನೇ ವ್ಯಾಖ್ಯಾನಿಸಿಕೊಂಡು ನ್ಯಾಯ ವ್ಯವಸ್ಥೆಯ ಮುಂದೆ ಅಂಗಲಾಚಲಾಗುತ್ತದೆಯೇ? ತಾನು ಒಳಗಾದ ಪುರುಷಾಹಮಿಕೆಯ ವಿಕೃತಿಗೆ ಕಾರಣಗಳನ್ನು ತನ್ನೊಳಗೇ ಕಂಡುಕೊಳ್ಳುವಂತೆ ನೊಂದ ಮಹಿಳೆಯನ್ನು ಕೇಳಲಾಗುವುದೇ? ತಮ್ಮನ್ನು ಆವರಿಸುವ ಅಸಹಾಯಕತೆಯಿಂದ ಬಾಯ್ಬಿಡಲಾಗದೆ, ಮೌನವಾಗಿ ಪುರುಷವಿಕೃತಿಯನ್ನು ಸಹಿಸಿಕೊಳ್ಳುವ ಮಹಿಳೆಯರ ನೋವು ಎಂತಹುದಾಗಿರಬಹುದು? ಸಾಂಸ್ಥಿಕವಾಗಿ ಅಥವಾ ಸಾಂಘಿಕವಾಗಿ ಭಾರತೀಯ ಸಮಾಜದಲ್ಲಿ ಹೀಗೆ ತನ್ನ ಅಂತರಂಗದ ನೋವು, ಅಳಲನ್ನು ತೋಡಿಕೊಳ್ಳಲು ಸಾಮಾನ್ಯ ಮಹಿಳೆಗೆ ನಾವು ಅವಕಾಶಗಳನ್ನು ಕಲ್ಪಿಸಿದ್ದೇವೆಯೇ?

ಈ ಪ್ರಶ್ನೆಗಳಿಗೆ ಬಹುತೇಕ ಪುರುಷಾಧಿಪತ್ಯಕ್ಕೆ ಒಳಪಟ್ಟಿರುವ ಸಾಮಾಜಿಕ, ಸಾಂಸ್ಕೃತಿಕ ವಲಯಗಳು ಉತ್ತರಿಸಬೇಕಾಗುತ್ತದೆ. ಇದು ಬರೀ ರಾಜಕೀಯ ಪ್ರಶ್ನೆಯಲ್ಲ ಅಥವಾ ಯಾವುದೋ ಒಂದು ಚಿಂತನಾವಾಹಿನಿಯ ಸಾಂಘಿಕ ಪ್ರಶ್ನೆಯೂ ಅಲ್ಲ. ಸಾಮಾಜಿಕ ಬಲಾಢ್ಯ ಸ್ಥಿತಿ ಮತ್ತು ಆರ್ಥಿಕ ಮೇಲಂತಸ್ತಿನ ಆಳ್ವಿಕೆಗೆ ಒಳಗಾಗಿರುವ ಪ್ರತಿ ಸಂಸ್ಥೆಯಲ್ಲೂ ಸಂಘಟನೆಯಲ್ಲೂ ಈ ಪ್ರಶ್ನೆಗೆ ಉತ್ತರವನ್ನು ಶೋಧಿಸಬೇಕಿದೆ. ಒಂದು ಆರೋಗ್ಯಕರ ಸಮಾಜದ ಜವಾಬ್ದಾರಿ ಇರುವುದು ಇಲ್ಲಿ.



ಕ್ಷುದ್ರ ರಾಜಕೀಯ ನಿರೂಪಣೆಗೊಳಗಾಗಿ ತನ್ನ ಸೂಕ್ಷ್ಮತೆಯನ್ನು ಕಳೆದುಕೊಂಡಿರುವ ಸಮಾಜವೊಂದು ನಮ್ಮ ನಡುವೆ ಇದೆ. ಈ ಸಮಾಜದ ನಿಷ್ಕ್ರಿಯತೆ ಹಾಗೂ ಸಾಮಾನ್ಯರ ನೋವಿಗೆ ಸ್ಪಂದಿಸಲು ಹಿಂಜರಿಯುವ ಅದರ ನಿರ್ಲಿಪ್ತತೆಯನ್ನು ಗಟ್ಟಿಯಾಗಿ ಪ್ರಶ್ನಿಸಬೇಕಿದೆ. ಸಾಮಾಜಿಕ-ವಿದ್ಯುನ್ಮಾನ ಮಾಧ್ಯಮಗಳ ಜವಾಬ್ದಾರಿ ಇದಲ್ಲವೇ?

ಆದರೆ ಆಧುನಿಕತೆಯ ಫಲಾನುಭವಿ ಸಮಾಜದ ಮೆದುಳು ಹೆಪ್ಪುಗಟ್ಟಿರುವುದರಿಂದ ಇದು ಗಮನಕ್ಕೆ ಬರುವುದಿಲ್ಲ. ಮನುಜಸೂಕ್ಷ್ಮತೆಯೇ ಇಲ್ಲದ ರಾಜಕೀಯ ವ್ಯವಸ್ಥೆ, ಲಿಂಗಸೂಕ್ಷ್ಮತೆಯಿಲ್ಲದ ಸಮಾಜ ಮತ್ತು ಜೀವಪರ ಸಂವೇದನೆಯೇ ಇಲ್ಲದ ಸಾಂಸ್ಕೃತಿಕ ಜಗತ್ತಿನ ನಡುವೆ ಹಾಸನದ ಲೈಂಗಿಕ ದೌರ್ಜನ್ಯಗಳು ನಮ್ಮನ್ನು ಕಾಡುತ್ತಿವೆ. ಬೇರೆ ಬೇರೆ ವಲಯಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಎದುರಾಗುವ ವಿಕೃತಿಗಳ ವಿರುದ್ಧ ನಾವು ದನಿ ಎತ್ತಬೇಕಾಗಿದೆ, ಸಂಘಟಿತರಾಗಿ ಹೋರಾಡಬೇಕಿದೆ. ಆಗ ಮಾತ್ರ, ದೌರ್ಜನ್ಯಗಳಿಗೆ ಒಳಗಾದ ಮಹಿಳೆಯರ ಮಡುಗಟ್ಟಿದ ನೋವು ನಮಗೆ ಕಾಣಲು ಸಾಧ್ಯ.

ವಾಚಕರ ವಾಣಿ

ಒಂದೇ ಬಗೆಯದಾಗಿರಲಿ ಒಳ–ಹೊರಗು

'ಸಾರ್ವಜನಿಕವಾಗಿಯಾಗಲೀ ವೈಯಕ್ತಿಕವಾಗಿಯಾಗಲೀ ಒಂದೇ ರೀತಿಯ ವ್ಯಕ್ತಿತ್ವವನ್ನು ಕಾಪಾಡಿಕೊಂಡು ಒಂದೇ ತೆರನಾದ ವ್ಯಕ್ತಿಯಾಗಿರಿ' ಎಂದು ಗೌತಮ ಬುದ್ಧ ಎಂದೋ ಹೇಳಿರುವ ಮಾತು (ಪ್ರ.ವಾ., ಸುಭಾಷಿತ, ಮೇ 2) ಇಂದಿಗೂ ಎಷ್ಟು ಅರ್ಥಪೂರ್ಣವಾಗಿದೆ ಅನಿಸುತ್ತದೆ. ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಇದು ಪ್ರತಿ ವ್ಯಕ್ತಿಯೂ ತಪ್ಪದೇ ಪರಿಪಾಲಿಸಬೇಕಾದ ಸಂದೇಶವೇ ಸರಿ. ವಿಶೇಷವಾಗಿ, ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳು ಹೊರಗೂ ಒಳಗೂ ಒಂದೇ ತೆರನಾದ ವ್ಯಕ್ತಿತ್ವವನ್ನು ರೂಢಿಸಿಕೊಳ್ಳದೆ ಇರುವುದರಿಂದಲೇ ಸಮಾಜ ಅವರ ಬಗ್ಗೆ ಅಪನಂಬಿಕೆ ಹೊಂದಿದೆ; ಗೌರವ, ಮಾನ್ಯತೆಯನ್ನು ಕೊಡಲು ಹಿಂದೇಟು ಹಾಕುತ್ತಿದೆ.

ರಾಜಕೀಯ ಮೇಲಾಟ, ಹಿಂಸೆ, ದೌರ್ಜನ್ಯ, ಭ್ರಷ್ಟಾಚಾರವನ್ನೇ ತಮ್ಮ ವ್ಯಕ್ತಿತ್ವವೆಂದು ಪರಿಭಾವಿಸುವವರು ಬೇಗ ತೆರೆಮರೆಗೆ ಸರಿಯುತ್ತಾರೆ ಎಂಬುದು ಸರ್ವವೇದ್ಯ. ಇದು ಪ್ರತಿ ಕುಟುಂಬಕ್ಕೂ ಅನ್ವಯಿಸುತ್ತದೆ. ಒಂದೇ ರೀತಿಯ ವ್ಯಕ್ತಿತ್ವವನ್ನು ರೂಢಿಸಿಕೊಂಡ ಎಷ್ಟೋ ಮಹನೀಯರನ್ನು ಇಂದಿಗೂ ನಾವು ಸ್ಮರಿಸುತ್ತಿದ್ದೇವೆ, ಮುಂದೆಯೂ ಈ ಸಮಾಜ ಸ್ಮರಿಸುತ್ತದೆ. ಈ ಅರಿವು ಎಲ್ಲರಲ್ಲೂ ಮೂಡಿದರೆ ಬುದ್ಧನ ಬೋಧನೆ ಸಾರ್ಥಕವಾದಂತೆ.

ಪ್ರಭು ಇಸುವನಹಳ್ಳಿ, ಬೆಂಗಳೂರು

ಸ್ಥೂಲಕಾಯ: ಸಿಗಲಿ ಪರಿಹಾರ

ರಾಜ್ಯದ ಪೊಲೀಸ್ ಅಕಾಡೆಮಿ, ತರಬೇತಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕೆಲವು ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಬೊಜ್ಜು ಕರಗಿಸದ ಕಾರಣಕ್ಕೆ ಎತ್ತಂಗಡಿ ಮಾಡಿರುವುದಾಗಿ ವರದಿಯಾಗಿದೆ (ಪ್ರ.ವಾ., ಮೇ 4). ಈಚಿನ ದಿನಗಳಲ್ಲಿ ಜನರ ನಡುವೆ ಹೆಚ್ಚಾಗಿ ಕೇಳಿಬರುತ್ತಿರುವ ಪದ ಬಿಎಂಐ (ಬಾಡಿ ಮಾಸ್ ಇಂಡೆಕ್ಸ್). ಬಿಎಂಐ ಎಂಬುದು ಒಬ್ಬ ವ್ಯಕ್ತಿಯ ತೂಕ ಮತ್ತು ಎತ್ತರವನ್ನು ಹೋಲಿಕೆ ಮಾಡುವ ಒಂದು ಸಂಖ್ಯಾಶಾಸ್ತ್ರೀಯ ಅಳತೆ. ಬದಲಾದ ಈ ಕಾಲಘಟ್ಟದಲ್ಲಿ ಬಿಎಂಐ ಎಲ್ಲರಿಗೂ ಇರಬೇಕಾದಂತಹ ಸಾಮಾನ್ಯ ಆರೋಗ್ಯ ಸ್ಥಿತಿ. ಅದರಲ್ಲೂ ಪೊಲೀಸ್ ಎಂಬ ಶಿಸ್ತಿನ, ಗತ್ತಿನ ವ್ಯಕ್ತಿತ್ವಕ್ಕೆ ಅತಿ ಅವಶ್ಯ. ಆದರೆ ಪೊಲೀಸರಲ್ಲಿ ಸ್ಥೂಲಕಾಯದ ಸಮಸ್ಯೆ ಹೊಸದೇನಲ್ಲ. ವೃತ್ತಿ ಬದುಕಿನಲ್ಲಿ ಅವರು ಎದುರಿಸುವ ಒತ್ತಡ, ದೈಹಿಕ ಚಟುವಟಿಕೆರಹಿತ ಜೀವನ, ಸತ್ವಹೀನ ಆಹಾರ ಪದ್ಧತಿ, ಅಸಮರ್ಪಕ ನಿದ್ರೆ ಎಲ್ಲವೂ ಸೇರಿ ಬೊಜ್ಜಿಗೆ ಕಾರಣವಾಗುತ್ತವೆ. ಜೀವನಶೈಲಿಯಲ್ಲಿ ಹಠಾತ್ ಬದಲಾವಣೆಗಳು ಅನೇಕರಲ್ಲಿ ಅನಾರೋಗ್ಯಕ್ಕೆ ಕಾರಣವಾಗಬಹುದು.

ಕ್ಲಿಷ್ಟಕರವಾದ ರಚನೆಯಿಂದ ಕೂಡಿರುವ ಮಾನವ ದೇಹವನ್ನು ಆರೋಗ್ಯಕರ ರೀತಿಯಿಂದ ನಿರ್ವಹಿಸಬೇಕು. ಇದಕ್ಕೆ ಸಮಯ ನೀಡಬೇಕು ಹಾಗೂ ಮುಂದೆ ಬರುವಂತಹ ಪೊಲೀಸ್ ಸಿಬ್ಬಂದಿಯು ಉತ್ತಮ ಅಭ್ಯಾಸಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನೋಡಿಕೊಳ್ಳಬೇಕು. ನಮ್ಮ ರಾಜ್ಯದ ಪೊಲೀಸ್ ದೇಶ-ವಿದೇಶದಲ್ಲಿ ಹೆಸರುವಾಸಿ. ಇಂತಹ ಇಲಾಖೆಯಲ್ಲಿ ಸ್ಥೂಲಕಾಯ ಎಂಬ ಪೆಡಂಭೂತ ಬಹಳ ವರ್ಷಗಳಿಂದ ಬೆಳೆದುಬಂದಿದೆ. ಇಲಾಖೆ ಇನ್ನಾದರೂ ಕೆಲವು ಮಾರ್ಪಾಡುಗಳನ್ನು ಸಮಯೋಚಿತವಾಗಿ, ಆರೋಗ್ಯಕರ ರೀತಿಯಲ್ಲಿ ಮಾಡುವುದು ಒಳ್ಳೆಯದು.

ಮೇಘಶ್ಯಾಮ ಕೆ. ಕಮ್ಮಾರ, ಕುಷ್ಟಗಿ

ಬಾರದಿರುವ ಮಳೆಯನ್ನು ಶಪಿಸುವ ಮುನ್ನ...

ಫೇಸ್‌ಬುಕ್, ಇನ್‌ಸ್ಟಾಗ್ರಾಂ ಹಾಗೂ ವಾಟ್ಸ್‌ಆ್ಯಪ್‌ನಂತಹ ಸಾಮಾಜಿಕ ಜಾಲತಾಣಗಳ ಖಾತೆಗಳಲ್ಲಿ ಈಗ 'ನಮ್ಮ ಕಡೆ ಈಗ ಮಳೆ ಬೀಳುತ್ತಿದೆ' ಎಂಬ ವಾಕ್ಯ ಹಾಕಿದರಂತೂ, ಅದರ ಮರುಕ್ಷಣವೇ 'ಎಲ್ಲಿ?' 'ಯಾವಾಗಿನಿಂದ ಮಳೆ ಸುರಿಯುತ್ತಿದೆ?' 'ಮಳೆ ಬೀಳುತ್ತಿರುವ ವಿಡಿಯೊ ಹಾಕಿ ನೋಡೋಣ!' ಎಂಬಂತಹ ಪ್ರತಿಕ್ರಿಯೆಗಳ ಸುರಿಮಳೆಯೇ ಸುರಿಯುತ್ತದೆ. ನಮಗೆ ಮಳೆಯ ಅವಶ್ಯಕತೆ ಎಷ್ಟಿದೆ ಎಂಬುದು ಇದರಿಂದ ತಿಳಿಯುತ್ತದೆ.

ಪ್ರಕೃತಿಯ ಅಳಿವಿಗೆ ನಾವು ಕಾರಣರಾದರೆ, ನಮ್ಮ ಅಳಿವಿಗೆ ಪ್ರಕೃತಿಯೇ ಕಾರಣವಾಗುವುದು ವಿಪರ್ಯಾಸ. ಹೆಚ್ಚು ಮಳೆ ನೀರು ಸಂಗ್ರಹ ಇದ್ದಾಗ ಅದರ ಮಿತ ಬಳಕೆ ಹಾಗೂ ಸದುದ್ದೇಶದ ಬಗ್ಗೆ ಯೋಚಿಸದೆ ವಿನಾಕಾರಣ ಪೋಲು ಮಾಡುತ್ತೇವೆ. ಅದೇ ಮಳೆ ಬಾರದಿದ್ದಾಗ ಅವರಿವರನ್ನು ಶಪಿಸುವುದು, ಮಳೆಗಾಗಿ ದೇವರ ಮೊರೆ ಹೋಗುವುದು ಅರ್ಥಹೀನ. ನಮ್ಮ ನೆಮ್ಮದಿಯ ಜೀವನದಲ್ಲಿ ಪ್ರಕೃತಿಯ ಪಾತ್ರ ಹಿರಿದಾದುದು. ಹೀಗಾಗಿ, ಪ್ರಕೃತಿಯನ್ನು ಉಳಿಸಿ ಬೆಳೆಸಿದರಷ್ಟೇ ನಮ್ಮ ಬದುಕು ಬಂಗಾರ ಎಂಬ ಸತ್ಯವನ್ನು ನಾವೆಲ್ಲರೂ ಅರಿಯಬೇಕಿದೆ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಭಾಷೆಯ ಬಗ್ಗೆ ನಿರ್ಲಕ್ಷ್ಯ ಸಲ್ಲ

ಚುನಾವಣಾ ಆಯೋಗದಿಂದ ಚುನಾವಣಾ ಜಾಗೃತಿ ಕುರಿತು ಮೊಬೈಲ್‌ಗೆ ಕನ್ನಡದಲ್ಲಿ ಒಂದು ಕಿರು ಸಂದೇಶ ಬಂದಿದೆ. ಅದರಲ್ಲಿ 'ಮತವನ್ನು' ಬದಲಿಗೆ 'ಮನಿವನ್ನು' ಎಂದೂ 'ಭೇಟಿ ನೀಡಿ' ಬದಲಿಗೆ 'ಭೀಟಿ ನೀಡಿ' ಎಂದೂ ಟೈಪಿಸಲಾಗಿದೆ. ಇವು ಯಾವ ಭಾಷೆಯ ಪದಗಳು? ಗಾಂಭೀರ್ಯದಿಂದ ಕೂಡಿರಬೇಕಾದ ಒಂದು ಸಂದೇಶವನ್ನು ಹೀಗೆ ನಗೆಪಾಟಲಿಗೆ ಈಡು ಮಾಡುವ ಕೆಲಸವಾಗಿದೆ. ಒಕ್ಕೂಟ ವ್ಯವಸ್ಥೆಯಡಿ ಒಂದು ಸಮರ್ಥ ಭಾಷೆಯೂ ಹೇಗೆ ನಿರ್ಲಕ್ಷ್ಯಕ್ಕೆ ಒಳಗಾಗುತ್ತದೆ ಎಂಬುದಕ್ಕೆ ಇಂತಹ ಉದಾಹರಣೆಗಳು ಬಹಳಷ್ಟು ಸಿಗುತ್ತವೆ.


ಒಂದು ಸಣ್ಣ ಸಂದೇಶವನ್ನು ಕೋಟಿಗಟ್ಟಲೆ ಜನರಿಗೆ ಕಳುಹಿಸುವ ಮೊದಲು ಸರಿಯಾಗಿ ಪರಿಶೀಲನೆ ಮಾಡದೆ ಒಂದು ಭಾಷೆಗೆ ಈ ರೀತಿ ಅವಮಾನ ಮಾಡುವುದು ಎಷ್ಟು ಸರಿ? ಭಾಷಾಧಾರಿತ ರಾಜ್ಯಗಳ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯವೊಂದರ ಆಡಳಿತ ಭಾಷೆಗೆ ಸೂಕ್ತ ಮನ್ನಣೆ ಇಲ್ಲದಿದ್ದರೆ ಹೇಗೆ? ಇಂತಹ ಸಂದೇಶಗಳಿಗೆ ಭಾಷಾಂತರಕಾರರ ಕೊರತೆಯೇ ಅಥವಾ ಏನು ಮಾಡಿದರೂ ಸರಿ ಎನ್ನುವ ಧೋರಣೆಯೇ? ಇಂತಹ ಪರಿಪಾಟವನ್ನು ಎಲ್ಲ ಕನ್ನಡಿಗರೂ ವಿರೋಧಿಸಬೇಕು. ಚುನಾವಣಾ ಆಯೋಗ ಈ ಸಂದೇಶವನ್ನು ತಿದ್ದುಪಡಿ ಮಾಡಿ ಮತ್ತೊಮ್ಮೆ ಸಾರ್ವಜನಿಕರಿಗೆ ರವಾನಿಸುವ ಮೂಲಕ ಪ್ರಮಾದವನ್ನು ಸರಿಪಡಿಸಬೇಕು.

ಸೋಮಲಿಂಗಪ್ಪ ಬೆಣ್ಣಿಗುಳದಳ್ಳಿ, ಕೊಪ್ಪಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

2019ರ ಲೋಕಸಭಾ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದಲ್ಲಿ ನೆಲೆ ಗಟ್ಟಿಗೊಳಿಸಿಕೊಂಡಿದ್ದ ಬಿಜೆಪಿ, ಈ ಬಾರಿಯೂ ಅದನ್ನೇ ಪುನರಾವರ್ತಿಸುವ ಉತ್ಸಾಹದಲ್ಲಿ ಇದೆ. ಟಿಎಂಸಿ ತನ್ನ ಸ್ಥಾನಗಳನ್ನು ಉಳಿಸಿಕೊಳ್ಳಲು ಹೋರಾಡುತ್ತಿದೆ. ರಾಜ್ಯದಲ್ಲಿ ಇನ್ನೇನು ನೆಲೆ ಕಳೆದುಕೊಂಡೇಬಿಟ್ಟವು ಎಂಬಂತಿದ್ದ ಕಾಂಗ್ರೆಸ್ ಮತ್ತು ಎಡಪಕ್ಷಗಳಿಗೆ ತಾವಿನ್ನೂ ಪ್ರಸ್ತುತ ಎಂಬುದನ್ನು ಸಾಬೀತುಮಾಡುವ ಅವಕಾಶ ಸಿಕ್ಕಿದೆ. ಚುನಾವಣೆ ಎದುರಿಸಲು ಬಿಜೆಪಿ, ಟಿಎಂಸಿ ಮತ್ತು ಕಾಂಗ್ರೆಸ್+ಎಡಪಕ್ಷಗಳು ಪರಸ್ಪರ ಭಿನ್ನವಾದ ಸಂಕಥನಗಳನ್ನು ಆತುಕೊಂಡಿವೆ. ಅವುಗಳ ಆಧಾರದಲ್ಲೇ ರಾಜ್ಯದಲ್ಲಿ ಚುನಾವಣಾ ತಂತ್ರ ರೂಪುಗೊಳ್ಳುತ್ತಿದೆ

ಪಶ್ಚಿಮ ಬಂಗಾಳ ಸಂಕಥನಗಳ ಸಂಘರ್ಷ



ಮತದಾನ ಪ್ರಭಾವಿಸುವ ಪ್ರಮುಖ ಅಂಶಗಳು

- 2021ರಿಂದ ಕೇಂದ್ರ ಸರ್ಕಾರವು ಪಶ್ಚಿಮ ಬಂಗಾಳಕ್ಕೆ ಹಲವು ಯೋಜನೆಗಳ ಅನುದಾನವನ್ನು ಸ್ಥಗಿತಗೊಳಿಸಿರುವುದು
- 26 ಸಾವಿರಕ್ಕೂ ಹೆಚ್ಚು ಶಿಕ್ಷಕರ ನೇಮಕಾತಿ ರದ್ದತಿಗೆ ನ್ಯಾಯಾಲಯ ಆದೇಶಿಸಿದ ಪ್ರಕರಣ. ಟಿಎಂಸಿ ಮತ್ತು ಬಿಜೆಪಿ ಎರಡೂ ಪಕ್ಷಗಳು ಇಲ್ಲಿ ಪರಸ್ಪರರನ್ನು ದೂಷಿಸುತ್ತಿವೆ
- ಸಂದೇಶ್‌ಖಾಲಿ ಲೈಂಗಿಕ ದೌರ್ಜನ್ಯ ಪ್ರಕರಣಗಳು
- ರಾಜ್ಯಪಾಲರು ಮತ್ತು ರಾಜ್ಯ ಸರ್ಕಾರದ ನಡುವಣ ಜಟಾಪಟಿ

ಪ್ರಜಾವಾಣಿ ವಾರ್ತೆ

ಈ ಬಾರಿಯ ಲೋಕಸಭಾ ಚುನಾವಣೆಯು ರಾಜಕೀಯ ಪಕ್ಷಗಳ ವ್ಯತಿರಿಕ್ತ ನಿಲುವುಗಳಿಗೆ ಸಾಕ್ಷಿಯಾಗಿದೆ. ದೇಶದಾದ್ಯಂತ 'ಇಂಡಿಯಾ' ಮೈತ್ರಿಕೂಟದ ಜತೆಗಿದ್ದೇನೆ ಎಂದು ಘೋಷಿಸಿಕೊಂಡಿರುವ ಟಿಎಂಸಿಯು, ಪಶ್ಚಿಮ ಬಂಗಾಳದಲ್ಲಿ ಮಾತ್ರ ಸ್ವತಂತ್ರವಾಗಿ ಎಲ್ಲಾ 42 ಕ್ಷೇತ್ರಗಳಲ್ಲೂ ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದೆ. ಇನ್ನೊಂದೆಡೆ ದೇಶದಾದ್ಯಂತ 'ಇಂಡಿಯಾ' ಮೈತ್ರಿಕೂಟದ ಭಾಗ ಎಂದು ಘೋಷಿಸಿಕೊಂಡಿರುವ ಎಡಪಕ್ಷಗಳು ಕೇರಳದಲ್ಲಿ ಸ್ವತಂತ್ರವಾಗಿ ಕಣಕ್ಕೆ ಇಳಿದಿದ್ದರೆ, ಪಶ್ಚಿಮ ಬಂಗಾಳದಲ್ಲಿ 'ಇಂಡಿಯಾ'ದ ಮಿತ್ರಪಕ್ಷ ಕಾಂಗ್ರೆಸ್‌ನೊಟ್ಟಿಗೆ ಕಣಕ್ಕೆ ಇಳಿದಿವೆ. ಇಲ್ಲಿ ಬಿಜೆಪಿ ಚುನಾವಣೆಯನ್ನು ಎದುರಿಸಲು ತನ್ನದೇ ಒಂದು ಸಂಕಥನವನ್ನು ಸೃಷ್ಟಿಸಿಕೊಂಡು, ಜನರಲ್ಲಿ ಮತ ಕೇಳುತ್ತಿದೆ. ಅದೇ ರೀತಿ ಟಿಎಂಸಿ ಸಹ ಇನ್ನೊಂದು ಸಂಕಥನವನ್ನು ರೂಪಿಸಿಕೊಂಡು ಚುನಾವಣೆ ಎದುರಿಸುತ್ತಿದೆ. ಇನ್ನೊಂದೆಡೆ ಕಾಂಗ್ರೆಸ್ ಮತ್ತು ಎಡಪಕ್ಷಗಳು ಈ ಎರಡೂ ಸಂಕಥನಗಳನ್ನು ಬಳಸಿಕೊಂಡು ಮತದಾರರನ್ನು ಪ್ರಭಾವಿಸಲು ಯತ್ನಿಸುತ್ತಿವೆ.

ಭ್ರಷ್ಟಾಚಾರವನ್ನೇ ಟಿಎಂಸಿ ಉಸಿರಾಡುತ್ತಿದೆ. ರಾಜ್ಯದಲ್ಲಿ ಮಹಿಳೆಯರಿಗೆ ರಕ್ಷಣೆ ಇಲ್ಲ. ಸಂದೇಶ್‌ಖಾಲಿಯಲ್ಲಿ ಹತ್ತಾರು ವರ್ಷಗಳಿಂದ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರ ನಡೆಯುತ್ತಿದ್ದರೂ, ಟಿಎಂಸಿ ಸರ್ಕಾರವು ಆರೋಪಿಗಳನ್ನು ರಕ್ಷಿಸಿಕೊಂಡು ಬಂದಿತ್ತು. ಈ ರೀತಿ ಟಿಎಂಸಿ ತನ್ನ ಹಿತಕ್ಕಾಗಿ ರಾಜ್ಯದ ಜನರ ಹಿತವನ್ನು ಬಲಿಕೊಡುತ್ತಿದೆ ಎಂದು ಬಿಜೆಪಿ ಹೇಳುತ್ತಿದೆ. ಪ್ರಧಾನಿ ನರೇಂದ್ರ ಮೋದಿಯಾದಿಯಾಗಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ರಾಜ್ಯದ ನಾಯಕರೆಲ್ಲರೂ ಪಕ್ಷದ ಪ್ರಚಾರ ಸಭೆಗಳಲ್ಲಿ ಈ ಮಾತುಗಳನ್ನೇ ಆಡುತ್ತಿದ್ದಾರೆ.

ಜತೆಗೆ ರಾಜ್ಯದ ಜನರ ಕಲ್ಯಾಣ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರವು ಒದಗಿಸಿದ ಅನುದಾನವನ್ನು ಟಿಎಂಸಿ ಸರ್ಕಾರ ದುರುಪಯೋಗ ಮಾಡಿಕೊಂಡಿದೆ. ಈ ಮೂಲಕ ರಾಜ್ಯದ ಜನರಿಗೆ ಟಿಎಂಸಿ ಸರ್ಕಾರ ಅನ್ಯಾಯ ಎಸಗುತ್ತಿದೆ. ಕೇಂದ್ರದ ಅನುದಾನದ ದುರುಪಯೋಗವನ್ನು ತಡೆಯಲೆಂದೇ ಅನುದಾನವನ್ನು ತಡೆಹಿಡಿಯಲಾಗಿದೆ ಎಂದೂ ಬಿಜೆಪಿ ನಾಯಕರು ಹೇಳುತ್ತಿದ್ದಾರೆ. ಪಕ್ಷವು ರಾಜ್ಯದಲ್ಲಿ ನೀಡುತ್ತಿರುವ ಜಾಹೀರಾತುಗಳಲ್ಲೂ ಈ ವಿಚಾರಗಳನ್ನೇ ಹೇಳುತ್ತಿದೆ. ಟಿಎಂಸಿಯದ್ದು ಒಂದು ಭ್ರಷ್ಟ ಸರ್ಕಾರ ಮತ್ತು ಟಿಎಂಸಿಗೆ ಮತ್ತೆ ಮತಹಾಕಿದರೆ ರಾಜ್ಯದ ಜನರಿಗೆ ಅನ್ಯಾಯವಾಗುತ್ತದೆ ಎಂಬ ಸಂಕಥನವನ್ನು ಬಿಜೆಪಿ ಇಲ್ಲಿ ಸೃಷ್ಟಿಸಿದೆ. ಮತ್ತೆ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಮಾತ್ರ ಭ್ರಷ್ಟಾಚಾರವನ್ನು ನಿಲ್ಲಿಸಲು ಸಾಧ್ಯವಾಗುತ್ತದೆ ಎಂದು ಬಿಜೆಪಿ ಅಭ್ಯರ್ಥಿಗಳು ಮತ ಕೇಳುತ್ತಿದ್ದಾರೆ. ಈವರೆಗೆ ಬಿಜೆಪಿ ನೆಲೆ ಗಟ್ಟಿ ಇರದ ಕ್ಷೇತ್ರಗಳಲ್ಲಿ ಈ ಸಂಕಥನವು ಮತದಾನವನ್ನು ಪ್ರಭಾವಿಸುತ್ತದೆ. ಟಿಎಂಸಿಯ ಮತಗಳನ್ನು ಸೆಳೆಯಲು ನೆರವಾಗುತ್ತದೆ ಎನ್ನಲಾಗುತ್ತಿದೆ.


ಪ್ರಜಾ ಮತ ಜನತಂತ್ರದ ಹಬ್ಬ

ಲೋಕಸಭಾ ಚುನಾವಣೆ - 2024

ಇದೇ ವಿಷಯಗಳನ್ನೇ ಬಳಸಿಕೊಂಡು ಟಿಎಂಸಿ ಸಹ ತನ್ನದೊಂದು ಸಂಕಥನವನ್ನು ಸೃಷ್ಟಿಸಿಕೊಂಡಿದೆ. 2021ರ ವಿಧಾನಸಭಾ ಚುನಾವಣೆಯಲ್ಲಿ ಟಿಎಂಸಿ ಭರಪೂರ ಜಯಗಳಿಸಿತ್ತು. ತಾನು ಹೀನಾಯವಾಗಿ ಸೋತಿದ್ದರಿಂದ ಬಿಜೆಪಿ ಅದರ ಸೇಡನ್ನು ರಾಜ್ಯದ ಜನರ ಮೇಲೆ ತೀರಿಸಿಕೊಳ್ಳುತ್ತಿದೆ ಎಂದು ಟಿಎಂಸಿ ಆರೋಪಿಸುತ್ತಿದೆ. ಇದೇ ಕಾರಣಕ್ಕಾಗಿಯೇ ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ಅನುದಾನವನ್ನು ಕೇಂದ್ರ ಸರ್ಕಾರ ನೀಡುತ್ತಿಲ್ಲ. ಈ ಮೂಲಕ ರಾಜ್ಯವನ್ನು ಬಿಜೆಪಿ ಸಂಕಷ್ಟಕ್ಕೆ ದೂಡುತ್ತಿದೆ. ಈ ಬಾರಿಯೂ ಲೋಕಸಭೆಗೆ ರಾಜ್ಯದಿಂದ ಬಿಜೆಪಿಯ ಹೆಚ್ಚಿನ ಸಂಸದರು ಆಯ್ಕೆಯಾದರೆ, ರಾಜ್ಯದ ಮೇಲೆ ಮತ್ತಷ್ಟು ದೌರ್ಜನ್ಯ ಎಸಗುತ್ತಾರೆ ಎಂದು ಟಿಎಂಸಿ ನಾಯಕರು ಆರೋಪಿಸುತ್ತಿದ್ದಾರೆ.

ಕಾಂಗ್ರೆಸ್ ಮತ್ತು ಎಡಪಕ್ಷಗಳು ಈ ಮೇಲಿನ ಸಂಕಥನಗಳನ್ನು ಬಳಸಿಕೊಂಡೇ ಮತ ಕೇಳುತ್ತಿವೆ. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿಯು, ವಿಧಾನಸಭಾ ಚುನಾವಣೆಯಲ್ಲಿನ ಸೋಲಿಗೆ ಮುಯ್ಯಿ ತೀರಿಸಿಕೊಳ್ಳುತ್ತಿದೆ. 2021ರ ನಂತರ ಪಶ್ಚಿಮ ಬಂಗಾಳಕ್ಕೆ ಹಲವು ಯೋಜನೆಗಳ ಅನುದಾನವನ್ನು ಕೇಂದ್ರದ ಬಿಜೆಪಿ ರದ್ದುಪಡಿಸಿದೆ. ನರೇಗಾ, ಬೇಟಿ ಬಚಾವೊ–ಬೇಟಿ ಪಢಾವೊ, ಜಲಜೀವನ ಅಭಿಯಾನ, ಪಡಿತರ ಯೋಜನೆಯ ಅನುದಾನ ಸೇರಿ ಒಟ್ಟು ₹1.50 ಲಕ್ಷ ಕೋಟಿಯಷ್ಟು ಅನುದಾನವನ್ನು ಕೇಂದ್ರ ಸರ್ಕಾರ ತಡೆಹಿಡಿದಿದೆ. ಹೀಗೆ ಕೇಂದ್ರ ಸರ್ಕಾರವು ಜನರಿಗೆ ಅನ್ಯಾಯ ಮಾಡುತ್ತಿದ್ದರೆ, ಈ ಬಗ್ಗೆ ಟಿಎಂಸಿಯ 22 ಸಂಸದರು ಲೋಕಸಭೆಯಲ್ಲಿ ಚಕಾರವೇ ಎತ್ತಿಲ್ಲ. ಎರಡೂ ಪಕ್ಷಗಳು ಚುನಾವಣೆಗೆ ಬಳಸಿಕೊಳ್ಳುವ ಉದ್ದೇಶದಿಂದ ಅನುದಾನದ ಸಮಸ್ಯೆಯನ್ನು ಜೀವಂತವಾಗಿ ಇರಿಸಿವೆ ಎಂದು ಕಾಂಗ್ರೆಸ್ ನಾಯಕರು ಆರೋಪಿಸುತ್ತಿದ್ದಾರೆ. ಈ ಸಮಸ್ಯೆಗಳನ್ನು ನಿವಾರಿಸಲು ಎರಡೂ ಪಕ್ಷಗಳನ್ನು ಅಧಿಕಾರದಿಂದ ದೂರವಿಡಿ ಎಂದು ಮತದಾರರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದಾರೆ.

ಈಗ ಸ್ಪರ್ಧೆ ತ್ರಿಕೋನ



ಲೋಕಸಭಾ ಚುನಾವಣೆಯು ಘೋಷಣೆಯಾದ ಹೊತ್ತಿಗೆ ಪಶ್ಚಿಮ ಬಂಗಾಳದಲ್ಲಿ ನೇರಾನೇರ ಸ್ಪರ್ಧೆ ಇದ್ದದ್ದು ಬಿಜೆಪಿ ಮತ್ತು ಟಿಎಂಸಿ ಮಧ್ಯೆ ಮಾತ್ರ. ಕಾಂಗ್ರೆಸ್ ಮತ್ತು ಎಡಪಕ್ಷಗಳನ್ನು ಬಿಜೆಪಿಯಾಗಲೀ, ಟಿಎಂಸಿಯಾಗಲೀ ಗಂಭೀರವಾಗಿ ಪರಿಗಣಿಸಿಯೇ ಇರಲಿಲ್ಲ. ಬಿಜೆಪಿ ತನ್ನ ಪ್ರಚಾರದಲ್ಲಿ ಟಿಎಂಸಿ ವಿರುದ್ಧ ವಾಗ್ದಾಳಿ ನಡೆಸಿದರೆ, ಟಿಎಂಸಿ ತನ್ನ ಪ್ರಚಾರ ಕಾರ್ಯಕ್ರಮಗಳಲ್ಲಿ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸುತ್ತಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. 'ಇಂಡಿಯಾ' ಮೈತ್ರಿಕೂಟದ ಅಡಿಯಲ್ಲಿ ಒಟ್ಟಿಗೇ ಬಂದಿರುವ ಕಾಂಗ್ರೆಸ್ ಮತ್ತು ಎಡಪಕ್ಷಗಳು ಹಲವೆಡೆ ಪ್ರಬಲ ಸ್ಪರ್ಧೆ ಒಡ್ಡುವ ಮಟ್ಟಕ್ಕೆ ಬಂದಿವೆ. ಹೀಗಾಗಿ ರಾಜ್ಯದ 30ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ತ್ರಿಕೋನ ಸ್ಪರ್ಧೆ ಇರಲಿದೆ ಎನ್ನಲಾಗುತ್ತಿದೆ.


ಕಾಂಗ್ರೆಸ್ 12 ಮತ್ತು ಎಡಪಕ್ಷಗಳು 30 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿವೆ. ಈ ಹಿಂದಿನ ಚುನಾವಣೆಗಳಲ್ಲಿ ಇವುಗಳ ಮತಪ್ರಮಾಣ ಕಡಿಮೆಯಾಗುತ್ತಲೇ ಬಂದಿತ್ತು. ಹೀಗಾಗಿ 2024ರ ಲೋಕಸಭಾ ಚುನಾವಣೆ ವೇಳೆಗೆ ಕಾಂಗ್ರೆಸ್ ಮತ್ತು ಎಡಪಕ್ಷಗಳು ಅಪ್ರಸ್ತುತ ಆಗಿಬಿಡುತ್ತವೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಬಿಜೆಪಿ ನೇತೃತ್ವದ ಕೇಂದ್ರದ ಎನ್‌ಡಿಎ ಸರ್ಕಾರದ ನೀತಿಗಳು ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿರುವ ಟಿಎಂಸಿ ಸರ್ಕಾರದ ನಡೆಗಳು ಕಾಂಗ್ರೆಸ್ ಮತ್ತು ಎಡಪಕ್ಷಗಳ ಪರವಾಗಿ ಕೆಲಸ ಮಾಡಿವೆ. ಹೀಗಾಗಿ ಈ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಎಡಪಕ್ಷಗಳನ್ನು ಗಂಭೀರವಾಗಿ ಪರಿಗಣಿಸುವ ಸ್ಥಿತಿ ಬಂದೊದಗಿದೆ. ಇದನ್ನು ಈ ಎರಡೂ ಪಕ್ಷಗಳು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿವೆ ಎಂದು ವಿಶ್ಲೇಷಿಸಲಾಗುತ್ತಿದೆ.

ಕೇಂದ್ರದ ಬಿಜೆಪಿ ವಿರುದ್ಧ ಮತ್ತು ರಾಜ್ಯದ ಟಿಎಂಸಿ ವಿರುದ್ಧ ಪಶ್ಚಿಮ ಬಂಗಾಳದ ಹಲವು ಕ್ಷೇತ್ರಗಳಲ್ಲಿ ಆಡಳಿತ ವಿರೋಧಿ ಅಲೆ ರೂಪುಗೊಳ್ಳುತ್ತಿದೆ. ಇದರಿಂದಾಗಿ ಹಲವು ಕೇತ್ರಗಳಲ್ಲಿ ಕಾಂಗ್ರೆಸ್ ಮತ್ತು ಎಡಪಕ್ಷಗಳಿಗೆ ಅನುಕೂಲವಾಗಲಿದೆ. ಅವು ಗೆದ್ದೇ ಬಿಡುತ್ತವೆ ಎನ್ನಲಾಗದು. ಆದರೆ ಅವುಗಳ ಮತಪ್ರಮಾಣ ಸುಧಾರಿಸಲಿದೆ. ಪರಿಣಾಮವಾಗಿ ಕೆಲವು ಕ್ಷೇತ್ರಗಳಲ್ಲಿ ಬಿಜೆಪಿಗೆ ಸೋಲಾಗಬಹುದು, ಇನ್ನು ಕೆಲವು ಕ್ಷೇತ್ರಗಳಲ್ಲಿ ಟಿಎಂಸಿಗೆ ಸೋಲಾಗಬಹುದು. ಹೀಗೆ ಈ ಮೈತ್ರಿಯು ಒಟ್ಟಾರೆ ಫಲಿತಾಂಶಕ್ಕೆ ದೊಡ್ಡ ತಿರುವು ನೀಡಲಿದೆ ಎಂದು ಅಂದಾಜಿಸಲಾಗಿದೆ.

ಎರಡನೇ ಹಂತದ ಮತದಾನದ ನಂತರ ಟಿಎಂಸಿಯು ಕಾಂಗ್ರೆಸ್ ಮತ್ತು ಎಡಪಕ್ಷಗಳನ್ನು ಟೀಕಿಸುತ್ತಿದೆ. ಈ ಪಕ್ಷಗಳ ಸ್ಪರ್ಧೆಯಿಂದ ಬಿಜೆಪಿಗೆ ಅನುಕೂಲ ಎಂದು ಟಿಎಂಸಿ ನಾಯಕರು ಟೀಕಿಸುತ್ತಿದ್ದಾರೆ. ಬಿಜೆಪಿ ನಾಯಕರು ಸಹ ಇಂಥದ್ದೇ ಮಾತುಗಳನ್ನಾಡುತ್ತಿದ್ದಾರೆ. ಒಟ್ಟಾರೆ ಇದು ತ್ರಿಕೋನ ಸ್ಪರ್ಧೆ ಪ್ರಬಲವಾಗುತ್ತಿರುವುದನ್ನು ಸೂಚಿಸುತ್ತಿದೆ ಎಂಬುದು ತಜ್ಞರ ಅಭಿಪ್ರಾಯ.

ಪ್ರತಿಷ್ಠೆಯ ಕಣ 'ಕೃಷ್ಣನಗರ'

ಕೃಷ್ಣನಗರ ಲೋಕಸಭಾ ಕ್ಷೇತ್ರವು ಬೇರೆಲ್ಲಾ ಕ್ಷೇತ್ರಗಳಿಗಿಂತ ತುಸು ವಿಭಿನ್ನ. ಇದು ಟಿಎಂಸಿ ಮತ್ತು ಬಿಜೆಪಿಗೆ ಪ್ರತಿಷ್ಠೆಯ ಕಣ. ಪ್ರಶ್ನೆಗಾಗಿ ಹಣ ಪ್ರಕರಣದಲ್ಲಿ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರನ್ನು ಸಂಸತ್ತಿನ ನೈತಿಕ ಸಮಿತಿಯ ಶಿಫಾರಸಿನಂತೆ ಸಂಸತ್ತಿನಿಂದ ಅಮಾನತು ಮಾಡಲಾಗಿತ್ತು. ಅದನ್ನು ಪ್ರತಿಷ್ಠೆಯಾಗಿ ಸ್ವೀಕರಿಸಿರುವ ಟಿಎಂಸಿ ಮಹುವಾ ಅವರನ್ನು ಮತ್ತೆ ಕಣಕ್ಕೆ ಇಳಿಸಿದೆ. ವಿದೇಶದಲ್ಲಿ ಉನ್ನತ ಉದ್ಯೋಗದಲ್ಲಿದ್ದ ಮಹುವಾ, ರಾಜಕಾರಣದಲ್ಲಿ ಆಸಕ್ತಿಯ ಕಾರಣಕ್ಕಾಗಿ ಭಾರತಕ್ಕೆ ಮರಳುತ್ತಾರೆ. ವಿದೇಶದಲ್ಲಿದ್ದ ಅವರ ಜೀವನಶೈಲಿಯ ಕಾರಣಕ್ಕಾಗಿ ಬಿಜೆಪಿಯು ಇವರನ್ನು 'ಎಲೀಟ್ ರಾಜಕಾರಣಿ' ಅಂತಲೂ ಕರೆಯುತ್ತದೆ. ಕೃಷ್ಣನಗರ ರಾಜಸಂಸ್ಥಾನದವರಾದ ಅಮೃತಾ ರಾಯ್ ಅವರನ್ನು ಮಹುವಾ ಎದುರು ಬಿಜೆಪಿ ಕಣಕ್ಕಿಳಿಸಿದೆ. 'ನಮ್ಮ ವಂಶಸ್ಥರು ಸನಾತನ ಧರ್ಮದ ರಕ್ಷಣೆಗೆ ನಿಂತವರು' ಎಂದು ಅವರು ಪ್ರಚಾರದುದ್ದಕ್ಕೂ ಹೇಳುತ್ತಿದ್ದಾರೆ. 1757ರ ಪ್ಲಾಸಿ ಕದನದಲ್ಲಿ ಅಮೃತಾ ರಾಯ್ ಮನೆತನದವರು ಬ್ರಿಟಿಷರ ಪರವಾಗಿ ನಿಂತಿದ್ದರು.



ನಾನು ಇಲ್ಲಿ ಗೆದ್ದೇ ಗೆಲ್ಲುತ್ತೇನೆ. ಎಷ್ಟು ಅಂತರದಲ್ಲಿ ಗೆಲ್ಲುತ್ತೇನೆ ಎನ್ನುವುದೇ ವಿಷಯ. ಇ.ಡಿ ಹಾಗೂ ಸಿಬಿಐ ಅನ್ನು ಬಳಸಿಕೊಂಡು ನನ್ನನ್ನು ಹಿಂಸಿಸಲಾಯಿತು, ನನ್ನನ್ನು ಅಮಾನತು ಮಾಡಲಾಯಿತು. ಇದಕ್ಕೆಲ್ಲಾ ನನ್ನ ಗೆಲುವೇ ತಕ್ಕ ಉತ್ತರ ನೀಡಲಿದೆ

ಮಹುವಾ ಮಾಯಿತ್ರಾ, ಟಿಎಂಸಿ ಅಭ್ಯರ್ಥಿ



ಮಹಾರಾಜ ಕೃಷ್ಣಚಂದ್ರ ರಾಯ್ ಅವರು ಬ್ರಿಟಿಷರ ಪರ ಇದ್ದರು. ಯಾಕಾಗಿ ಅವರು ಹಾಗೆ ಮಾಡಿದರು? ಯಾಕೆಂದರೆ, ಸಿರಾಜ್ ಉದ್ ದೌಲಾ ನಡೆಸುತ್ತಿದ್ದ ದೌರ್ಜನ್ಯ ಅಷ್ಟರ ಮಟ್ಟಿಗೆ ಇತ್ತು. ಮಹಾರಾಜರು ಆ ರೀತಿ ಮಾಡಿರಲಿಲ್ಲ ಎಂದಿದ್ದರೆ, ಬಂಗಾಳದಲ್ಲಿ ಇಂದು ಹಿಂದೂ ಧರ್ಮ ಮತ್ತು ಬಂಗಾಳಿ ಭಾಷೆ ಇರುತ್ತಿರಲಿಲ್ಲ

ಅಮೃತಾ ರಾಯ್, ಬಿಜೆಪಿ ಅಭ್ಯರ್ಥಿ

ಪ್ರಭಾವ ಬೀರುವುದೇ ಸಂದೇಶ್‌ಖಾಲಿ ಪ್ರಕರಣ...

ಸಂದೇಶ್‌ಖಾಲಿಯ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ, ಅತ್ಯಾಚಾರ ಪ್ರಕರಣವು ದೇಶದ ಮಟ್ಟದಲ್ಲಿ ದೊಡ್ಡ ಸುದ್ದಿಯನ್ನೇ ಮಾಡಿತ್ತು. ಅಲ್ಲಿನ ಮಹಿಳೆಯರು ಬಿಚ್ಚಿಟ್ಟ ದೌರ್ಜನ್ಯದ ಕಥನಗಳು ದೇಶದ ಜನರನ್ನು ಆಘಾತಗೊಳಿಸಿತ್ತು. ಅಲ್ಲಿನ ಟಿಎಂಸಿ ನಾಯಕ ಶೇಖ್ ಶಹಜಾನ್ ವಿರುದ್ಧ ಮಹಿಳೆಯರು ಗಂಭೀರ ಆರೋಪಗಳನ್ನು ಮಾಡಿದ್ದರು. ಈ ವಿದ್ಯಮಾನವು ರಾಜಕೀಯವಾಗಿಯೂ ಹಲವು ಮಜಲುಗಳನ್ನು ಪಡೆದುಕೊಂಡು, ಟಿಎಂಸಿ–ಬಿಜೆಪಿ ನಡುವೆ ವಾಕ್ಸಮರಕ್ಕೆ, ರಾಜಕೀಯ ದಾಳಗಳ ಪ್ರಯೋಗಕ್ಕೆ ಬಳಕೆಯಾಗುತ್ತಿದೆ.

ಸಂದೇಶ್‌ಖಾಲಿ ವಿಧಾನಸಭಾ ಕ್ಷೇತ್ರವನ್ನೂ ಒಳಗೊಂಡ ಬಶೀರ್‌ಹಾಟ್ ಲೋಕಸಭಾ ಕ್ಷೇತ್ರದಲ್ಲಿ ರೇಖಾ ಪಾತ್ರ ಅವರಿಗೆ ಬಿಜೆಪಿಯು ಟಿಕೆಟ್ ನೀಡಿದೆ. ರೇಖಾ ಅವರು ಸಂದೇಶ್‌ಖಾಲಿಯ ದೌರ್ಜನ್ಯದ ಸಂತ್ರಸ್ತೆ ಎಂದು ಬಿಜೆಪಿ ಹೇಳುತ್ತಿದೆ. 2009ರ ಚುನಾವಣೆಯಲ್ಲಿ ಗೆದ್ದಿದ್ದ ಹಾಜಿ ನೂರುಲ್ ಇಸ್ಲಾಂ ಅವರಿಗೆ ಟಿಎಂಸಿ ಈ ಬಾರಿ ಟಿಕೆಟ್ ನೀಡಿದೆ. ಇವರು ಈ ಭಾಗದಲ್ಲಿ ಉತ್ತಮ ಕೆಲಸ ಮಾಡಿದ್ದಾರೆ ಎನ್ನಲಾಗುತ್ತಿದೆ. ಜನರ ನಡುವೆ ಹೆಸರು ಗಳಿಸಿರುವ ಸಿಪಿಎಂನ ನಿರಪದ ಸರ್ದಾರ್ ಅವರು 'ಇಂಡಿಯಾ' ಮೈತ್ರಿಕೂಟದ ಅಭ್ಯರ್ಥಿಯಾಗಿದ್ದಾರೆ.

ಶೇಖ್ ಶಹಜಾನ್‌ನನ್ನು ಪಕ್ಷದಿಂದ ಟಿಎಂಸಿ ಉಚ್ಚಾಟಿಸಿದೆ. ಆದರೂ ಸಂದೇಶ್‌ಖಾಲಿಯ ಮಹಿಳೆಯರ ಆರೋಪವನ್ನು ಟಿಎಂಸಿ ಒಪ್ಪಿಕೊಂಡಿಲ್ಲ. ಇವೆಲ್ಲವೂ ಬಿಜೆಪಿ ಪಿತೂರಿ ಅಂತಲೇ ಹೇಳುತ್ತಿದೆ. 'ಬಿಜೆಪಿಯ ಸುವೇಂದು ಅಧಿಕಾರಿಯೇ ಈ ಎಲ್ಲದರ ಹಿಂದೆ ಇದ್ದಾರೆ. ಇಲ್ಲಿನ ಟಿಎಂಸಿ ನಾಯಕರ ವಿರುದ್ಧ ಅತ್ಯಾಚಾರದ ಆರೋಪಗಳನ್ನು ಮಾಡಲು ನಾಲ್ಕಾರು ಮಹಿಳೆಯರನ್ನು ಆಯ್ಕೆ ಮಾಡು ಎಂದು ನನಗೆ ಹೇಳಿದ್ದರು' ಎಂದು ಬಿಜೆಪಿಯ ಮಂಡಲ ಅಧ್ಯಕ್ಷರೊಬ್ಬರು ಹೇಳಿರುವ ವಿಡಿಯೊ ಹರಿದಾಡುತ್ತಿದೆ. ಟಿಎಂಸಿ ಈ ವಿಡಿಯೊವನ್ನು ಇಟ್ಟುಕೊಂಡು, ಬಿಜೆಪಿಯೇ ಈ ಪ್ರಕರಣದ ಹಿಂದಿದೆ ಎನ್ನುತ್ತಿದೆ. ಇದು ಕೃತಕ ಬುದ್ಧಿಮತ್ತೆ ಬಳಸಿಕೊಂಡು ಸೃಷ್ಟಿಸಿದ ವಿಡಿಯೊ ಎಂದು ಬಿಜೆಪಿ ಹೇಳುತ್ತಿದೆ.

ದೌರ್ಜನ್ಯದ ಪ್ರಕರಣವು ಬೆಳಕಿಗೆ ಬಂದ ಕೆಲವೇ ದಿನಗಳಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ಸಂದೇಶ್‌ಖಾಲಿಗೆ ಭೇಟಿ ನೀಡಿ, ಇಲ್ಲಿನ ಮಹಿಳೆಯರೊಂದಿಗೆ ಮಾತನಾಡಿದ್ದರು. ರೇಖಾ ಅವರಿಗೆ ಟಿಕೆಟ್ ನೀಡಿದ ಬಳಿಕವೂ, ಪ್ರಧಾನಿ ಮೋದಿ ಅವರು ರೇಖಾ ಅವರಿಗೆ ಕರೆ ಮಾಡಿದ್ದರು. ಈಗ ಈ ಕ್ಷೇತ್ರ ಕೂಡ ಬಿಜೆಪಿ–ಟಿಎಂಸಿಗೆ ಪ್ರತಿಷ್ಠೆಯ ಕಣವಾಗಿದೆ.

ಆಧಾರ: ಪಿಟಿಐ, ಬಿಜೆಪಿ, ಟಿಎಂಸಿ, ಕಾಂಗ್ರೆಸ್ ಮತ್ತು ಎಡಪಕ್ಷಗಳ ನಾಯಕರ ಸಾಮಾಜಿಕ ಜಾಲತಾಣ ಪೋಸ್ಟ್‌ಗಳು ಮತ್ತು ಚುನಾವಣಾ ಪ್ರಚಾರ ವಿಡಿಯೊಗಳು, ಚುನಾವಣಾ ಆಯೋಗ

ಸಿನಿ ಬಿಟ್ಸ್

ಮೇ 24ಕ್ಕೆ 'ದ ಜಡ್ಜ್‌ಮೆಂಟ್' ತೆರೆಗೆ

ಕ್ರೇಜಿಸ್ಟಾರ್ ರವಿಚಂದ್ರನ್ ಪ್ರಮುಖ ಪಾತ್ರದಲ್ಲಿ ನಟಿಸಿರುವ 'ದ ಜಡ್ಜ್‌ಮೆಂಟ್' ಚಿತ್ರ ಮೇ 24ಕ್ಕೆ ತೆರೆಗೆ ಬರುತ್ತಿದೆ. ಜಿ9 ಕಮ್ಯೂನಿಕೇಷನ್ ಮೀಡಿಯಾ ಆ್ಯಂಡ್ ಎಂಟರ್‌ಟೈನ್ಮೆಂಟ್ ಲಾಂಛನದಲ್ಲಿ ಈ ಚಿತ್ರ ನಿರ್ಮಾಣಗೊಂಡಿದ್ದು, ಗುರುರಾಜ ಕುಲಕರ್ಣಿ ಈ ಚಿತ್ರಕ್ಕೆ ಆ್ಯಕ್ಷನ್–ಕಟ್ ಹೇಳಿದ್ದಾರೆ.

'ನ್ಯಾಯವಾದಿಯೊಬ್ಬ ನ್ಯಾಯಕ್ಕೋಸ್ಕರ, ನ್ಯಾಯಾಲಯದ ಪರಿಧಿಯಲ್ಲೇ ಹೋರಾಡುತ್ತಾನೆ. ಇರುವ ವ್ಯವಸ್ಥೆಯನ್ನು ದೂರದೇ, ಇದ್ದ ವ್ಯವಸ್ಥೆಯನ್ನು ಸದುಪಯೋಗಪಡಿಸಿಕೊಳ್ಳುವ ಕಥೆ. ರವಿಚಂದ್ರನ್ ನ್ಯಾಯವಾದಿಯಾಗಿ ಕಾಣಿಸಿಕೊಂಡಿದ್ದಾರೆ' ಎನ್ನುತ್ತಾರೆ ಕುಲಕರ್ಣಿ.



ರವಿಚಂದ್ರನ್

'ಆಕ್ಸಿಡೆಂಟ್', 'ಲಾಸ್ಟ್ ಬಸ್' ಚಿತ್ರಗಳಿಗೆ ನಿರ್ಮಾಪರಾಗಿದ್ದ ಗುರುರಾಜ ಕುಲಕರ್ಣಿ 'ಅಮೃತ ಅಪಾರ್ಟ್‌ಮೆಂಟ್ಸ್' ಚಿತ್ರದ ಮೂಲಕ ನಿರ್ಮಾಣದ ಜೊತೆಗೆ ನಿರ್ದೇಶಕನಾಗಿಯೂ ಗುರುತಿಸಿಕೊಂಡಿದ್ದರು. 'ನಾನು ಎರಡು ದಶಕಗಳ ಕಾಲ ಐಟಿ ಕ್ಷೇತ್ರದಲ್ಲಿ ಕೆಲಸ ಮಾಡಿದ್ದೇನೆ. ಸಾಮಾನ್ಯವಾಗಿ ಯೌವ್ವನದಲ್ಲಿಯೇ ದೊಡ್ಡ ಕನಸಿನೊಂದಿಗೆ ಸಿನಿಮಾ ಕ್ಷೇತ್ರಕ್ಕೆ ಬರುತ್ತಾರೆ. ಆದರೆ ನಾನು ನಿವೃತ್ತಿಯ ದಿನಗಳಲ್ಲಿ ಸಿನಿಮಾ ರಂಗಕ್ಕೆ ಬಂದೆ. ಬೇರೆ ಬೇರೆ ದೇಶಗಳಿಗೆ ಹೋಗಿ ಕ್ಯಾಮೆರಾ, ತಂತ್ರಜ್ಞಾನ ಕಲಿಯುತ್ತ ಬಂದೆ. ಇದು ನನ್ನ ನಾಲ್ಕನೆ ಸಿನಿಮಾ' ಎನ್ನುತ್ತಾರೆ ನಿರ್ದೇಶಕ ಗುರುರಾಜ ಕುಲಕರ್ಣಿ.

ನಟಿ ಮೇಘನಾ ಗಾಂವ್ಕರ್, ರವಿಚಂದ್ರನ್‌ಗೆ ಜೋಡಿಯಾಗಿದ್ದಾರೆ. ದಿಗಂತ್ , ಧನ್ಯಾ ರಾಮ್‌ಕುಮಾರ್, ಲಕ್ಷ್ಮೀ ಗೋಪಾಲಸ್ವಾಮಿ, ಟಿ.ಎಸ್. ನಾಗಾಭರಣ, ಪ್ರಕಾಶ್ ಬೆಳವಾಡಿ, ರಂಗಾಯಣ ರಘು, ರವಿಶಂಕರ್ ಗೌಡ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಪಿ.ಕೆ.ಎಚ್. ದಾಸ್ ಛಾಯಾಚಿತ್ರಗ್ರಹಣ, ಕೆಂಪರಾಜ್ ಸಂಕಲನ ಚಿತ್ರಕ್ಕಿದೆ. ಅನೂಪ್ ಸೀಳಿನ್ ಸಂಗೀತ ನೀಡಿದ್ದಾರೆ.

'ಜಾಸ್ತಿ ಪ್ರೀತಿ' ಟ್ರೇಲರ್ ಬಿಡುಗಡೆ

ಧರ್ಮ ಕೀರ್ತಿರಾಜ್, ಕೃಷಿ ತಾಪಂಡ ಜೋಡಿಯಾಗಿ ನಟಿಸಿರುವ 'ಜಾಸ್ತಿ ಪ್ರೀತಿ' ಚಿತ್ರದ ಟ್ರೇಲರ್ ಹಾಗೂ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಪೂರ್ಣಶ್ರೀ ಎಂಟರ್‌ಪ್ರೈಸಸ್ ಮೂಲಕ ಉದ್ಯಮಿ ಶಿವರಾಂ ಕೊಡತಿ ಬಂಡವಾಳ ಹೂಡಿದ್ದು, ಅರುಣ್ ಮಾನವ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ.

'ಪ್ರೀತಿಯ ಅವ್ಯಕ್ತ ಭಾವವೇ 'ಜಾಸ್ತಿ ಪ್ರೀತಿ'ಯಾಗಿದೆ. ಫೇಸ್‌ಬುಕ್ ಪೇಜೊಂದು ಈ ಸಿನಿಮಾ ಹುಟ್ಟಲು ಕಾರಣ. ಯಾವುದೇ ವ್ಯಕ್ತಿಗೆ ಸಂಬಂಧಿತ ಕಥೆಯಲ್ಲ. ದೃಶ್ಯಗಳು ಹೊಸತಾಗಿವೆ. ಬೆಂಗಳೂರು, ಬಂಗಾರಪೇಟೆ ಮೊದಲಾದೆಡೆ ಚಿತ್ರೀಕರಣ ನಡೆಸಿದ್ದೇವೆ. ಆದಷ್ಟು ಬೇಗನೆ ತೆರೆಗೆ ತರಲು ಯತ್ನ ನಡೆದಿದೆ' ಎಂದರು ನಿರ್ದೇಶಕರು.



ಕೃಷಿ ತಾಪಂಡ, ಧರ್ಮಕೀರ್ತಿರಾಜ್

'ಇಂದು ಚಿತ್ರಮಂದಿರಗಳಿಗೆ ಪ್ರೇಕ್ಷಕರ ಕೊರತೆ ಇದೆ. ಸಿನಿಮಾ ನೋಡಲು ಜನ ಬರುತ್ತಿಲ್ಲ. ಆದರೂ ನಿರ್ಮಾಪಕರು ಧೈರ್ಯ ಮಾಡಿ, ನಂಬಿಕೆಯಿಂದ ಹಣ ಹೂಡಿದ್ದಾರೆ. ಒಳ್ಳೆಯ ಅಂಶಗಳು ಇರುವುದರಿಂದ ಚಿತ್ರ ನೋಡಲು ಜನ ಬರುತ್ತಾರೆಂಬ ವಿಶ್ವಾಸವಿದೆ. ನನ್ನ ಅಭಿನಯದ ಕೆಲವು ಚಿತ್ರಗಳು ಬಿಡುಗಡೆಯಾಗಬೇಕಿದೆ. ನನಗೂ ಒಂದೆ ಕಡೆ ಬ್ರೇಕ್ ಸಿಗಬೇಕಂಬ ಹಂಬಲವಿದೆ. ಈ ಚಿತ್ರದಿಂದ ಸಿಗಬಹುದು. ಅದಕ್ಕಾಗಿ ಕಾಯುತ್ತಿದ್ದೇನೆ' ಎಂದರು ನಾಯಕ ಧರ್ಮ ಕೀರ್ತಿರಾಜ್.

ಮುರಳಿರಾಮ್, ಶೋಭರಾಣಿ, ಬ್ಯಾಂಕ್ ಜನಾರ್ದನ, ಸುಚೇಂದ್ರಪ್ರಸಾದ್, ಮೈಸೂರು ರಮಾನಂದ್, ಎಂ.ಎನ್.ಲಕ್ಷ್ಮೀದೇವಿ ಮುಂತಾದವರು ತಾರಾಗಣದಲ್ಲಿದ್ದಾರೆ. ವಿನೀತ್ ರಾಜ್ ಮೆನನ್ ಸಂಗೀತ, ಸತೀಶ್.ಸಿ.ಎಸ್-ಬಿ.ಆರ್. ಮಲ್ಲಿಕಾರ್ಜುನ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಸಕಾರಾತ್ಮಕ ದೃಷ್ಟಿಕೋನ



ನುಡಿ ಬೆಳಗು

ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಒಮ್ಮೆ ಒಂದು ಬಹು ಉತ್ಪನ್ನಗಳ ಬಹು ರಾಷ್ಟ್ರೀಯ ಕಂಪನಿಯಲ್ಲಿ ಪ್ರತಿಷ್ಠಿತ ಕಾಲೇಜೊಂದರಿಂದ ಎಂಬಿಎ ಪದವಿ ಪಡೆದು ಕೆಲಸಕ್ಕೆ ಸೇರಿದ್ದ ಇಬ್ಬರು ಯುವ ಮಾರಾಟ ಅಧಿಕಾರಿಗಳನ್ನು, ತಮ್ಮ ಕಂಪನಿಯ ಪಾದರಕ್ಷೆಗಳ ಮಾರಾಟಕ್ಕೆ ಇರುವ ಅವಕಾಶದ ಕುರಿತು ಮಾರುಕಟ್ಟೆ ಸಮೀಕ್ಷೆ ಮಾಡಲು ಆಫ್ರಿಕಾದ ದಟ್ಟ ಕಾಡಿನಿಂದ ಸುತ್ತುವರಿದಿರುವ ಪ್ರದೇಶ ಒಂದಕ್ಕೆ ಕಳಿಸಲಾಯಿತು.

ಈ ಇಬ್ಬರು ಯುವ ಅಧಿಕಾರಿಗಳು ತಮಗೆ ಸೂಚಿಸಿದ್ದ ಜಾಗಕ್ಕೆ ಹೋಗಿ ನೋಡಿದರೆ, ಅಲ್ಲಿರುವುದು ಬಹುಪಾಲು ಆದಿವಾಸಿಗಳು. ಅವರಿಗೆ ನಾಗರಿಕತೆಯ ಪರಿಚಯ ಸ್ವಲ್ಪವೂ ಇಲ್ಲ. ಅವರು ಪಾದರಕ್ಷೆಗಳನ್ನು ಧರಿಸುವುದಿರಲಿ ಮೈಮೇಲೆ ಸರಿಯಾಗಿ ಉಡುಪುಗಳನ್ನೂ ಧರಿಸುವುದನ್ನು ಅರಿತವರಲ್ಲ. ಇಲ್ಲಿನ ಸ್ಥಿತಿಯನ್ನು ಕಂಡು ಕಂಗಾಲಾದ ಮೊದಲನೆಯ ಮಾರಾಟ ಅಧಿಕಾರಿ, ಇಲ್ಲಿ ಪಾದರಕ್ಷೆಗಳನ್ನು ಮಾರಾಟ ಮಾಡುವುದು ಅಸಾಧ್ಯವೆಂಬ ತೀರ್ಮಾನಕ್ಕೆ ಬಂದು ತಕ್ಷಣ ಅಲ್ಲಿಂದ ವಾಪಸ್ ಹೊರಟ.

ಆದರೆ ಎರಡನೆಯ ಮಾರಾಟ ಅಧಿಕಾರಿ, 'ಇಲ್ಲಿಗೆ ತಕ್ಷಣ ಎರಡು ಟ್ರಕ್ ಲೋಡ್ ಪಾದರಕ್ಷೆಗಳನ್ನು ಕಳಿಸಿಕೊಡಿ ಹಾಗೂ ಅದರ ಜೊತೆಗೆ ಹೊಸ ವಿನ್ಯಾಸದ ಉಡುಪುಗಳನ್ನೂ ಸಹ ಕಳಿಸಿ. ಏಕೆಂದರೆ ಇಲ್ಲಿನ ಜನಕ್ಕೆ ಬಟ್ಟೆ, ಪಾದರಕ್ಷೆಗಳನ್ನು ಹಾಕುವುದನ್ನು ಕಲಿಸಿದ್ದೇ ಆದರೆ ಅದ್ಭುತವಾದ ಮಾರುಕಟ್ಟೆ ನಮಗಿಲ್ಲಿ ಲಭ್ಯವಿದೆ' ಎಂಬ ಸಂದೇಶವನ್ನು ತಕ್ಷಣ ತನ್ನ ಸಂಸ್ಥೆಯ ಕೇಂದ್ರ ಕಚೇರಿಗೆ ರವಾನಿಸಿದ.

ಮೊದಲನೆಯ ಮಾರಾಟ ಅಧಿಕಾರಿ ಪಾದರಕ್ಷೆಯಿರಲಿ ಬಟ್ಟೆಯನ್ನೇ ನೋಡಿರದ ಜನರಿಗೆ ಹೇಗೆ ಪಾದರಕ್ಷೆ ಮಾರಲು ಸಾಧ್ಯ ಎಂದು ಋಣಾತ್ಮಕವಾಗಿ ಯೋಚಿಸಿದರೆ, ಎರಡನೆಯಾತ ಇಲ್ಲಿಗೆ ಯಾವ ಕಂಪನಿಯವರು ಪ್ರವೇಶಿಸಿರದ ಕಾರಣ, ಇಲ್ಲಿನ ಜನರಿಗೆ ಪಾದರಕ್ಷೆಯ ಅಗತ್ಯದ ಕುರಿತು ಅರಿವೇ ಇಲ್ಲ, ಆ ಅರಿವನ್ನು ಮೂಡಿಸಿದ್ದೇ ಆದರೆ ಒಳ್ಳೆಯ ವ್ಯಾಪಾರ ಸಾಧ್ಯ, ಹಾಗೂ ಅದರ ಜೊತೆಗೆ ಹೊಸ ವಿನ್ಯಾಸದ ಬಟ್ಟೆಗಳನ್ನೂ ಅವರಿಗೆ ಪರಿಚಯಿಸಿದರೆ ತಮ್ಮ ಕಂಪನಿಯ ಮಾರುಕಟ್ಟೆಯನ್ನು ಇನ್ನಷ್ಟು ವಿಸ್ತರಿಸಬಹುದು ಎನ್ನುವ ಧನಾತ್ಮಕ ಚಿಂತನೆಯನ್ನು ಮಾಡಿದ.

ಒಂದೇ ರೀತಿಯ ಸನ್ನಿವೇಶವನ್ನು ಎರಡು ವಿಭಿನ್ನ ದೃಷ್ಟಿಕೋನಗಳಿಂದ ನೋಡಿದ ಪರಿಯಿದು. ಎಷ್ಟೋ ಸಂದರ್ಭದಲ್ಲಿ ನಾವಿರುವ ಜಾಗ ನಮ್ಮ ಪ್ರತಿಭೆಗೆ ಸೂಕ್ತವಾಗಿಲ್ಲ, ಇಲ್ಲಿನ ವಾತಾವರಣ ನಮಗೆ ಪೂರಕವಾಗಿಲ್ಲ, ನಾವು ಬೇರೆಡೆ ಇದ್ದರೆ ಇನ್ನೇನನ್ನೋ ಸಾಧಿಸುತ್ತಿದ್ದೆವು ಎಂದೆಲ್ಲಾ ಅಂದುಕೊಂಡು ಕೊರಗುತ್ತಿರುತ್ತೇವೆ. ಆದರೆ ನಾವಿರುವ ಜಾಗದಲ್ಲಿಯೇ, ನಮಗಿರುವ ಅವಕಾಶಗಳ ಮಿತಿಯಲ್ಲಿಯೇ ಸಕಾರಾತ್ಮಕವಾಗಿ ಚಿಂತಿಸುವುದೇ ಸಾಧಕರ ಮಾರ್ಗ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಮೇ 6, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ತ್ರಯೋದಶಿ ಗಂ. 14-41 ನಕ್ಷತ್ರ: ರೇವತಿ ಗಂ. 17-43 ಯೋಗ: ಪ್ರೀತಿ ಗಂ. 24-28 ಕರಣ: ವಣಿಜ ಗಂ. 14-41, ಮೇಷ ಮಾಸದ 24 ನೇ ದಿನ, ಮಳೆನಕ್ಷತ್ರ: ಭರಣಿ 3.

ರಾಹುಕಾಲ : ಬೆಳಿಗ್ಗೆ 07-30 - 09-00

ಸೂರ್ಯೋದಯ : 06-11 ಸೂರ್ಯಾಸ್ತ : 06-43

ಮುಸ್ಲಿಂ ದಿನಾಂಕ : 26 ಶವ್ವಾಲ್

ಅದೃಷ್ಟ ಸಂಖ್ಯೆ : 12, 8

ಮೇಷ : ಸುಖಗಳ ಮೇಲಿನ ಮೋಹ ಬಿಟ್ಟು ಆಂತರಿಕ ಸಂತೋಷ ಹುಡುಕುವ ಕಾರ್ಯಕ್ಕೆ ಸಾಧಕರು ತೆರಳಲಿದ್ದೀರಿ. ಇಷ್ಟು ದಿನದ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು. ಉತ್ತಮ ಗಳಿಕೆ ನಿರೀಕ್ಷಿಸಬಹುದು.

ವೃಷಭ: ನೂತನವಾಗಿ ನಿರ್ಮಿಸಿರುವ ಮನೆಗಾಗಿ ಆಲಂಕಾರಿಕ ವಸ್ತುಗಳ ಖರೀದಿ ನಡೆಯುವುದು. ಯಶಸ್ಸಿನ ಹೊಸ ಮಾರ್ಗಗಳ ಅರಿವಾಗುವುದು. ರುಚಿ ರುಚಿಯಾದ ಅಡುಗೆಗೆ ಹೊಸ ಅಭಿಮಾನಿಗಳ ಸಂಪಾದನೆ ಆಗುತ್ತದೆ.

ಮಿಥುನ : ತಾಯಿಯ ಮಾತನ್ನು ಕೇಳಿದ್ದರೆ ಆಗುತ್ತಿತ್ತು ಎಂದು ಮುಂದೊಂದು ದಿನ ಸ್ಮರಿಸುವ ಬದಲು ಇಂದೇ ಕೇಳಿ. ಮಕ್ಕಳ ಮೊದಲ ತೊದಲ ನುಡಿಗಳು ಹರ್ಷಕ್ಕೆ ಕಾರಣೀಭೂತವಾಗುವುದು. ಲಂಚದ ಬಲೆಗೆ ಬೀಳದಿರಿ.

ಕರ್ಕಾಟಕ : ಮನೆಯ ಪ್ರಶಾಂತತೆ ಕಾಪಾಡಿಕೊಂಡು ಉತ್ತಮ ಕಾರ್ಯಗಳಿಂದ ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯಿರಿ. ಇಷ್ಟದ ತಿಂಡಿ ತಿನಿಸುಗಳೊಂದಿಗೆ ದಿನ ಕಳೆಯುವಿರಿ.

ಸಿಂಹ : ವೃತ್ತಿರಂಗದಲ್ಲಿ ಹಿತೈಷಿಗಳ ಅಥವಾ ಅಕ್ಕಪಕ್ಕದವರ ಮಾತುಗಳನ್ನು ಲೆಕ್ಕಿಸದೇ ಮುನ್ನುಗ್ಗುವುದು ಸರಿ ಎನಿಸುವುದು. ವಿಷಯಾನ್ವೇಷಣೆಯ ಕೌಶಲದಿಂದಾಗಿ ಪತ್ರಿಕೋದ್ಯಮಿಗಳು ಗೌರವಕ್ಕೆ ಪಾತ್ರರಾಗುವಿರಿ.

ಕನ್ಯಾ : ಅನೇಕ ಅಚ್ಚರಿಯ ಸಂಗತಿಗಳನ್ನು ಎದುರಿಸುವ ಸಾಮರ್ಥ್ಯವನ್ನು ಕೊಡಲು ದೇವರಲ್ಲಿ ಪ್ರಾರ್ಥಿಸಿ. ಸಣ್ಣ ಮಕ್ಕಳ ಶಿಕ್ಷಕರು ಸಂತೋಷದಿಂದ ಖುಷಿ ಹೊಂದುವಿರಿ. ಬಿಸಿ ವಸ್ತು ಹಾಗು ವಿದ್ಯುತ್ ವಿಚಾರದಲ್ಲಿ ಎಚ್ಚರವಿರಲಿ.

ತುಲಾ: ವಿದ್ಯಾಭ್ಯಾಸದಲ್ಲಿ ಹಿನ್ನಡೆ ತೋರಿಬಂದು ವಿದ್ಯಾರ್ಥಿಗಳಿಗೆ ನಿರಾಸೆ ಕಾಡಲಿದೆ. ಶುಭ ಕಾರ್ಯಕ್ರಮದಲ್ಲಿ ಪಾಲ್ಗೊಂಡಾಗ ವಾಗ್ವಾದಗಳಿಗೆ ಆಸ್ಪದ ಕೊಡಬೇಡಿ. ದೇವರ ಆರಾಧನೆಯಲ್ಲಿ ಸಂತಸ ಹೊಂದುವಿರಿ.

ವೃಶ್ಚಿಕ: ಕಚೇರಿಯಲ್ಲಿನ ಕೆಲಸದ ಒತ್ತಡಗಳನ್ನು ಕುಟುಂಬದ ಸದಸ್ಯರ ಮೇಲೆ ಹೇರಬೇಡಿ. ಕಾರ್ಯದ ಸಾಧನೆಗೆ ಕಳೆದುಕೊಂಡ ಸ್ನೇಹಿತನ ಸಹಾಯ ಅಗತ್ಯವೆನ್ನಿಸುವುದು. ಸೂಕ್ತವಾದ ಗೆಳೆಯರು ಸಿಗಲಿದ್ದಾರೆ.

ಧನು: ಜನವಾಣಿಗೆ ಸ್ಪಂದಿಸುವ ರಾಜಕಾರಣಿಗಳಿಗೆ ಹಿಂಬಾಲಕರ ಬೆಂಬಲ ಸಿಗಲಿದೆ. ಮೈದುನನ ಸಹಾಯದಿಂದ ತವರು ಮನೆಯ ಕೆಲವರ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ. ಬೆಂಕಿಯ ಬಗ್ಗೆ ಜಾಗ್ರತೆಯಿಂದಿರಿ.

ಮಕರ : ವೈಜ್ಞಾನಿಕ ಸಂಶೋಧನೆಯಲ್ಲಿ ತೊಡಗಿರುವವರಿಗೆ ಅನಿರೀಕ್ಷಿತ ರೀತಿಯಲ್ಲಿ ಫಲಿತಾಂಶ ದೊರೆಯಲಿದೆ. ತೊರೆದು ಬಂದ ಮೂಲಮನೆಯಲ್ಲಿದ್ದ ಸುವ್ಯವಸ್ಥೆಗಳನ್ನು ನೆನೆಸಿಕೊಂಡು ಈಗ ಮರುಗುವಂತಾಗುತ್ತದೆ.

ಕುಂಭ : ತಿಳಿದಿರುವ ವಿಶೇಷವಾದ ಸಂಗತಿಗಳನ್ನು ಬೇರೆಯವರಿಗೆ ತಿಳಿಸಿ ಆಶ್ಚರ್ಯಪಡುವುದರಲ್ಲಿ ಖುಷಿ ಪಡುತ್ತೀರಿ. ಹೊಸ ವ್ಯವಹಾರವೊಂದರ ಪ್ರಾರಂಭಕ್ಕೆ ಬೇಕಾದ ಮಾಹಿತಿಗಳ ಸಂಗ್ರಹ ನಡೆಯುವುದು.

ಮೀನ : ಸರ್ವಗುಣ ಸಂಪನ್ನನಾದ ಮಗನ ಕೀರ್ತಿ ಉನ್ನತ ಮಟ್ಟದಲ್ಲಿ ಕೇಳಿಬರುತ್ತಿರುವ ಬಗ್ಗೆ ಹೆಮ್ಮೆಯೆಂದೆನಿಸುತ್ತದೆ. ಬಾಡಿಗೆ ರೂಪದಲ್ಲಿ ಸಂಘ ಸಂಸ್ಥೆಯೊಂದಕ್ಕೆ ಕಟ್ಟಡವನ್ನು ಕಟ್ಟಿಸಿಕೊಡಲು ಒತ್ತಡಬರಲಿದೆ.

ಪದಬಂಧ 5672


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಗುರಿಯನ್ನು ಮುಟ್ಟಲು ಸಂಕಲ್ಪ ಮಾಡಿದವನು (5)
3.ವನದಲ್ಲಿ ಕೊನೆಗೊಂಡಿರುವ ಬಾಳು! (3)
5.ವಿಶೇಷವಾಗಿ ತನ್ನದೇ ಆದದ್ದು (2)
6.ಉತ್ತರದವರ ನಲ್ಲಿ ಉಲ್ಟಾ ಆಗಿದೆ (2)
8.ಇದು ಮುಖ್ಯವಾದುದು (3)
9.ಕೆಲಸ ಮಾಡಲು ಬೇಕಾದ ಸಾಧನ (5)
12.ಮಲೆಯಲ್ಲಿ ದೊರೆತ ಸಾಂಬಾರಪದಾರ್ಥ (3)
13.ಹಗರಣದಲ್ಲಿರುವ ಗುಂಪು ತಿರುವು ಮುರುವಾಗಿದೆ (2)
15.ಮಾತಿಲ್ಲದ ನೀರವತೆ (2)
16.ಕರುವಿನೊಳಗೆ ಕಾಣುತ್ತಿರುವ ಅಶ್ರು (3)
17.ಸಂಸಾರದ ಸೆರೆಯಿದು (5)

ಮೇಲಿಂದ ಕೆಳಕ್ಕೆ

1.ಬರದಿಂದ ಆರಂಭವಾಗಿರುವ ಮುಕ್ತಾಯ! (4)
2.ಕಳವಳದಿಂದ ತಿಂದಿರುವ ತುತ್ತು (3)
4.ತುಸುವೇ ಬೀರಿದ ಮಂದಹಾಸ (4)
7.ಹಳೆಯದನ್ನು ಹೊಸದು ಮಾಡುವಿಕೆ (5)
8.ಸಂಚಾರವನ್ನು ಹೀಗೆನ್ನಿ (3)
9.ಜೋಕಾಲಿ ಇಲ್ಲಿದೆ (3)
10.ನೆಲ್ಲಿಗಿಡ ಮತ್ತು ಅದರ ಕಾಯಿ (4)
11.ಮಂದಿಯ ಮನಸ್ಸು (4)
14.ಗಡಕ್ಕನೆ ಬಂದೆರಗಿದ ಗಂಡು ಕೋತಿ (3)



5671ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅವಕಾಶ 3.ವಜ್ರೋತ್ಸವ 5.ರದನ 6.ಕಲಹ 8.ಕಣಕ 9.ಉತ್ತರ 10.ಕೆಡುಕ 12.ಬಿಂದಿಗೆ 14.ಕರಣಿಕ 15.ಹರಿದಾರಿ

ಮೇಲಿಂದ ಕೆಳಕ್ಕೆ:
1.ಅಭ್ರಕ 2.ಶರ 3.ವನ 4.ವಲ್ಮೀಕ 7.ಹರಟೆಗಾರ 8.ಕರ್ಣಾಕರ್ಣಿಕೆ 9.ಉದಕ 11.ಕತ್ತರಿ 12.ಬಿಂಕ 13.ಗೆಹ

ಸುಡೊಕು 6057

	4			2		7		3
6		9	5		7			
	3			8		6		
	7			9			3	
	9	3	6					4
4				5		8		
7			8		9			
	5						8	
	8			4		9		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6056 ಸುಡೊಕು

2	1	8	3	7	5	4	6	9
4	9	7	6	1	2	8	5	3
3	6	5	9	4	8	1	7	2
9	2	3	1	8	7	5	4	6
5	7	1	4	6	3	9	2	8
8	4	6	5	2	9	3	1	7
7	3	9	2	5	1	6	8	4
6	5	2	8	9	4	7	3	1
1	8	4	7	3	6	2	9	5

ಏರ್‌ಟೆಲ್ ಎಂ–ಕ್ಯಾಪ್ ಇಳಿಕೆ

ನವದೆಹಲಿ (ಪಿಟಿಐ): ಕಳೆದ ವಾರದ ವಹಿವಾಟಿನಲ್ಲಿ ದೇಶದ ಪ್ರಮುಖ 10 ಕಂಪನಿಗಳ ಪೈಕಿ 6 ಕಂಪನಿಗಳ ಮಾರುಕಟ್ಟೆ ಮೌಲ್ಯವು (ಎಂ–ಕ್ಯಾಪ್) ₹68,417 ಕೋಟಿ ಕರಗಿದೆ.

ಭಾರ್ತಿ ಏರ್‌ಟೆಲ್‌ನ ಎಂ–ಕ್ಯಾಪ್ ₹27,635ಕೋಟಿ ಕರಗಿದ್ದು, ಒಟ್ಟು ಮೌಲ್ಯ ₹7.23 ಲಕ್ಷ ಕೋಟಿಗೆ ಇಳಿದಿದೆ. ರಿಲಯನ್ಸ್ ಇಂಡಸ್ಟ್ರೀಸ್ ₹23,341 ಕೋಟಿ, ಎಲ್‌ಐಸಿ ₹5,724 ಕೋಟಿ, ಇನ್ಫೊಸಿಸ್ ₹5,686 ಕೋಟಿ, ಐಟಿಸಿ ₹4,619 ಕೋಟಿ ಮತ್ತು ಹಿಂದುಸ್ತಾನ್ ಯೂನಿಲಿವರ್‌ನ ಮಾರುಕಟ್ಟೆ ಮೌಲ್ಯವು ₹1,409 ಕೋಟಿ ಇಳಿಕೆಯಾಗಿದೆ. ಎಸ್‌ಬಿಐ ಮಾರುಕಟ್ಟೆ ಮೌಲ್ಯವು ₹26,901 ಕೋಟಿ, ಐಸಿಐಸಿಐ ಬ್ಯಾಂಕ್ ₹24,651 ಕೋಟಿ, ಟಿಸಿಎಸ್ ₹9,587 ಕೋಟಿ ಏರಿಕೆ ಆಗಿದೆ.

ಗೃಹ ವಲಯ: ಹೆಚ್ಚಿದ ಸಾಲ ನೀಡಿಕೆ

ನವದೆಹಲಿ (ಪಿಟಿಐ): ಕಳೆದ ಎರಡು ವರ್ಷಗಳಲ್ಲಿ ಗೃಹ ಹಾಗೂ ರಿಯಲ್ ಎಸ್ಟೇಟ್ ವಲಯಕ್ಕೆ ಬ್ಯಾಂಕ್‌ಗಳು ನೀಡಿರುವ ಸಾಲದ ಪ್ರಮಾಣದಲ್ಲಿ ಏರಿಕೆಯಾಗಿದ್ದು, ₹10 ಲಕ್ಷ ಕೋಟಿಯಷ್ಟು ಸಾಲ ನೀಡಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ವರದಿ ತಿಳಿಸಿದೆ.

2022ರ ಮಾರ್ಚ್ ಅಂತ್ಯಕ್ಕೆ ಗೃಹ ಸಾಲದ (ಆದ್ಯತಾ ವಲಯದ ಸಾಲ ಸೇರಿದಂತೆ) ಬಾಕಿಯು ₹17.26 ಲಕ್ಷ ಕೋಟಿ ಇತ್ತು. 2023ರಲ್ಲಿ ₹19.88 ಲಕ್ಷ ಕೋಟಿಗೆ ಮುಟ್ಟಿತ್ತು. ಪ್ರಸಕ್ತ ವರ್ಷದ ಮಾರ್ಚ್ ಅಂತ್ಯಕ್ಕೆ ₹27.22 ಲಕ್ಷ ಕೋಟಿ ಆಗಿದೆ ಎಂದು ಆರ್‌ಬಿಐನ 2024ರ ಮಾರ್ಚ್‌ನ ಬ್ಯಾಂಕ್ ಸಾಲದ ವಲಯವಾರು ಬೆಳವಣಿಗೆ ಕುರಿತ ವರದಿ ತಿಳಿಸಿದೆ. 2022ರ ಮಾರ್ಚ್ ಅಂತ್ಯದಲ್ಲಿ ₹2.97 ಲಕ್ಷ ಕೋಟಿ ಇದ್ದ ವಾಣಿಜ್ಯ ಉದ್ದೇಶದ ರಿಯಲ್ ಎಸ್ಟೇಟ್‌ನ ಸಾಲದ ಬಾಕಿಯು ಈ ವರ್ಷದ ಮಾರ್ಚ್ ಅಂತ್ಯಕ್ಕೆ ₹4.48 ಲಕ್ಷ ಕೋಟಿಗೆ ತಲುಪಿದೆ ಎಂದು ಹೇಳಿದೆ.

ಕಳೆದ ಎರಡು ವರ್ಷಗಳಲ್ಲಿ ಮನೆಗಳ ಖರೀದಿ ಮತ್ತು ಬೆಲೆಯಲ್ಲಿ ಏರಿಕೆಯಾಗಿದೆ ಎಂದು ಆಸ್ತಿ ಸಲಹಾ ತಜ್ಞರು ಹೇಳಿದ್ದಾರೆ.

'ಗೃಹ ವಲಯದ ಎಲ್ಲಾ ವಿಭಾಗಗಳಲ್ಲೂ ಸಾಲ ನೀಡಿಕೆಯು ಉತ್ತಮ ಬೆಳವಣಿಗೆ ಕಂಡಿದೆ. ಮತ್ತೊಂದೆಡೆ ಸರ್ಕಾರ ನೀಡುತ್ತಿರುವ ಉತ್ತೇಜನದಿಂದಾಗಿ ಕೈಗೆಟಕುವ ಮನೆಗಳ ವಿಭಾಗದಲ್ಲಿ ನಿರೀಕ್ಷೆಗೂ ಮೀರಿ ಸಾಲ ನೀಡಿಕೆ ಪ್ರಮಾಣವು ಹೆಚ್ಚಳವಾಗಿದೆ' ಎಂದು ಬ್ಯಾಂಕ್ ಆಫ್ ಬರೋಡಾದ ಅರ್ಥಶಾಸ್ತ್ರಜ್ಞ ಮದನ್ ಸಬ್ನವಿಸ್ ಹೇಳಿದ್ದಾರೆ.

ಕೋವಿಡ್ ಸಾಂಕ್ರಾಮಿಕದ ವೇಳೆ ಮನೆಗಳ ಖರೀದಿ ಇಳಿಕೆಯಾಗಿತ್ತು. ಆದರೆ, ಕಳೆದ ಎರಡು ವರ್ಷಗಳಲ್ಲಿ ಖರೀದಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಬಡ್ಡಿದರ ಹೆಚ್ಚಿರುವುದರಿಂದ ಗೃಹ ಸಾಲ ನೀಡಿಕೆಯು ಬೆಳವಣಿಗೆಯು ಶೇ15ರಿಂದ 20ರಷ್ಟು ಇಳಿಕೆಯಾಗಬಹುದು' ಎಂದು ತಿಳಿಸಿದ್ದಾರೆ.

ರಿಯಲ್ ಎಸ್ಟೇಟ್ ವಲಯ: 2030ರ ವೇಳೆಗೆ ಭಾರತೀಯ ರಿಯಲ್ ಎಸ್ಟೇಟ್‌ನ ಗಾತ್ರವು ₹83 ಲಕ್ಷ ಕೋಟಿಗೆ ತಲುಪಲಿದೆ ಎಂದು ಮಾರುಕಟ್ಟೆ ತಜ್ಞರು ಅಂದಾಜಿಸಿದ್ದಾರೆ.

ಮ್ಯೂಚುಯಲ್ ಫಂಡ್: ಸಂಪತ್ತು ಗಳಿಕೆ ಹೇಗೆ?



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಸಂಪತ್ತು ಸೃಷ್ಟಿಸುವುದು ಹೇಗೆ ಎನ್ನುವ ಪ್ರಶ್ನೆ ಬಂದ ತಕ್ಷಣ ಅಲ್ಲಿ ಮ್ಯೂಚುಯಲ್ ಫಂಡ್‌ನ ಪ್ರಸ್ತಾಪ ಬಂದೇ ಬರುತ್ತದೆ. ಅದರಲ್ಲೂ ಹೊಸದಾಗಿ ಹೂಡಿಕೆ ಆರಂಭಿಸುವವರಿಗೆ ಮ್ಯೂಚುಯಲ್ ಫಂಡ್ ಹೂಡಿಕೆ ಬಗ್ಗೆ ಇನ್ನಿಲ್ಲದ ಉತ್ಸಾಹವಿರುತ್ತದೆ.

ಆದರೆ, 45ಕ್ಕೂ ಹೆಚ್ಚು ಮ್ಯೂಚುಯಲ್ ಫಂಡ್ ಕಂಪನಿಗಳು ರೂಪಿಸಿರುವ 1,300ಕ್ಕೂ ಹೆಚ್ಚು ಯೋಜನೆಗಳಲ್ಲಿ ಎಲ್ಲಿ ಹೂಡಿಕೆ ಮಾಡಬೇಕು ಎನ್ನುವುದೇ ಪ್ರಶ್ನೆ. ಈ ಗೊಂದಲ ನಿಮಗೂ ಇದ್ದರೆ ಉತ್ತರ ಇಲ್ಲಿದೆ.

ಸಂಪತ್ತು ಸೃಷ್ಟಿ ಎಂದರೇನು?: ನಮ್ಮ ಆಸೆ–ಆಕಾಂಕ್ಷೆ ಈಡೇರಿಸಿಕೊಳ್ಳಲು ಸಾಕಷ್ಟು ಹಣ ಹೊಂದಿರುವುದನ್ನು 'ಸಂಪತ್ತು ಸೃಷ್ಟಿ' ಎಂದು ಸರಳವಾಗಿ ಕರೆಯಬಹುದು. ಪ್ರತಿಯೊಬ್ಬ ವ್ಯಕ್ತಿಯು ತನ್ನ ಅಗತ್ಯಕ್ಕೆ ತಕ್ಕಂತೆ ಬೇರೆ ಬೇರೆ ಹಣಕಾಸಿನ ಗುರಿಗಳನ್ನು ಪೂರೈಸಿಕೊಳ್ಳಲು ಸಂಪತ್ತನ್ನು ಸೃಷ್ಟಿ ಮಾಡಿಕೊಳ್ಳಬೇಕಾಗುತ್ತದೆ.

ಉದಾಹರಣೆಗೆ ನಿವೃತ್ತಿ ಬಳಿಕ ವಿದೇಶ ಪ್ರವಾಸ ಕೈಗೊಳ್ಳಬೇಕೆಂಬುದು ನಿಮ್ಮ ಇಚ್ಛೆಯಾಗಿರುತ್ತದೆ ಎಂದುಕೊಳ್ಳಿ. ಆ ಆಸೆ ಕೈಗೂಡುವಂತೆ ಮಾಡಲು ಸಂಪತ್ತು ಅಂದರೆ ಹಣ ಬೇಕೇಬೇಕು. ನಿಮ್ಮ ಮಕ್ಕಳನ್ನು ವಿದೇಶದ ವಿಶ್ವವಿದ್ಯಾಲಯದಲ್ಲಿ ಓದಿಸುವ ಗುರಿ ಇದೆ ಎಂದುಕೊಳ್ಳಿ. ಆಗ ಅದಕ್ಕೆ ದುಡ್ಡು ಅಂದರೆ ಸಂಪತ್ತು ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಹೀಗೆ ಪ್ರತಿಯೊಂದು ಗುರಿ ಪೂರೈಸಿಕೊಳ್ಳಲು ಸಂಪತ್ತು ಅಗತ್ಯ ಆಗುತ್ತದೆ. ಸಂಪತ್ತು ಸೃಷ್ಟಿಗೆ ಭದ್ರ ಬುನಾದಿಯೇ ಉಳಿತಾಯ ಮತ್ತು ಹೂಡಿಕೆ.

ಹಣಕಾಸಿನ ಗುರಿ ಎಂದರೇನು?: 22 ವರ್ಷದ ವ್ಯಕ್ತಿ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದು ಇನ್ನು 6 ವರ್ಷಗಳಲ್ಲಿ ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಲು ₹12 ಲಕ್ಷ ಹೊಂದುವ ಗುರಿ ಇಟ್ಟುಕೊಂಡಿದ್ದಾನೆ ಎಂದು ಭಾವಿಸಿ. ಈಗಷ್ಟೇ ಮದುವೆಯಾಗಿರುವ ಜೋಡಿ ಇನ್ನು 15 ವರ್ಷಗಳಲ್ಲಿ ಮನೆ ಖರೀದಿಸುವ ಉದ್ದೇಶ ಹೊಂದಿದ್ದು, ಆ ಗುರಿಗಾಗಿ ಬೇಕಿರುವ ಮೊತ್ತ ₹2 ಕೋಟಿ ಎಂದುಕೊಳ್ಳಿ. 35 ವರ್ಷದ ವ್ಯಕ್ತಿಗೆ ಹೊಸ ಕಾರು ಕೊಳ್ಳಲು 2 ವರ್ಷದಲ್ಲಿ ₹20 ಲಕ್ಷದ ಅಗತ್ಯವಿದೆ ಎಂದು ಭಾವಿಸಿ. ಈ ಎಲ್ಲಾ ಮೂರು ಸನ್ನಿವೇಶಗಳು ಹಣಕಾಸಿನ ಗುರಿಗಳಿಗೆ ಉದಾಹರಣೆಯಾಗಿ ನಿಲ್ಲುತ್ತವೆ.

ವ್ಯಕ್ತಿಯ ಪರಿಸ್ಥಿತಿ ಮತ್ತು ಅಗತ್ಯಕ್ಕೆ ತಕ್ಕಂತೆ ಹಣಕಾಸಿನ ಗುರಿಗಳು ಬೇರೆ ಬೇರೆಯಾಗಿರುತ್ತವೆ. ಯಾವುದೇ ಹಣಕಾಸಿನ ಗುರಿಗೆ ಎಷ್ಟು ಹಣ ಅಗತ್ಯ? ಗುರಿ ತಲುಪಲು ಬೇಕಿರುವ ಹಣ ಹೊಂದಿಸಲು ಎಷ್ಟು ಸಮಯವಿದೆ? ಆ ನಿರ್ದಿಷ್ಟ ವ್ಯಕ್ತಿಯ ಸದ್ಯದ ವಯಸ್ಸು ಎಷ್ಟು ಎನ್ನುವುದು ಮುಖ್ಯವಾಗುತ್ತದೆ. ಈ ಮೂರು ಅಂಶಗಳನ್ನು ಒಳಗೊಳ್ಳದ ಹಣಕಾಸಿನ ಗುರಿ ಅಪೂರ್ಣವಾಗುತ್ತದೆ.

ಉದಾಹರಣೆಗೆ ಈಗಷ್ಟೇ ಕೆಲಸಕ್ಕೆ ಸೇರಿರುವ ವ್ಯಕ್ತಿ ಒಂದಷ್ಟು ವರ್ಷ ಕಳೆದ ಮೇಲೆ ಒಂದು ದೊಡ್ಡ ಕಾರು ತಗೋಬೇಕು ಅಂತ ಅಂದುಕೊಂಡರೆ ಅದು ಗೊತ್ತುಗುರಿಯಿಲ್ಲದ ಹಣಕಾಸಿನ ಗುರಿಯಾಗುತ್ತದೆ. ಯಾಕೆಂದರೆ ಇಲ್ಲಿ ನಿರ್ದಿಷ್ಟ ಅಂಕಿ ಸಂಖ್ಯೆಗಳಿಲ್ಲ.

ಗುರಿಯೇ ಇಲ್ಲ, ಹೂಡಿಕೆ ಮಾಡಲ್ಲ ಅನ್ನೋದು ತಪ್ಪು: ಈಗಷ್ಟೇ ಕೆಲಸಕ್ಕೆ ಸೇರಿರುವ ಬಹಳಷ್ಟು ಯುವಕರು ನಮಗೆ ಯಾವುದೇ ಹಣಕಾಸಿನ ಗುರಿಗಳಿಲ್ಲ. ಹಾಗಾಗಿ, ನಾವು ಹೂಡಿಕೆ ಮಾಡುವುದಿಲ್ಲ ಎಂದು ಹೇಳುವುದನ್ನು ನಾನು ನೋಡಿದ್ದೇನೆ. ಆದರೆ, ಇಂತಹ ತಪ್ಪನ್ನು ಯಾವುದೇ ಕಾರಣಕ್ಕೂ ಮಾಡಬೇಡಿ. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಗುರಿ ಆಧರಿಸಿ ಹೂಡಿಕೆ ಶುರು ಮಾಡಿ. ಎಲ್ಲರಿಗೂ ಕನಿಷ್ಠ ನಿವೃತ್ತಿಗಾದರೂ ಹಣ ಬೇಕಾಗುತ್ತದೆ. ಅದಾದರೂ ನಿಮ್ಮ ಗುರಿ ಎಂದುಕೊಂಡು ಕಾರ್ಯಪ್ರವೃತ್ತರಾಗಬೇಕು. ಬೇಗ ಹೂಡಿಕೆ ಆರಂಭಿಸಿದಾಗ ಹಣ ಬೆಳೆಯಲು ಸಮಯ ಸಿಗುತ್ತದೆ.

ನೆನಪಿಡಿ ಕೇವಲ ನಿಶ್ಚಿತ ಠೇವಣಿ (ಎಫ್‌.ಡಿ), ಅಂಚೆ ಕಚೇರಿ ಹೂಡಿಕೆಗಳಿಂದ ಸಂಪತ್ತು ಸೃಷ್ಟಿಸಿ ಹಣಕಾಸಿನ ಗುರಿಗಳನ್ನು ತಲುಪಲು ಸಾಧ್ಯವಾಗುವುದಿಲ್ಲ. ಬೆಲೆ ಏರಿಕೆಯನ್ನು ಮೀರಿ ಲಾಭಾಂಶ ಕೊಡುವ ಸಾಮರ್ಥ್ಯವಿರುವ ಮ್ಯೂಚುಯಲ್ ಫಂಡ್ ಮತ್ತು ಷೇರು ಮಾರುಕಟ್ಟೆ ಬಗ್ಗೆ ಅರಿತು ಹೂಡಿಕೆ ಮಾಡಿ. ಈ ಷೇರು ಮಾರುಕಟ್ಟೆ ಆಧಾರಿತ ಹೂಡಿಕೆಗಳಲ್ಲಿ ರಿಸ್ಕ್ ಇದ್ದರೂ ಸಹಿತ ದೀರ್ಘಾವಧಿಯಲ್ಲಿ ಹೆಚ್ಚು ಲಾಭ ಕೊಡುವ ಸಾಮರ್ಥ್ಯವೂ ಈ ಹೂಡಿಕೆಗಳಿಗೆ ಇದೆ.

ಈ ವೇಗದ ಯುಗದಲ್ಲಿ ರಾತ್ರೋರಾತ್ರಿ ಶ್ರೀಮಂತರಾಗಿಬಿಡುವ ಧಾವಂತ ಎಲ್ಲರಿಗೂ ಇದೆ. ಆದರೆ, ನೆನಪಿರಲಿ, ಸಂಪತ್ತು ಸೃಷ್ಟಿಸುವಾಗ ಸಮಯ ಬೇಕಾಗುತ್ತದೆ. ಕನಿಷ್ಠ 10ರಿಂದ 15 ವರ್ಷಗಳ ಲೆಕ್ಕಾಚಾರದಲ್ಲಿ ಷೇರು ಆಧಾರಿತ ಹೂಡಿಕೆಗಳಲ್ಲಿ ತೊಡಗಿಸಿ. ಆಗ ಸಂಪತ್ತಿನೆಡೆಗೆ ಸಾಗುತ್ತೀರಿ.

ಮ್ಯೂಚುಯಲ್ ಫಂಡ್ ಹೂಡಿಕೆ ಆರಂಭ ಹೇಗೆ?: ಹೊಸದಾಗಿ ಮ್ಯೂಚುಯಲ್ ಫಂಡ್ ಹೂಡಿಕೆ ಆರಂಭಿಸುವವರು ಉತ್ತಮ ಮ್ಯೂಚುಯಲ್ ಫಂಡ್ ಕಂಪನಿಗಳ ಇಂಡೆಕ್ಸ್ ಫಂಡ್, ಲಾರ್ಜ್ ಕ್ಯಾಪ್ ಈಕ್ವಿಟಿ ಮ್ಯೂಚುಯಲ್ ಫಂಡ್‌ಗಳನ್ನು ಆಯ್ಕೆ ಮಾಡಿಕೊಂಡು ನಿಯಮಿತವಾಗಿ ಪ್ರತಿ ತಿಂಗಳು ₹2 ಸಾವಿರ, ₹3 ಸಾವಿರ, ₹5 ಸಾವಿರ, ₹10 ಸಾವಿರ, ₹20 ಸಾವಿರ ಹೀಗೆ ನಿಮ್ಮ ಹಣಕಾಸಿನ ಸ್ಥಿತಿಗತಿಗೆ ಅನುಗುಣವಾಗಿ ಎಸ್‌ಐಪಿ (ವ್ಯವಸ್ಥಿತ ಹೂಡಿಕೆ ಯೋಜನೆ) ಹೂಡಿಕೆ ಮಾಡುತ್ತಾ ಬನ್ನಿ.

ಮಾರುಕಟ್ಟೆ ಬಿದ್ದಾಗ ಎಸ್‌ಐಪಿ ನಿಲ್ಲಿಸಬೇಡಿ. ಪ್ರತಿದಿನದ ಮಾರುಕಟ್ಟೆ ಏರಿಳಿತಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಬೇಡಿ. ಸಾಧ್ಯವಾದರೆ ನಿಮ್ಮ ಆದಾಯ ಹೆಚ್ಚಳವಾದಂತೆಲ್ಲಾ ಮ್ಯೂಚುಯಲ್ ಫಂಡ್‌ಗೆ ಹೂಡಿಕೆ ಮಾಡುವ ಮೊತ್ತವನ್ನೂ ಹೆಚ್ಚಳ ಮಾಡುತ್ತಾ ಬನ್ನಿ. ಆಗ ಖಂಡಿತವಾಗಲೂ ಸಂಪತ್ತು ಗಳಿಕೆ ಸಾಧ್ಯವಾಗುತ್ತದೆ. ಇನ್ನು ಆನ್‌ಲೈನ್ ಹೂಡಿಕೆ ಆ್ಯಪ್‌ಗಳು, ಮ್ಯೂಚುಯಲ್ ಫಂಡ್ ವೆಬ್‌ಸೈಟ್‌ಗಳು ಮತ್ತು ಮ್ಯೂಚುಯಲ್ ಫಂಡ್ ವಿತರಕರ ಮೂಲಕ ಎಸ್‌ಐಪಿ ಹೂಡಿಕೆ ಆರಂಭಿಸಬಹುದು. ವಿತರಕರ ಮೂಲಕ ಹೂಡಿಕೆ ಮಾಡಿದಾಗ ಕಮಿಷನ್ ಜಾಸ್ತಿ ಇರುತ್ತದೆ ಎನ್ನುವುದು ನಿಮಗೆ ತಿಳಿದಿರಲಿ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಅಲ್ಪ ಗಳಿಕೆ ದಾಖಲಿಸಿದ ಸೂಚ್ಯಂಕಗಳು



ಮೇ 3ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಅತ್ಯಲ್ಪ ಗಳಿಕೆ ದಾಖಲಿಸಿವೆ.

73,878 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.20ರಷ್ಟು ಜಿಗಿದಿದೆ. 22,475 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.25ರಷ್ಟು ಹೆಚ್ಚಳ ಕಂಡಿದೆ. ಹೂಡಿಕೆದಾರರು ಭಾರೀ ಪ್ರಮಾಣದಲ್ಲಿ ಲಾಭ ಗಳಿಕೆಯ ಉದ್ದೇಶಕ್ಕೆ ಷೇರುಗಳನ್ನು ಮಾರಾಟ ಮಾಡುತ್ತಿದ್ದರೂ ಸೂಚ್ಯಂಕಗಳು ಸತತ ಎರಡನೇ ವಾರದಲ್ಲಿ ಗಳಿಕೆ ದಾಖಲಿಸಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 3.13ರಷ್ಟು ಕುಸಿದಿದೆ. ಐ.ಟಿ. ಸೂಚ್ಯಂಕ ಶೇ 2.25, ರಿಯಲ್ ಎಸ್ಟೇಟ್ ಶೇ 0.66, ಎಫ್‌ಎಂಸಿಜಿ ಶೇ 0.05ರಷ್ಟು ಇಳಿಕೆಯಾಗಿದೆ.

ನಿಫ್ಟಿ ಹಣಕಾಸು ವಲಯದ ಸೂಚ್ಯಂಕ ಶೇ 2.08, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 2.01, ನಿಫ್ಟಿ ವಾಹನ ಸೂಚ್ಯಂಕ ಶೇ 1.94, ನಿಫ್ಟಿ ಎನರ್ಜಿ ಶೇ 1.51, ನಿಫ್ಟಿ ಬ್ಯಾಂಕ್ ಶೇ 1.5, ನಿಫ್ಟಿ ಫಾರ್ಮಾ ಶೇ 0.73, ಲೋಹ ವಲಯ ಶೇ 0.58 ಮತ್ತು ಅನಿಲ ಮತ್ತು ತೈಲ ಸೂಚ್ಯಂಕ ಶೇ 0.19ರಷ್ಟು ಹೆಚ್ಚಳ ಕಂಡಿವೆ.

ಗಳಿಕೆ – ಇಳಿಕೆ: ನಿಫ್ಟಿಯಲ್ಲಿ ಮಹಿಂದ್ರ ಆ್ಯಂಡ್ ಮಹಿಂದ್ರ ಶೇ 7.08, ಪವರ್ ಗ್ರಿಡ್ ಕಾರ್ಪೊರೇಷನ್ ಶೇ 6.59, ಗ್ರಾಸಿಮ್ ಇಂಡಸ್ಟ್ರೀಸ್ ಶೇ 5.74, ಕೋಲ್ ಇಂಡಿಯಾ ಶೇ 4.23, ಎಸ್‌ಬಿಐ ಶೇ 3.76, ಶ್ರೀರಾಮ್ ಫೈನಾನ್ಸ್ ಶೇ 3.39, ಬಿಪಿಸಿಎಲ್ ಶೇ 3.35 ಮತ್ತು ಐಸಿಐಸಿಐ ಬ್ಯಾಂಕ್ ಶೇ 3.15ರಷ್ಟು ಗಳಿಸಿಕೊಂಡಿವೆ.

ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 8.45, ಅಪೋಲೊ ಹಾಸ್ಪಿಟಲ್ಸ್ ಶೇ 3.84, ಕೋಟಕ್ ಮಹಿಂದ್ರ ಬ್ಯಾಂಕ್ ಶೇ 3.8, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಶೇ 3.76, ಏರ್‌ಟೆಲ್ ಶೇ 3.46, ಅದಾನಿ ಎಂಟರ್‌ ಪ್ರೈಸಸ್ ಶೇ 2.9, ಎಲ್ ಆ್ಯಂಡ್ ಟಿ ಶೇ 2.86 ಮತ್ತು ಎಲ್‌ಟಿಐ ಮೈಂಡ್‌ಟ್ರೀ ಶೇ 2.78ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ಇಂಡಿಯನ್ ಬ್ಯಾಂಕ್, ಮ್ಯಾರಿಕೋ, ಲುಪಿನ್, ಪಿಡಿಲೈಟ್ ಇಂಡಸ್ಟ್ರೀಸ್, ಜೆಎಸ್‌ಡಬ್ಲ್ಯು ಎನರ್ಜಿ, ಡಾ.ರೆಡ್ಡೀಸ್ ಲ್ಯಾಬೊರೇಟರೀಸ್, ವೋಲ್ಟಾಸ್, ಐಡಿಎಫ್‌ಸಿ, ಏಷಿಯನ್ ಪೇಂಟ್ಸ್, ಬಿಪಿಸಿಎಲ್, ಎಚ್‌ಪಿಸಿಎಲ್, ಕ್ಯಾಮ್ಸ್, ಅಬೋಟ್ ಇಂಡಿಯಾ, ಎಲ್ ಆ್ಯಂಡ್ ಟಿ, ಟಿವಿಎಸ್ ಮೋಟಾರ್ ಕಂಪನಿ, ಹೀರೊ ಮೋಟೊಕಾರ್ಪ್, ಟಾಟಾ ಪವರ್, ಟಾಟಾ ಮೋಟರ್ಸ್, ಸಿಪ್ಲಾ, ಎಬಿಬಿ ಇಂಡಿಯಾ, ಪಾಲಿಕ್ಯಾಬ್ ಇಂಡಿಯಾ, ಬ್ಯಾಂಕ್ ಆಫ್ ಇಂಡಿಯಾ, ಕಲ್ಯಾಣ್ ಜ್ಯುವೆಲರ್ಸ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ.

ಉಳಿದಂತೆ ಜಾಗತಿಕ ಮತ್ತು ದೇಶೀಯ ಬೆಳವಣಿಗೆಯು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹550
12 ಕ್ಕೆ	₹72
ಮೈಸೂರು	
100ಕ್ಕೆ	₹557

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)
₹339-495



ದ್ವಿತಳಿ (ಬಿ.ವಿ)
₹100-596

ತಾಪಮಾನ ಹೆಚ್ಚಳ: ಶೇ 80ರಷ್ಟು ಫಸಲು ನಾಶದ ಆತಂಕ

ಮೆಣಸು, ಕಾಫಿಗೆ ಬಿಸಿಲ ಬರೆ

• ಆರ್.ಜಗದೀಶ್ ಹೊರಟ್ಟಿ

ಹೆತ್ತೂರು (ಹಾಸನ ಜಿಲ್ಲೆ): ಮಲೆನಾಡು ಭಾಗವಾದ ಸಕಲೇಶಪುರ ತಾಲ್ಲೂಕಿನ ಹೆತ್ತೂರು, ಯಸಳೂರು ಹೋಬಳಿಯಲ್ಲಿ ತಾಪಮಾನ ಏರಿಕೆಯಿಂದಾಗಿ ಏಲಕ್ಕಿ, ಕಾಫಿ ತೋಟಗಳು ಒಣಗುತ್ತಿದ್ದು, ಬೆಳೆಗಾರರು ಕಂಗಾಲಾಗಿದ್ದಾರೆ.

ಮಾರ್ಚ್ ಮೊದಲ ವಾರ ಸಕಲೇಶಪುರ ತಾಲ್ಲೂಕಿನಲ್ಲಿ 32 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದ್ದರೆ, ತಿಂಗಳ ಅಂತ್ಯಕ್ಕೆ 35 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿತ್ತು. ಮಲೆನಾಡಿನಲ್ಲಿ ಸಾಮಾನ್ಯವಾಗಿ ಮಾರ್ಚ್ ಮೊದಲ ಅಥವಾ ಎರಡನೇ ವಾರದಲ್ಲಿ ಮಳೆಯಾಗುವುದು ವಾಡಿಕೆ. ಆದರೆ, ಈ ಬಾರಿ ಮೇ ತಿಂಗಳು ಆರಂಭಗೊಂಡರೂ ಮಳೆ ಬೀಳದ ಪರಿಣಾಮ ಉಷ್ಣಾಂಶ ಏರುತ್ತಿದ್ದು, ಕಾಫಿ ಬೆಳೆಗಾರರನ್ನು ಆತಂಕದ ಮಡುವಿಗೆ ದೂಡಿದೆ.

ಸಕಲೇಶಪುರ ತಾಲ್ಲೂಕಿನಲ್ಲಿ 16 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಕಾಳು ಮೆಣಸು, 20 ಸಾವಿರ ಹೆಕ್ಟೇರ್‌ನಲ್ಲಿ ಕಾಫಿ ಹಾಗೂ 2,900 ಹೆಕ್ಟೇರ್‌ನಲ್ಲಿ ಅಡಿಕೆ ಹಾಗೂ ಒಂದು ಸಾವಿರಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಏಲಕ್ಕಿ ಬೆಳೆಯಲಾಗಿದೆ. ಮಳೆ ಕೊರತೆಯಿಂದಾಗಿ ಶೇ80ರಷ್ಟು ಬೆಳೆ ನಾಶವಾಗುವ ಆತಂಕ ಎದುರಾಗಿದೆ. ಇದರಿಂದ ಒಟ್ಟಾರೆ ಇಳುವರಿಯೂ ಕುಸಿಯುವ ಸಾಧ್ಯತೆಯಿದೆ ಎಂದು ಬೆಳೆಗಾರರು ಹೇಳುತ್ತಾರೆ.

ನೀರು ಸಿಂಪಡಣೆ: ಉಷ್ಣಾಂಶ ಹೆಚ್ಚುತ್ತಿರುವ ಬೆನ್ನಲ್ಲೇ ಮುಂಬರುವ ಹಂಗಾಮಿಗೆ ಬೆಳೆ ಉಳಿಸಿಕೊಳ್ಳಲು ಬೆಳೆಗಾರರು ಹರಸಾಹಸ ಪಡುತ್ತಿದ್ದಾರೆ. ಕಾಫಿ, ಕಾಳುಮೆಣಸು ಬೆಳೆಗೆ ಕೃತಕವಾಗಿ ನೀರು ಸಿಂಪಡಿಸಬೇಕಾದ ಅನಿವಾರ್ಯಕ್ಕೆ ಸಿಲುಕಿದ್ದಾರೆ.



ಯಸಳೂರು ಹೋಬಳಿಯ ಈಚಲಬೀಡು ಗ್ರಾಮದಲ್ಲಿ ಕಾಳುಮೆಣಸು ಬಳ್ಳಿ ಒಣಗಿದೆ

ಏಪ್ರಿಲ್ ಆರಂಭದಲ್ಲಿ ಒಂದು ಸುತ್ತು ಕೃತಕವಾಗಿ ನೀರು ಸಿಂಪಡಿಸಿದ್ದ ಕಾಫಿ ಬೆಳೆಗಾರರು ಮಳೆ ಬೀಳದೇ ಇರುವುದರಿಂದ ಮತ್ತೊಂದು ಸುತ್ತು ನೀರು ಸಿಂಪಡಿಸಿದ್ದಾರೆ. ಆದರೂ, ಅತಿಯಾದ ಉಷ್ಣಾಂಶದಿಂದ ಪ್ರಯೋಜನವಾಗುತ್ತಿಲ್ಲ ಎಂದು ಬೆಳೆಗಾರರು ನೋವು ತೋಡಿಕೊಂಡಿದ್ದಾರೆ.

> **ಮುಂದಿನ ದಿನಗಳಲ್ಲಿ ಇದೇ ರೀತಿ ಉಷ್ಣಾಂಶ ಹೆಚ್ಚಾದರೆ ಕಾಫಿ ಫಸಲಿಗೆ ಪೆಟ್ಟು ಬೀಳಲಿದೆ. ಒಟ್ಟಾರೆ ಇಳುವರಿ ಕುಸಿಯಲಿದ್ದು, ಬೆಳೆಗಾರರಿಗೆ ಆರ್ಥಿಕ ಸಂಕಷ್ಟ ತಪ್ಪಿದ್ದಲ್ಲ**
> **ಎಂ.ಜೆ. ಸಚಿನ್,** ಖಜಾಂಚಿ, ಹಾಸನ ಜಿಲ್ಲಾ ಬೆಳೆಗಾರರ ಒಕ್ಕೂಟ



ಕುಡಿಯುವ ನೀರಿಗೆ ಸಮಸ್ಯೆ ಆರಂಭವಾಗಿದ್ದರಿಂದ ಮುಂಜಾಗ್ರತಾ ಕ್ರಮವಾಗಿ ಹೊಳೆ ಹಾಗೂ ಕೆರೆಗಳಲ್ಲಿ ಬೆಳೆಗಾರರು ಮೋಟಾರ್ ಅಳವಡಿಸಿ ಕಾಫಿ ಗಿಡಗಳಿಗೆ ಕೃತಕವಾಗಿ ನೀರು ಸಿಂಪಡಿಸಬಾರದು ಎಂದು ತಾಲ್ಲೂಕು ಆಡಳಿತ ಆದೇಶ ಹೊರಡಿಸಿದೆ. ಇದರಿಂದಾಗಿ ಹಲವು ಬೆಳೆಗಾರರಿಗೆ ಹೊಳೆಗಳಲ್ಲಿ ಇಟ್ಟಿದ್ದ ಮೋಟಾರ್‌ಗಳನ್ನು ತೆರವು ಮಾಡಬೇಕಾದ ಅನಿವಾರ್ಯತೆಗೆ ಎದುರಾಗಿದೆ. ಇದರಿಂದ ಕಾಫಿ ಗಿಡಗಳಿಗೆ ನೀರು ಸಿಂಪಡಿಸುವುದು ಕಷ್ಟಕರವಾಗಿದೆ ಎಂದು ಬೆಳೆಗಾರರು ಹೇಳುತ್ತಾರೆ.

ಬತ್ತಿದ ಅಂತರ್ಜಲ: ಮಳೆ ಕೈಕೊಟ್ಟಿರುವುದರಿಂದ ಹೊಳೆ, ಕೆರೆ, ಹಳ್ಳಗಳಲ್ಲಿ ಹರಿಯುತ್ತಿರುವ ನೀರಿನ ಪ್ರಮಾಣ ಕಡಿಮೆಯಾಗಿದೆ.

ಹೇಮಾವತಿ ಹಾಗೂ ಉಪ ನದಿಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇರುವ ಹಲವು ಕೆರೆಗಳು, ಕೊಳವೆಬಾವಿಗಳು ಬತ್ತಿ ಹೋಗಿವೆ. ಇದರಿಂದಾಗಿ ಕೃಷಿ ಜಮೀನಿಗೆ ನೀರಿನ ಕೊರತೆ ಕಾಡುತ್ತಿದೆ.

ಈರುಳ್ಳಿ ರಫ್ತು ನಿಷೇಧ ವಾಪಸ್: ಆಯೋಗ ಒಪ್ಪಿಗೆ

ನವದೆಹಲಿ (ಪಿಟಿಐ): ಚುನಾವಣಾ ಆಯೋಗದ ಒಪ್ಪಿಗೆ ಪಡೆದ ಬಳಿಕವೇ ಕೇಂದ್ರ ಸರ್ಕಾರವು ಈರುಳ್ಳಿ ರಫ್ತಿನ ಮೇಲೆ ವಿಧಿಸಿದ್ದ ನಿಷೇಧವನ್ನು ಹಿಂಪಡೆದಿದೆ ಎಂದು ಮೂಲಗಳು ತಿಳಿಸಿವೆ.

ದೇಶೀಯ ಮಾರುಕಟ್ಟೆಯಲ್ಲಿನ ಬೇಡಿಕೆ ಮತ್ತು ಬೆಲೆ ನಿಯಂತ್ರಿಸಲು ಕೇಂದ್ರವು ಈರುಳ್ಳಿ ರಫ್ತಿಗೆ ಕಳೆದ ವರ್ಷದ ಡಿಸೆಂಬರ್ 8ರಂದು ನಿಷೇಧ ವಿಧಿಸಿತ್ತು. ಈಗ ಲೋಕಸಭಾ ಚುನಾವಣೆಯಲ್ಲಿ ರೈತರ ಮತ ಸೆಳೆಯಲು ಈ ಆದೇಶವನ್ನು ವಾಪಸ್ ಪಡೆದಿದೆ ಎಂದು ಹೇಳಲಾಗಿತ್ತು.

ಸದ್ಯ ಚುನಾವಣಾ ನೀತಿಸಂಹಿತೆ ಜಾರಿಯಲ್ಲಿದೆ. ಹಾಗಾಗಿ, ಕೇಂದ್ರ ಹಣಕಾಸು ಸಚಿವಾಲಯವು ಆಯೋಗದ ಅನುಮತಿ ಪಡೆದ ಬಳಿಕವೇ ಈ ನಿರ್ಧಾರ ಕೈಗೊಂಡಿದೆ ಎಂದು ಮೂಲಗಳು ತಿಳಿಸಿವೆ.

ರಾಬಿ ಅವಧಿಯಲ್ಲಿ ಉತ್ಪಾದನೆಯ ಅಂದಾಜು ಹಾಗೂ ಮಾರುಕಟ್ಟೆಯಲ್ಲಿ ಬೆಲೆ ಸ್ಥಿರತೆ ಆಧಾರದ ಮೇಲೆ ರಫ್ತು ಆದೇಶವನ್ನು ಹಿಂದಕ್ಕೆ ಪಡೆಯಲಾಗಿದೆ ಎಂದು ಕೇಂದ್ರ ಹೇಳಿದೆ.

ಕನಿಷ್ಠ ರಫ್ತು ದರವನ್ನು ಪ್ರತಿ ಕೆ.ಜಿಗೆ ₹46 ನಿಗದಿಪಡಿಸಿದೆ. ಅಲ್ಲದೆ, ಶೇ 40ರಷ್ಟು ರಫ್ತು ಸುಂಕವನ್ನೂ ವಿಧಿಸಿದೆ.

ಮಹೀಂದ್ರ ಫೈನಾನ್ಸ್ ಲಾಭ ಇಳಿಕೆ

ನವದೆಹಲಿ (ಪಿಟಿಐ): ಬ್ಯಾಂಕೇತರ ಹಣಕಾಸು ಕಂಪನಿಯಾದ ಮಹೀಂದ್ರ ಆ್ಯಂಡ್ ಮಹೀಂದ್ರ ಫೈನಾನ್ಶಿಯಲ್ ಸರ್ವಿಸಸ್, 2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹619 ಕೋಟಿ ನಿವ್ವಳ ಲಾಭಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ಲಾಭದಲ್ಲಿ ಶೇ 10ರಷ್ಟು ಕಡಿಮೆಯಾಗಿದೆ. ಮಿಜೋರಾಂನ ಐಜ್ವಾಲ್‌ನಲ್ಲಿ ಇರುವ ತನ್ನ ಶಾಖೆಯಲ್ಲಿನ 2,887 ಸಾಲದ ಖಾತೆಗಳಲ್ಲಿ ವಂಚನೆ ಎಸಗಿರುವುದು ಸತ್ಯಶೋಧನೆ ವೇಳೆ ಬೆಳಕಿಗೆ ಬಂದಿದೆ. ಚಿಲ್ಲರೆ ವಾಹನ ಸಾಲ ವಿತರಣೆಯಲ್ಲಿ ₹135.9 ಕೋಟಿ ವಂಚಿಸಲಾಗಿದೆ ಎಂದು ಕಂಪನಿಯು, ಷೇರುಪೇಟೆಗೆ ತಿಳಿಸಿದೆ.

ನಕಲಿ ಕೆವೈಸಿ ಮತ್ತು ಆಸ್ತಿ ದಾಖಲೆ ಪತ್ರಗಳನ್ನು ನೀಡಿ ಸಾಲ ಪಡೆದು ವಂಚಿಸಲಾಗಿದೆ. ಈ ಅಕ್ರಮದ ಬಗ್ಗೆ ತನಿಖೆಗೆ ಕಾನೂನು ತಜ್ಞರು ಹಾಗೂ ಲೆಕ್ಕಪತ್ರ ತಜ್ಞರನ್ನು ನೇಮಿಸಲಾಗಿತ್ತು. ಈ ಶಾಖೆಯನ್ನು ಹೊರತುಪಡಿಸಿದರೆ ದೇಶದ ಉಳಿದೆಡೆ ಇರುವ ಶಾಖೆಗಳಲ್ಲಿ ಯಾವುದೇ ವಂಚನೆ ನಡೆದಿಲ್ಲ ಎಂದು ಹೇಳಿದೆ.

2022–23ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯು ₹3,057 ಕೋಟಿ ವರಮಾನಗಳಿಸಿತ್ತು. 2023–24ರಲ್ಲಿ ₹3,706 ಕೋಟಿ ಗಳಿಸಿದೆ. ಒಟ್ಟು ವರಮಾನದಲ್ಲಿ ಶೇ 21ರಷ್ಟು ಏರಿಕೆಯಾಗಿದೆ. ನಿವ್ವಳ ಬಡ್ಡಿ ವರಮಾನದಲ್ಲಿ ಶೇ 14ರಷ್ಟು ಏರಿಕೆಯಾಗಿದ್ದು, ₹1,917 ಕೋಟಿ ಗಳಿಸಿದೆ.

2023–24ರ ಪೂರ್ಣ ಆರ್ಥಿಕ ವರ್ಷದಲ್ಲಿ ತೆರಿಗೆ ನಂತರದ ನಿವ್ವಳ ಲಾಭದಲ್ಲಿ ಶೇ 11ರಷ್ಟು ಕುಸಿತವಾಗಿದೆ. ವರಮಾನದಲ್ಲಿ ಶೇ 23ರಷ್ಟು ಏರಿಕೆಯಾಗಿದ್ದು, ₹13,562 ಕೋಟಿ ಗಳಿಸಿದೆ.

ಸಂಕ್ಷಿಪ್ತ ಸುದ್ದಿ

ಅಮೆರಿಕದಿಂದ ಔಷಧ ಹಿಂಪಡೆದ ಸಿಪ್ಲಾ, ಗ್ಲೆನ್‌ಮಾರ್ಕ್

ನವದೆಹಲಿ (ಪಿಟಿಐ): ಔಷಧ ತಯಾರಿಕಾ ಸಂಸ್ಥೆಗಳಾದ ಸಿಪ್ಲಾ ಮತ್ತು ಗ್ಲೆನ್‌ಮಾರ್ಕ್ ತಮ್ಮ ಉತ್ಪನ್ನಗಳನ್ನು ಅಮೆರಿಕದ ಮಾರುಕಟ್ಟೆಯಿಂದ ಹಿಂಪಡೆದಿವೆ. ಉತ್ಪನ್ನಗಳ ತಯಾರಿಕೆಯಲ್ಲಿ ದೋಷ ಪತ್ತೆಯಾದ ಕಾರಣ ಈ ಕ್ರಮ ಕೈಗೊಂಡಿವೆ ಎಂದು ಅಮೆರಿಕದ ಆರೋಗ್ಯ ನಿಯಂತ್ರಕರು ತಿಳಿಸಿದ್ದಾರೆ.

ಅಮೆರಿಕದ ಆಹಾರ ಮತ್ತು ಔಷಧ ಮಂಡಳಿಯ (ಯುಎಸ್‌ಎಫ್‌ಡಿಎ) ವರದಿ ಪ್ರಕಾರ, ಸಿಪ್ಲಾದ ಅಧೀನ ಸಂಸ್ಥೆಯು ಇಪ್ರಾಟ್ರೊಪಿಯಂ ಬ್ರೊಮೇಡ್ ಮತ್ತು ಅಬ್ಲುಟೆರೋಲ್ ಸಲ್ಫೇಟ್ ಇನ್ಹೇಲೇಷನ್ ಸಲ್ಯೂಷನ್‌ನ 59,244 ಪ್ಯಾಕೆಟ್‌ಗಳನ್ನು ವಾಪಸ್ ಪಡೆದಿದೆ.

ಕಂಪನಿಯ ಇಂದೋರ್ ಎಸ್‌ಇಝಡ್ ಘಟಕದಲ್ಲಿ ಈ ಪ್ಯಾಕೆಟ್‌ಗಳನ್ನು ತಯಾರಿಸಲಾಗಿತ್ತು. ಈ ಔಷಧವನ್ನು ಅಸ್ತಮಾ ಸೇರಿದಂತೆ ಶ್ವಾಸಕೋಶಕ್ಕೆ ಸಂಬಂಧಿಸಿದ ಕಾಯಿಲೆಗಳ ಚಿಕಿತ್ಸೆಗೆ ಬಳಸಲಾಗುತ್ತದೆ.

ರೆಪ್ಪೂಲ್‌ನಲ್ಲಿ (ಔಷಧದ ಡಬ್ಬಿ) ಕಡಿಮೆ ಪ್ರಮಾಣದ ಔಷಧ ತುಂಬಲಾಗಿದೆ ಎಂಬ ದೂರುಗಳು ಕೇಳಿಬಂದ ಕಾರಣ ಔಷಧಗಳನ್ನು ವಾಪಸ್ ಕಳುಹಿಸಲಾಗಿದೆ ಎಂದು ಯುಎಸ್‌ಎಫ್‌ಡಿಎ ತಿಳಿಸಿದೆ.

ಗ್ಲೆನ್‌ಮಾರ್ಕ್ ಸಂಸ್ಥೆಯೂ ಅಧಿಕ ರಕ್ತದೊತ್ತಡ ಚಿಕಿತ್ಸೆಗೆ ಬಳಸುವ 3,264 ಬಾಟಲಿ ಔಷಧವನ್ನು ವಾಪಸ್ ಪಡೆದಿದೆ ಎಂದು ತಿಳಿಸಿದೆ.

'ಕೀಟನಾಶಕ ಅಂಶ: ಮಾನದಂಡ ಪಾಲನೆ'

ನವದೆಹಲಿ (ಪಿಟಿಐ): 'ಆಹಾರ ಪದಾರ್ಥಗಳಲ್ಲಿ ಎಷ್ಟು ಪ್ರಮಾಣದಲ್ಲಿ ಕೀಟನಾಶಕ ಅಂಶ ಇರಬೇಕು ಎಂಬುದಕ್ಕೆ ಸಂಬಂಧಿಸಿದಂತೆ ಭಾರತವು ಕಠಿಣ ನಿಯಮಾವಳಿಗಳನ್ನು ರೂಪಿಸಿದ್ದು, ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದೆ' ಎಂದು ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಸ್ಪಷ್ಟಪಡಿಸಿದೆ.

ಆಹಾರದ ಬೆಳೆ ಬೆಳೆಯುವ ವೇಳೆ ಕೀಟನಾಶಕ ಸಿಂಪಡಿಸಲಾಗುತ್ತದೆ. ಈ ವೇಳೆ ಪದಾರ್ಥಗಳಲ್ಲಿ ಕೀಟನಾಶಕ ಅಂಶ ಬೆರೆತು ಹೋಗುತ್ತದೆ.

'ಮಸಾಲೆ ಪದಾರ್ಥಗಳಲ್ಲಿ ಇರಬೇಕಾದ ಕೀಟನಾಶಕ ಅವಶೇಷಗಳ ಪ್ರಮಾಣದ ಮಿತಿಯನ್ನು ಅಂತರರಾಷ್ಟ್ರೀಯ ಮಾನದಂಡಕ್ಕಿಂತಲೂ 10 ಪಟ್ಟು ಹೆಚ್ಚಿಸಿದೆ ಎಂಬ ವರದಿಗಳು ಕೆಲವು ಮಾಧ್ಯಮಗಳಲ್ಲಿ ಪ್ರಕಟವಾಗಿವೆ. ಇವು ಸತ್ಯಕ್ಕೆ ದೂರವಾಗಿವೆ' ಎಂದು ಪ್ರಾಧಿಕಾರ ಹೇಳಿದೆ.

ಕೀಟನಾಶಕ ಅಂಶಕ್ಕೆ ನಿಗದಿಪಡಿಸಿರುವ ಮಿತಿಯನ್ನು ಎಂದಿಗೂ ಮೀರಿಲ್ಲ. ಅಂತರರಾಷ್ಟ್ರೀಯ ಮಾನದಂಡವನ್ನು ಪಾಲಿಸಲಾಗುತ್ತಿದೆ ಎಂದು ಹೇಳಿದೆ.

ಕಾನೂನು– ಸುವ್ಯವಸ್ಥೆ ಸಮರ್ಪಕವಾಗಿದೆ: ಟ್ರೂಡೊ

ಟೊರಾಂಟೊ (ಪಿಟಿಐ): ಕೆನಡಾದಲ್ಲಿ ಬಲಿಷ್ಠ ಮತ್ತು ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ ಇದ್ದು, ಕಾನೂನು–ಸುವ್ಯವಸ್ಥೆ ಸಮರ್ಪಕವಾಗಿದೆ. ಪ್ರಜೆಗಳ ರಕ್ಷಣೆಗೆ ರಾಷ್ಟ್ರವು ಬದ್ಧವಾಗಿದೆ ಎಂದು ಪ್ರಧಾನಿ ಜಸ್ಟಿನ್ ಟ್ರೂಡೊ ಹೇಳಿದ್ದಾರೆ.

ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಭಾರತೀಯರನ್ನು ಬಂಧಿಸಿದ ಬೆನ್ನಲ್ಲೇ ಈ ಹೇಳಿಕೆ ನೀಡಿದ್ದಾರೆ.

ನಿಜ್ಜರ್ ಅವರನ್ನು ಕೊಲಂಬಿಯಾದಲ್ಲಿ 2023ರ ಜೂನ್ 18ರಂದು ಗುಂಡಿಕ್ಕಿ ಹತ್ಯೆ ಮಾಡಲಾಗಿತ್ತು.

'ಪ್ರಕರಣದ ತನಿಖೆಯು ಪ್ರಗತಿಯಲ್ಲಿದೆ. ತನಿಖೆಯು ಮೂವರ ಬಂಧನಕ್ಕೇ ಸೀಮಿತವಾಗಿಲ್ಲ' ಎಂದು ಟ್ರೂಡೊ ಹೇಳಿದ್ದಾರೆ ಎಂದು ಇಲ್ಲಿನ ಮಾಧ್ಯಮವೊಂದು ವರದಿ ಮಾಡಿದೆ.

'ನಿಜ್ಜರ್ ಹತ್ಯೆ ನಂತರ ಕೆನಡಾದಲ್ಲಿರುವ ಸಿಖ್ ಸಮುದಾಯದ ಹಲವರು ಭೀತಿಯಲ್ಲಿದ್ದರು. ಕೆನಡಾದ ಪ್ರತಿಯೊಬ್ಬರಿಗೂ ಸುರಕ್ಷಿತ, ಬೆದರಿಕೆ ಮುಕ್ತ ಹಾಗೂ ತಾರತಮ್ಯ ರಹಿತವಾಗಿ ಬದುಕುವ ಹಕ್ಕಿದೆ' ಎಂದು ಟ್ರೂಡೊ ಹೇಳಿದ್ದಾರೆ ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಭಯೋತ್ಪಾದಕ ದಾಳಿ: ಯೋಧ ಹುತಾತ್ಮ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯಲ್ಲಿ ಭಾರತೀಯ ವಾಯುಪಡೆಯ (ಐಎಎಫ್) ಬೆಂಗಾವಲು ವಾಹನದ ಮೇಲೆ ಶನಿವಾರ ಸಂಜೆ ಭಯೋತ್ಪಾದಕರು ನಡೆಸಿದ ದಾಳಿಯಲ್ಲಿ ಯೋಧರೊಬ್ಬರು ಹುತಾತ್ಮರಾಗಿದ್ದು, ನಾಲ್ವರು ಗಾಯಗೊಂಡಿದ್ದಾರೆ.



ಸುರನಕೋಟ ಪ್ರದೇಶದ ಶಾಹಸಿತಾರ್ ಬಳಿ ಈ ದಾಳಿ ನಡೆದಿದ್ದು, ವಾಯುಪಡೆಯ ಐವರು ಸಿಬ್ಬಂದಿ ಗಾಯಗೊಂಡಿದ್ದರು. ಮಿಲಿಟರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವಿಕ್ಕಿ ಪಹಾಡೆ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ದಾಳಿಯ ಹಿಂದಿರುವ ಭಯೋತ್ಪಾದಕರನ್ನು ಪತ್ತೆ ಹಚ್ಚಲು ಸೇನೆ ಮತ್ತು ಪೊಲೀಸರು ಶನಿವಾರದಿಂದಲೇ ಜಂಟಿ ಕಾರ್ಯಾಚರಣೆ ಕೈಗೊಂಡಿದ್ದು, ಭಾನುವಾರವೂ ಮುಂದುವರಿದಿದೆ ಎಂದು ಅವರು ಹೇಳಿದ್ದಾರೆ.

ಭಯೋತ್ಪಾದಕರು ದಾಳಿ ನಡೆಸಿದ ನಂತರ ಕಾಡಿನೊಳಗೆ ಪರಾರಿಯಾಗಿದ್ದು ಕಾರ್ಯಾಚರಣೆ ನಡೆದಿದೆ ಎಂದು ಮಾಹಿತಿ ನೀಡಿದ್ದಾರೆ.

ಛತ್ತೀಸಗಢ: 35 ನಕ್ಸಲರ ಶರಣಾಗತಿ

ದಾಂತೇವಾಡ (ಪಿಟಿಐ): ಛತ್ತೀಸಗಢದ ದಾಂತೇವಾಡ ಜಿಲ್ಲೆಯಲ್ಲಿ ಭಾನುವಾರ ಒಟ್ಟು 35 ನಕ್ಸಲರು ಶರಣಾಗಿದ್ದಾರೆ. ಶರಣಾದ ನಕ್ಸಲರ ಪೈಕಿ ಮೂವರ ಪತ್ತೆಗೆ ಸುಳಿವು ನೀಡಿದವರಿಗೆ ತಲಾ ₹3 ಲಕ್ಷ ಹಾಗೂ ಮಹಿಳೆಯೊಬ್ಬರ ಬಗ್ಗೆ ಸುಳಿವು ನೀಡಿದವರಿಗೆ ₹1 ಲಕ್ಷ ಬಹುಮಾನ ಘೋಷಿಸಲಾಗಿತ್ತು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಶರಣಾದವರಲ್ಲಿ 16 ವರ್ಷದ ಬಾಲಕಿ ಮತ್ತು 18 ವರ್ಷದ ಬಾಲಕನೂ ಸೇರಿದ್ದಾರೆ. ಶರಣಾದ ನಕ್ಸಲರಿಗೆ ಸರ್ಕಾರದ ಶರಣಾಗತಿ ಮತ್ತು ಪುನರ್ ವಸತಿ ನೀತಿಯ ಪ್ರಕಾರ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ತಿಳಿಸಿದ್ದಾರೆ.

₹2.50 ಕೋಟಿ ಅನಧಿಕೃತ ಸಾಗಣೆ: ಕೊರಿಯಾ ಪ್ರಜೆ ಸೆರೆ

ನವದೆಹಲಿ (ಪಿಟಿಐ): 3 ಲಕ್ಷ ಅಮೆರಿಕನ್ ಡಾಲರ್ (ಸುಮಾರು ₹2.50 ಕೋಟಿ) ಹಣವನ್ನು ಅನಧಿಕೃತವಾಗಿ ಸಾಗಿಸುತ್ತಿದ್ದ ಆರೋಪದ ಮೇಲೆ ಕೊರಿಯಾದ ಪ್ರಜೆಯೊಬ್ಬರನ್ನು ದೆಹಲಿ ವಿಮಾನ ನಿಲ್ದಾಣದಲ್ಲಿ ಭಾನುವಾರ ಬಂಧಿಸಲಾಗಿದೆ.

ಹಣವನ್ನು ಏತಕ್ಕೆ ಸಾಗಿಸಲಾಗುತ್ತಿದೆ ಎಂಬ ಬಗ್ಗೆ ಸರಿಯಾದ ಕಾರಣ ಅಥವಾ ದಾಖಲೆಯನ್ನು ಒದಗಿಸದ ಕಾರಣ ಪ್ರಯಾಣಿಕನನ್ನು ಬಂಧಿಸಲಾಗಿದೆ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣದ ವಿಚಾರಣೆಯಲ್ಲಿ ಭಾಗೀದಾರಿಕೆಯೂ ಇರಬೇಕು: ಸುಪ್ರೀಂ ಕೋರ್ಟ್ ಪ್ರತಿಪಾದನೆ

‘ಕೋರ್ಟ್ ಟೇಪ್ ರೆಕಾರ್ಡರ್ ಅಲ್ಲ’

ನವದೆಹಲಿ(ಪಿಟಿಐ): ಯಾವುದೇ ಪ್ರಕರಣದ ವಿಚಾರಣೆಯಲ್ಲಿ ನ್ಯಾಯಾಲಯಗಳ ಭಾಗೀದಾರಿಕೆ ಇರಬೇಕು. ಸಾಕ್ಷಿಗಳು ಏನೇ ಹೇಳಿಕೆ ನೀಡಿದರೂ ಅದನ್ನು ದಾಖಲಿಸಿಕೊಳ್ಳುವ ‘ಟೇಪ್ ರೆಕಾರ್ಡರ್’ನಂತೆ ವರ್ತಿಸಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.



ಕ್ರಿಮಿನಲ್ ಮೊಕದ್ದಮೆಗಳಲ್ಲಿ ಸಲ್ಲಿಸಲಾಗುವ ಮೇಲ್ಮನವಿ ವಿಚಾರಣೆ ವೇಳೆ, ಸರ್ಕಾರಿ ವಕೀಲರು ಪ್ರತಿಕೂಲ ಸಾಕ್ಷ್ಯ ಹೇಳುವ ಸಾಕ್ಷಿಗಳನ್ನು ಅರ್ಥಪೂರ್ಣ ಹಾಗೂ ಪರಿಣಾಮಕಾರಿಯಾಗಿ ಪಾಟೀಸವಾಲಿಗೆ ಒಳಪಡಿಸುತ್ತಿಲ್ಲ ಎಂದೂ ಸುಪ್ರೀಂ ಕೋರ್ಟ್ ವಿಷಾದಿಸಿದೆ.

1995ರಲ್ಲಿ ಪತ್ನಿಯನ್ನು ಕೊಲೆ ಮಾಡಿದ್ದ ವ್ಯಕ್ತಿಗೆ ಜೀವಾವಧಿ ಶಿಕ್ಷೆ ವಿಧಿಸಿದ್ದನ್ನು ಎತ್ತಿ ಹಿಡಿದು ದೆಹಲಿ ಹೈಕೋರ್ಟ್ ತೀರ್ಪು ನೀಡಿತ್ತು. ಹೈಕೋರ್ಟ್ ಆದೇಶವನ್ನು ಎತ್ತಿ ಹಿಡಿದು ತೀರ್ಪು ಪ್ರಕಟಿಸಿದ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ಈ ಕುರಿತ ಅರ್ಜಿ ವಿಚಾರಣೆ ನಡೆಸಿತು.

ನ್ಯಾಯದಾನ ಪ್ರಕ್ರಿಯೆಯ ಭಾಗವಾಗಿ, ನ್ಯಾಯಾಧೀಶರು ಮೇಲ್ವಿಚಾರಣೆ ಮಾಡಬೇಕು. ಒಂದು ವೇಳೆ ಸರ್ಕಾರಿ ವಕೀಲರು ಉದಾಸೀನ ತೋರಿದ ಸಂದರ್ಭಗಳಲ್ಲಿ ನ್ಯಾಯಾಲಯವೇ ವಿಚಾರಣೆ ಪ್ರಕ್ರಿಯೆಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡು, ಸತ್ಯ ಹೊರಬರುವಂತೆ ನೋಡಿಕೊಳ್ಳಬೇಕು ಎಂದು ನ್ಯಾಯಪೀಠ ಹೇಳಿದೆ.

ಕ್ರಿಮಿನಲ್ ನ್ಯಾಯ ವ್ಯವಸ್ಥೆಗೆ ಪ್ರಾಸಿಕ್ಯೂಷನ್ ಮತ್ತು ನ್ಯಾಯಾಂಗದ ನಡುವಿನ ಸಂಬಂಧವೇ ಆಧಾರ. ಹೀಗಾಗಿ, ಸರ್ಕಾರಿ ವಕೀಲರ ನೇಮಕಾತಿಯಂತಹ ವಿಷಯದಲ್ಲಿ ಒಂದಿನಿತೂ ರಾಜಕೀಯ ಬೆರೆಸಬಾರದು ಎಂದು ಸುಪ್ರೀಂ ಕೋರ್ಟ್ ಹಲವಾರು ಸಂದರ್ಭಗಳಲ್ಲಿ ಸ್ಪಷ್ಟಪಡಿಸಿದೆ ಎಂದೂ ನ್ಯಾಯಪೀಠ ಹೇಳಿದೆ.

ನ್ಯಾಯಪೀಠ ಹೇಳಿದ್ದೇನು?


- ಪ್ರತಿಕೂಲ ಸಾಕ್ಷ್ಯ ನುಡಿಯುವ ಸಾಕ್ಷಿಗಳನ್ನು ವಿಸ್ತೃತವಾದ ಪಾಟೀಸವಾಲಿಗೆ ಒಳಪಡಿಸಿ, ಸತ್ಯವನ್ನು ನಿರೂಪಿಸುವುದು ಸರ್ಕಾರಿ ವಕೀಲರ ಕರ್ತವ್ಯ
- ಪ್ರಾಸಿಕ್ಯೂಷನ್‌ನಿಂದಾಗುವ ಕರ್ತವ್ಯಲೋಪ ಹಾಗೂ ಅದರಿಂದ ಎದುರಾಗಬಹುದಾದ ಅಪಾಯಗಳ ಬಗ್ಗೆ ನ್ಯಾಯಾಲಯಗಳಿಗೆ ಅರಿವು ಇರಬೇಕು
- ಪ್ರಕರಣಕ್ಕೆ ಸಂಬಂಧಿಸಿದ ಅಗತ್ಯ ಮಾಹಿತಿಯನ್ನು ಸಾಕ್ಷಿಗಳಿಂದ ಬಯಲಿಗೆಳೆಯುವ ಕೆಲಸವನ್ನು ನ್ಯಾಯಾಧೀಶರು ಮಾಡಬೇಕು
- ಒಬ್ಬ ವ್ಯಕ್ತಿ ವಿರುದ್ಧ ಎಸಗುವ ಅಪರಾಧವು ಇಡೀ ಸಮಾಜದ ವಿರುದ್ಧದ ಅಪರಾಧವೇ ಆಗುತ್ತದೆ. ಹೀಗಾಗಿ, ಸರ್ಕಾರಿ ವಕೀಲರಾಗಲಿ, ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರಾಗಲಿ ಪ್ರಕರಣ ಕುರಿತು ಅಸಡ್ಡೆ ತೋರಬಾರದು
- ಸರ್ಕಾರಿ ವಕೀಲನಾಗಿ ನೇಮಕಗೊಳ್ಳುವ ವ್ಯಕ್ತಿ ಹುದ್ದೆಗೆ ತಕ್ಕವನಾಗಿರುವ ಜೊತೆಗೆ ಉತ್ತಮ ನಡತೆ ಹಾಗೂ ಪ್ರಾಮಾಣಿಕತೆ ಹೊಂದಿದವನಾಗಿರಬೇಕು

ಪೊಲೀಸರ ಸಮನ್ಸ್ ನಿರ್ಲಕ್ಷಿಸಿ: ರಾಜ್ಯಪಾಲ ಬೋಸ್ ಸೂಚನೆ

ಕೋಲ್ಕತ್ತ (ಪಿಟಿಐ): ಮಹಿಳಾ ನೌಕರರೊಬ್ಬರು ದಾಖಲಿಸಿರುವ ಲೈಂಗಿಕ ಕಿರುಕುಳ ದೂರಿಗೆ ಸಂಬಂಧಿಸಿದಂತೆ ಕೋಲ್ಕತ್ತ ಪೊಲೀಸರಿಂದ ಯಾವುದೇ ಸಮನ್ಸ್ ಬಂದರೂ ನಿರ್ಲಕ್ಷಿಸುವಂತೆ ರಾಜಭವನದ ಸಿಬ್ಬಂದಿಗೆ ಪಶ್ಚಿಮ ಬಂಗಾಳದ ರಾಜ್ಯಪಾಲ ಸಿ.ವಿ.ಆನಂದ ಬೋಸ್ ಭಾನುವಾರ ಸೂಚನೆ ನೀಡಿದ್ದಾರೆ.

ರಾಜ್ಯಪಾಲರ ವಿರುದ್ಧ ಮಹಿಳೆ ಮಾಡಿರುವ ಆರೋಪದ ಬಗ್ಗೆ ತನಿಖೆ ನಡೆಸಲು ಕೋಲ್ಕತ್ತ ಪೊಲೀಸರು ತನಿಖಾ ತಂಡ ರಚಿಸಿದ ಬೆನ್ನಲ್ಲೇ ರಾಜ್ಯಪಾಲರಿಂದ ಈ ಕುರಿತು ನಿರ್ದೇಶನ ಬಂದಿದೆ.

ಭಾರತ ಸಂವಿಧಾನದ 361(2) ಮತ್ತು (3)ನೇ ವಿಧಿಯು, ರಾಜ್ಯಪಾಲರ ವಿರುದ್ಧ ಪೊಲೀಸರು ವಿಚಾರಣೆ ಅಥವಾ ತನಿಖಾ ಪ್ರಕ್ರಿಯೆಗಳನ್ನು ನಡೆಸುವಂತಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.



ಅಲ್ಲದೆ ರಾಷ್ಟ್ರಪತಿ ಅಥವಾ ರಾಜ್ಯಪಾಲರು ಅಧಿಕಾರದಲ್ಲಿ ಇರುವಾಗ ಅವರ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತಿಲ್ಲ. ಹಾಗೆಯೇ ಅವರು ಅಧಿಕಾರದಲ್ಲಿರುವಾಗ ಯಾವುದೇ ನ್ಯಾಯಾಲಯವು ಅವರ ವಿರುದ್ಧ ಬಂಧನ ಅಥವಾ ಜೈಲಿಗೆ ಕಳುಹಿಸಲು ಕ್ರಮ ತೆಗೆದುಕೊಳ್ಳುವಂತಿಲ್ಲ ಎಂದು ಅವರು ಪ್ರತಿಪಾದಿಸಿದ್ದಾರೆ.

ರಾಜ್ಯಪಾಲರಿಗೆ ಇರುವ ವಿನಾಯಿತಿ ಗಮನದಲ್ಲಿ ಇಟ್ಟುಕೊಂಡು ಪೊಲೀಸರು ವಿಚಾರಣೆ ನಡೆಸಿ, ಸಾಕ್ಷ್ಯ ಸಂಗ್ರಹಿಸಬಹುದೇ ಎಂಬ ಪ್ರಶ್ನೆ ಉದ್ಭವಿಸುತ್ತದೆ ಎಂದು ಅವರು ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.



ಪ್ರವಾಹ ಅತಿಯಾದ ಮಳೆಯಿಂದಾಗಿ ಬ್ರೆಜಿಲ್‌ನ ರಿಯೊ ಗ್ರಾಂಡ್ ಡೊ ಸುಲ್ ರಾಜ್ಯದ ಪಾರ್ಟೊ ಅಲೆಗ್ರೆ ನಗರದ ಬಹುತೇಕ ಪ್ರದೇಶವು ಜಲಾವೃತಗೊಂಡಿತ್ತು

ಎಎಫ್‌ಪಿ ಚಿತ್ರ

ಬಿಜೆಪಿಯಿಂದ ಪಿತೂರಿ: ಟಿಎಂಸಿ ಆರೋಪ

ನವದೆಹಲಿ(ಪಿಟಿಐ): ‘ಸಂದೇಶ್‌ಖಾಲಿ ಪ್ರಕರಣವು ಬಿಜೆಪಿ ನಾಯಕರೇ ರೂಪಿಸಿದ್ದ ಪಿತೂರಿ. ಪಕ್ಷದ ನಾಯಕರ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಮಾಡುವಂತೆ ಅಲ್ಲಿನ ಮಹಿಳೆಯರಿಗೆ ಹೇಳಿಕೊಡಲಾಗಿತ್ತು’ ಎಂದು ಬಿಜೆಪಿ ವಿರುದ್ಧ ಟಿಎಂಸಿ ಮುಖಂಡರು ಭಾನುವಾರ ಆರೋಪಿಸಿದ್ದಾರೆ.



ಟಿಎಂಸಿ ಮುಖಂಡರಾದ ಶಶಿ ಪಂಜಾ, ಸಾಗರಿಕಾ ಘೋಷ್ ಹಾಗೂ ಸಾಕೇತ್ ಗೋಖಲೆ ಅವರು ಜಂಟಿ ಸುದ್ದಿಗೋಷ್ಠಿ ನಡೆಸಿ, ‘ಬಿಜೆಪಿ ಪಶ್ಚಿಮ ಬಂಗಾಳ ವಿರೋಧಿಯಾಗಿದೆ’ ಎಂದು ಟೀಕಿಸಿದರು.

ಬಿಜೆಪಿ ಮಂಡಲ ಅಧ್ಯಕ್ಷ ಎನ್ನಲಾದ ಗಂಗಾಧರ ಕಯಾಲ್ ಎಂಬ ವ್ಯಕ್ತಿ, ಸಂದೇಶ್‌ಖಾಲಿ ಘಟನೆಗಳ ಹಿಂದೆ ಸುವೇಂದು ಅಧಿಕಾರಿ ಕೈವಾಡ ಇದೆ ಎಂದು ಹೇಳಿದ್ದಾರೆ ಎನ್ನಲಾದ ವಿಡಿಯೊವನ್ನು ಪ್ರದರ್ಶಿಸಿದರು.

‘ಸಂದೇಶ್‌ಖಾಲಿ ವಿಚಾರದಲ್ಲಿ ಬಿಜೆಪಿ ದೊಡ್ಡ ಪಿತೂರಿ ರೂಪಿಸಿದೆ. ಸಂದೇಶ್‌ಖಾಲಿಯಲ್ಲಿ ಯಾವುದೇ ಅತ್ಯಾಚಾರ ನಡೆದಿಲ್ಲ ಎಂಬುದು ಈ ವಿಡಿಯೊದಿಂದ ಗೊತ್ತಾಗುತ್ತದೆ. ಆದರೆ, ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಲು ಅನುಕೂಲವಾಗುವಂತಹ ಪರಿಸ್ಥಿತಿ ನಿರ್ಮಾಣ ಮಾಡುವುದು ಬಿಜೆಪಿ ನಾಯಕರು ಬಯಸಿದ್ದರು’ ಎಂದು ಸಾಗರಿಕಾ ಘೋಷ್ ಹೇಳಿದರು.

‘ಪ್ರಧಾನಿ ಮೋದಿ ಅವರು ಪದೇ ಪದೇ ಸಂದೇಶ್‌ಖಾಲಿ ಕುರಿತು ಮಾತನಾಡುತ್ತಿದ್ದಾರೆ. ಆದರೆ, ಪ್ರಜ್ವಲ್ ರೇವಣ್ಣ ವಿಚಾರದಲ್ಲಿ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಬ್ರಿಜ್‌ಭೂಷಣ್ ಸಿಂಗ್ ಪುತ್ರನಿಗೆ ಟಿಕೆಟ್ ನೀಡಿದ್ದಾರೆ. ಒಟ್ಟಿನಲ್ಲಿ ಪಶ್ಚಿಮ ಬಂಗಾಳ ಹೆಸರು ಕೆಡಿಸುವುದು ಅವರ ಉದ್ದೇಶವಾಗಿದೆ’ ಎಂದು ಹೇಳಿದ್ದಾರೆ.

ಸಿಬಿಐಗೆ ಕಯಾಲ್ ದೂರು ನವದೆಹಲಿ(ಪಿಟಿಐ): ಸಂದೇಶ್‌ಖಾಲಿ ಕುರಿತು ತಾನು ಮಾತನಾಡಿರುವುದು ಎನ್ನಲಾದ ವಿಡಿಯೊ ಕುರಿತು ಬಿಜೆಪಿ ಮಂಡಲ ಅಧ್ಯಕ್ಷ ಗಂಗಾಧರ ಕಯಾಲ್ ಅವರು ಸಿಬಿಐಗೆ ದೂರು ನೀಡಿದ್ದಾರೆ.

‘ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊ ದೃಢಪಡಿಸದ ಯೂಟ್ಯೂಬ್ ಚಾನೆಲ್‌ವೊಂದರಿಂದ ಅಪ್‌ಲೋಡ್ ಮಾಡಲಾಗಿದೆ. ವಿಲಿಯನ್ಸ್ ಎಂಬ ವ್ಯಕ್ತಿ ವಿಡಿಯೊ ಅಪ್‌ಲೋಡ್ ಮಾಡಿದ್ದಾರೆ’ ಎಂದು ಸಿಬಿಐಗೆ ಸಲ್ಲಿಸಿರುವ ಲಿಖಿತ ದೂರಿನಲ್ಲಿ ತಿಳಿಸಿದ್ದಾರೆ.

‘ಮೊಸಳೆ ಕಣ್ಣೀರು ಸುರಿಸುವುದನ್ನು ಮೋದಿ ನಿಲ್ಲಿಸಲಿ’

ಬೋಲ್‌ಪುರ (ಪಶ್ಚಿಮ ಬಂಗಾಳ) (ಪಿಟಿಐ): ಸಂದೇಶ್‌ಖಾಲಿ ಘಟನೆ ಕುರಿತಂತೆ ಹಣ ಬಲದಿಂದ ಬಿಜೆಪಿಯು ಸುಳ್ಳು ಮಾಹಿತಿ ಹಬ್ಬಿಸಿತ್ತು ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಭಾನುವಾರ ಆರೋಪಿಸಿದ್ದಾರೆ.

ಬೋಲ್‌ಪುರದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ಬಿಜೆಪಿಯೇ ಈ ಸಂಚು ರೂಪಿಸಿರುವ ಸಂಗತಿ ಇತ್ತೀಚೆಗೆ ನಡೆದ ಮಾರುವೇಷದ ಕಾರ್ಯಾಚರಣೆಯಲ್ಲಿ ಬಹಿರಂಗಗೊಂಡಿದೆ. ಹೀಗಾಗಿ, ಈ ವಿಚಾರವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಮೊಸಳೆ ಕಣ್ಣೀರು ಸುರಿಸುವುದನ್ನು ನಿಲ್ಲಿಸಬೇಕು’ ಎಂದು ಆಗ್ರಹಿಸಿದ್ದಾರೆ.

‘ಬಿಜೆಪಿ ನಾಯಕರು ಸುಳ್ಳುಗಳನ್ನು ಸೃಷ್ಟಿಸಿದ್ದು, ಸುಳ್ಳುಗಳನ್ನು ಹಬ್ಬಿಸುವುದಕ್ಕೆ ಕೆಲವರಿಗೆ ಹಣ ನೀಡುವ ಮೂಲಕ ಪಿತೂರಿ ಮಾಡಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು. ‘ಸಂದೇಶ್‌ಖಾಲಿ ಕುರಿತಂತೆ ಸುಳ್ಳು ಸುದ್ದಿಗಳನ್ನು ಹಬ್ಬಿಸಲು ಬಿಜೆಪಿ ಇಷ್ಟೊಂದು ಕೀಳು ಮಟ್ಟಕ್ಕೆ ಇಳಿಯುತ್ತದೆ ಎಂದು ಯಾರಾದರೂ ಊಹಿಸಿದ್ದೀರಾ’ ಎಂದು ಪ್ರಶ್ನಿಸಿದರು.



‘ಇಂತಹ ಘೋರ ಆರೋಪಗಳನ್ನು ಮಾಡುವ ಮೂಲಕ ಪಶ್ಚಿಮ ಬಂಗಾಳದ ತಾಯಂದಿರ ಗೌರವಕ್ಕೆ ಧಕ್ಕೆ ತರಬೇಡಿ. ನಮ್ಮ ಪಕ್ಷದ ವಿರುದ್ಧ ಸುಳ್ಳು ಆರೋಪಗಳನ್ನು ಹೊರಿಸುವುದಕ್ಕೆ ರಾಜ್ಯದ ಮಹಿಳೆಯರಿಗೆ ಹಣ ನೀಡುವ ಮೂಲಕ ಅವರಿಗೆ ಅಗೌರವ ತೋರಬೇಡಿ’ ಎಂದೂ ಹೇಳಿದರು.

ಸಂದೇಶ್‌ಖಾಲಿ ಬಿಜೆಪಿ ಮಂಡಲ ಘಟಕದ ಅಧ್ಯಕ್ಷ ಎಂದು ಹೇಳಲಾಗುವ ವ್ಯಕ್ತಿಯೊಬ್ಬರು, ‘ಈ ಸಂಚಿನ ಹಿಂದೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಕೈವಾಡ ಇದೆ’ ಎಂದು ಹೇಳುತ್ತಿರುವ ವಿಡಿಯೊವೊಂದನ್ನು ಟಿಎಂಸಿ, ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆ ಮಾಡಿತ್ತು.

ಗ್ರಾಮಸ್ಥರ ರಕ್ಷಣೆಗೆ ಇಳಿದ ತರುಣ ‘ಸ್ವಯಂ ಸೇವಕರು’

ಮಣಿಪುರ ಸಂಘರ್ಷ

ಇಂಫಾಲ್ / ಚುರಚಾಂದಪುರ (ಪಿಟಿಐ): ಮಣಿಪುರದಲ್ಲಿ ಮೈತೇಯಿ ಮತ್ತು ಕುಕಿಗಳ ಸಂಘರ್ಷದಿಂದ ಬಸವಳಿದಿರುವ ಇಂಫಾಲ್ ಕಣಿವೆಯ ಕೌತ್ರುಕ್ ಗ್ರಾಮದಲ್ಲಿ ಶಸ್ತ್ರಸಜ್ಜಿತ ಯುವಕರ ಗುಂಪುಗಳು ನಿತ್ಯ ಬೆಳಿಗ್ಗೆ ಮತ್ತು ರಾತ್ರಿ ಗಸ್ತು ತಿರುಗುವ ಕಾರ್ಯದಲ್ಲಿ ತೊಡಗಿವೆ.

ಕಾದಾಡುತ್ತಿರುವ ಬಣಗಳಿಂದ ತಮ್ಮ ಗ್ರಾಮದ ನಿವಾಸಿಗಳನ್ನು ರಕ್ಷಿಸುವ ಉದ್ದೇಶವನ್ನು ಈ ಯುವಕರ ಪಡೆ ಹೊಂದಿದೆ. ಈ ಗುಂಪಿನಲ್ಲಿರುವ ಬಹುತೇಕರು 20ರಿಂದ 30 ವರ್ಷದ ತರುಣರು. ಇವರು ತಮ್ಮನ್ನು ಸ್ವಯಂ ಸೇವಕರು ಎಂದು ಗುರುತಿಸಿಕೊಂಡಿದ್ದಾರೆ.

ರಾಜ್ಯದ ಹಲವು ಹಳ್ಳಿಗಳಲ್ಲಿ ‘ಗ್ರಾಮ ಸ್ವಯಂಸೇವಕರು’, ‘ಗ್ರಾಮ ರಕ್ಷಣಾ ಪಡೆ’ ಮತ್ತು ‘ಗ್ರಾಮ ಸಂರಕ್ಷಣಾ ಪಡೆ’ ಎಂಬ ಹೆಸರಿನ ಸ್ವಯಂ ಸೇವಕರ ಗುಂಪುಗಳು ಕಾರ್ಯ ನಿರ್ವಹಿಸುತ್ತಿವೆ. ಅಂತಹ ಹಳ್ಳಿಗಳ ಪೈಕಿ ಕೌತ್ರುಕ್ ಸಹ ಒಂದು.

ಈ ಗುಂಪುಗಳು ಯಾವುದೇ ಭದ್ರತಾ ಸಂಸ್ಥೆ ಅಥವಾ ಸಶಸ್ತ್ರ ಪಡೆಗಳ ಜತೆಗೆ ಸಂಬಂಧ ಹೊಂದಿಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಈ ಗುಂಪಿನ ಸದಸ್ಯರು ಯುದ್ಧ ತಂತ್ರದ ತರಬೇತಿ ಪಡೆದಿದ್ದು, ಜನಾಂಗೀಯ ಹಿಂಸಾಚಾರದಿಂದ ಗ್ರಾಮದ ಜನರನ್ನು ರಕ್ಷಿಸಲು ಪ್ರತಿಜ್ಞೆ ಮಾಡಿದ್ದಾರೆ. ಸಮವಸ್ತ್ರದಲ್ಲಿರುವ ಅವರು ಮರಳಿನ ಚೀಲಗಳಿಂದ ಬಂಕರ್‌ಗಳನ್ನು ನಿರ್ಮಿಸಿಕೊಂಡಿದ್ದಾರೆ. ಅವರು ಲಾಠಿ ಮತ್ತು ರೈಫಲ್‌ಗಳು ಸೇರಿದಂತೆ ಶಸ್ತ್ರಾಸ್ತ್ರಗಳೊಂದಿಗೆ ಗಸ್ತು ತಿರುಗುವುದನ್ನು ಕಾಣಬಹುದಾಗಿದೆ. ಅವರ ಬಳಿ ಕೆಲ ದೇಶೀಯ ನಿರ್ಮಿತ ಶಸ್ತ್ರಾಸ್ತ್ರಗಳೂ ಇವೆ. ಅವುಗಳಲ್ಲಿ ಕೆಲವು ಕದ್ದ ಶಸ್ತ್ರಗಳಾಗಿದ್ದರೆ, ಇನ್ನೂ ಕೆಲವು ಕಳ್ಳಸಾಗಣೆ ಮಾಡಿದ ಶಸ್ತ್ರಾಸ್ತ್ರಗಳಾಗಿವೆ.

ಪಾಳಿ ವ್ಯವಸ್ಥೆ: ಗಸ್ತು ಕಾರ್ಯವನ್ನು ಈ ಗುಂಪುಗಳ ಸದಸ್ಯರು ಪಾಳಿ ವ್ಯವಸ್ಥೆಯ ಮೂಲಕ ನಿರ್ವಹಿಸುತ್ತಿದ್ದಾರೆ. ಆರರಿಂದ ಏಳು ಗಂಟೆಗೆ ಒಂದು ಪಾಳಿಯಂತೆ, ಐದರಿಂದ ಆರು ಜನರ ಗುಂಪುಗಳು ಕೆಲಸ ಮಾಡುತ್ತಿವೆ. ಹೆದ್ದಾರಿ, ಹಳ್ಳಿಗಳ ರಸ್ತೆಗಳು, ಬೆಟ್ಟ, ಗುಡ್ಡಗಳು ಮತ್ತು ದಟ್ಟ ಕಾಡುಗಳಲ್ಲಿ ಹಾದುಹೋಗುವ ಕಿರಿದಾದ ರಸ್ತೆಗಳ ಮೇಲೆ ಈ ಗುಂಪುಗಳ ಸದಸ್ಯರು ನಿಗಾವಹಿಸಿದ್ದಾರೆ.

‘ಭದ್ರತಾ ಪಡೆಗಳು ನಮ್ಮನ್ನು ಸಮರ್ಥವಾಗಿ ರಕ್ಷಿಸುವ ಕಾರ್ಯ ಮಾಡಿಲ್ಲ. ಹೀಗಾಗಿ ನಮ್ಮ ಸುರಕ್ಷತೆಯ ಖಾತರಿಗೆ ಅವರನ್ನು ನಂಬಲು ಸಾಧ್ಯವಿಲ್ಲ. ಆದ್ದರಿಂದ ಆ ಕೆಲಸವನ್ನು ನಾವೇ ಮಾಡಬೇಕಾಗಿದೆ’ ಎಂದು ಗ್ರಾಮದ ಸ್ವಯಂ ಸೇವಕರೊಬ್ಬರು ಮಾಹಿತಿ ನೀಡಿದರು.

‘ಹಿಂದೆ ನಾವು ನಿಗಾವಹಿಸಲು ಡ್ರೋನ್‌ಗಳನ್ನೂ ಬಳಸುತ್ತಿದ್ದೆವು. ಆದರೆ ಈಗ ಕೇಂದ್ರ ಪಡೆಗಳು ಜಾಮರ್‌ಗಳನ್ನು ಅಳವಡಿಸಿವೆ. ಹೀಗಾಗಿ ಡ್ರೋನ್‌ಗಳನ್ನು ನಿರ್ವಹಿಸುವುದು ಕಷ್ಟವಾಗಿದೆ’ ಎಂದರು.

‘ಸ್ಕೂಲ್ ಆನ್ ವ್ಹೀಲ್ಸ್’ಗೆ ಚಾಲನೆ

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ನಡೆಯುತ್ತಿರುವ ಸಂಘರ್ಷದಿಂದಾಗಿ ಪರಿಹಾರ ಶಿಬಿರಗಳಲ್ಲಿ ನೆಲೆಸಿರುವ ಮಕ್ಕಳಿಗಾಗಿ ‘ಸ್ಕೂಲ್ ಆನ್ ವ್ಹೀಲ್ಸ್’ ಕಾರ್ಯಕ್ರಮಕ್ಕೆ ರಾಜ್ಯಪಾಲೆ ಅನುಸೂಯ ಉಯಿಕೆ ಭಾನುವಾರ ಚಾಲನೆ ನೀಡಿದರು ಎಂದು ರಾಜಭವನ ತಿಳಿಸಿದೆ.

ಬಾಲ ವಿದ್ಯಾ ಮಂದಿರ ಸಂಕೀರ್ಣದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ‘ಗ್ರಂಥಾಲಯ, ಸ್ಮಾರ್ಟ್ ಟಿ.ವಿ, ಕಂಪ್ಯೂಟರ್ ಮತ್ತು ಕ್ರೀಡಾ ಪರಿಕರಗಳನ್ನು ಒಳಗೊಂಡಿರುವ ಶಾಲಾ ಬಸ್, ಶಿಕ್ಷಕರೊಂದಿಗೆ ಪರಿಹಾರ ಶಿಬಿರಗಳಿಗೆ ತೆರಳಲಿದೆ’ ಎಂದು ಹೇಳಿದರು.

ಐಸಿಎಸ್‌ಇ: 10, 12ನೇ ತರಗತಿ ಫಲಿತಾಂಶ ಇಂದು

ನವದೆಹಲಿ (ಪಿಟಿಐ): ಕೌನ್ಸಿಲ್ ಫಾರ್ ದಿ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್ಸ್‌ನ (ಸಿಐಎಸ್‌ಸಿಇ) 10 ಮತ್ತು 12ನೇ ತರಗತಿಯ ಬೋರ್ಡ್ ಪರೀಕ್ಷೆಯ ಫಲಿತಾಂಶ ಸೋಮವಾರ ಪ್ರಕಟವಾಗಲಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಐಸಿಎಸ್‌ಇ (10ನೇ ತರಗತಿ) ಮತ್ತು ಐಸಿಎಸ್ (12ನೇ ತರಗತಿ) ಫಲಿತಾಂಶವನ್ನು ಬೆಳಿಗ್ಗೆ 11 ಗಂಟೆಗೆ ಪ್ರಕಟಿಸಲಾಗುವುದು ಎಂದು ಸಿಐಎಸ್‌ಸಿಇ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಕಾರ್ಯದರ್ಶಿ ಜೋಸೆಫ್‌ಇಮ್ಯಾನುಯೆಲ್ ಹೇಳಿದ್ದಾರೆ. ಫಲಿತಾಂಶಗಳು ಮಂಡಳಿಯ ವೆಬ್‌ಸೈಟ್, ಕೆರಿಯರ್ ಪೋರ್ಟಲ್ ಮತ್ತು ಡಿಜಿಲಾಕರ್‌ನಲ್ಲಿ ಲಭ್ಯವಿರುತ್ತವೆ.

ಮಂಡಳಿಯು 10 ಮತ್ತು 12ನೇ ತರಗತಿಗಳಿಗೆ ‘ಕಂಪಾರ್ಟ್‌ಮೆಂಟ್’ ಪರೀಕ್ಷೆ ಗಳನ್ನು ಸ್ಥಗಿತಗೊಳಿಸಲು ನಿರ್ಧರಿಸಿದೆ. ಆದರೆ, ಅಂಕಗಳನ್ನು-ಅಥವಾ ಶ್ರೇಣಿಗಳನ್ನು ಸುಧಾರಿಸಿಕೊಳ್ಳಲು ಬಯಸುವ ವಿದ್ಯಾರ್ಥಿಗಳು ಗರಿಷ್ಠ ಎರಡು ವಿಷಯಗಳಲ್ಲಿ ‘ಇಂಪ್ರೂವ್‌ಮೆಂಟ್’ ಪರೀಕ್ಷೆ ತೆಗೆದುಕೊಳ್ಳಬಹುದು ಎಂದು ಎಮ್ಯಾನುಯೆಲ್ ವಿವರಿಸಿದ್ದಾರೆ. ‘ಇಂಪ್ರೂವ್‌ಮೆಂಟ್’ ಪರೀಕ್ಷೆಗಳು ಜುಲೈನಲ್ಲಿ ನಡೆಯಲಿವೆ.

ಮಹಿಳಾ ಟಿ20 ವಿಶ್ವಕಪ್: ಎ ಗುಂಪಿನಲ್ಲಿ ಭಾರತ

ದುಬೈ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡವು ಮುಂಬರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಎ ಗುಂಪಿನಲ್ಲಿ ಆಡಲಿದೆ.

ಇದೇ ಗುಂಪಿನಲ್ಲಿ ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಪಾಕಿಸ್ತಾನ ವನಿತೆಯರ ತಂಡಗಳು ಕೂಡ ಕಣಕ್ಕಿಳಿಯಲಿವೆ.

ಬಾಂಗ್ಲಾದೇಶದಲ್ಲಿ ಅಕ್ಟೋಬರ್ 3 ರಿಂದ 20ರವರೆಗೆ ವಿಶ್ವಕಪ್ ಟೂರ್ನಿ ನಡೆಯಲಿದೆ. ಸಿಲೆಟ್‌ನಲ್ಲಿ ನಡೆಯುವ ಅಕ್ಟೋಬರ್ 4ರಂದು ನಡೆಯುವ ಮೊದಲ ಪಂದ್ಯದಲ್ಲಿ ಭಾರತವು ನ್ಯೂಜಿಲೆಂಡ್ ಎದುರು ಆಡಲಿದೆ. ಅ. 6ರಂದು ಪಾಕಿಸ್ತಾನ ಎದುರು ಆಡಲಿದೆ. 13ರಂದು ಆಸ್ಟ್ರೇಲಿಯಾವನ್ನು ಎದುರಿಸಲಿದೆ.



ಭಾರತ ತಂಡದ ಹರ್ಮನ್‌ಪ್ರೀತ್ ಕೌರ್ ಮತ್ತು ಸ್ಮೃತಿ ಮಂದಾನ

‘ಎರಡು ಗುಂಪುಗಳಲ್ಲಿ ತಂಡಗಳನ್ನು ವಿಭಜಿಸಲಾಗಿದೆ. ಅಗ್ರ ಎರಡು ತಂಡಗಳು ಸೆಮಿಫೈನಲ್ ಪ್ರವೇಶಿಸುತ್ತವೆ. ಅ. 17 ಮತ್ತು 18ರಂದು ನಾಲ್ಕರ ಘಟ್ಟದ ಪಂದ್ಯಗಳು ನಡೆಯುತ್ತವೆ. ಢಾಕಾದಲ್ಲಿ ಅ. 20ರಂದು ಫೈನಲ್ ನಡೆಯಲಿದೆ’ ಎಂದು ಐಸಿಸಿಯು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

‘19 ದಿನಗಳವರೆಗೆ ಆಯೋಜಿಸಲಾಗಿರುವ ಟೂರ್ನಿಯಲ್ಲಿ ಒಟ್ಟು 23 ಪಂದ್ಯಗಳು ನಡೆಯಲಿವೆ. ಢಾಕಾ, ಸಿಲೆಟ್‌ಗಳಲ್ಲಿ ಪಂದ್ಯಗಳಿವೆ. ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳಿಗೆ ಮೀಸಲು ದಿನಗಳನ್ನೂ ನಿಗದಿಪಡಿಸಲಾಗಿದೆ’ ಎಂದು ಐಸಿಸಿ ತಿಳಿಸಿದೆ.

ಆತಿಥೇಯ ಬಾಂಗ್ಲಾದೇಶ ತಂಡವು ಬಿ ಗುಂಪಿನಲ್ಲಿ ಆಡಲಿದೆ. ದಕ್ಷಿಣ ಆಫ್ರಿಕಾ, ಇಂಗ್ಲೆಂಡ್ ಹಾಗೂ ವೆಸ್ಟ್ ಇಂಡೀಸ್ ತಂಡಗಳೊಂದಿಗೆ ಪೈಪೋಟಿ ನಡೆಸಲಿದೆ. ಕ್ವಾಲಿಫೈಯಿಂಗ್ ಸುತ್ತಿನಿಂದ ಎರಡು ತಂಡಗಳು ಅರ್ಹತೆ ಪಡೆಯಲಿವೆ. ಅದರಲ್ಲಿ ಐರ್ಲೆಂಡ್, ಯುನೈಟೆಡ್ ಅರಬ್ ಎಮಿರೇಟ್ಸ್, ಶ್ರೀಲಂಕಾ ಮತ್ತು ಸ್ಕಾಟ್ಲೆಂಡ್ ತಂಡಗಳು ಸ್ಪರ್ಧೆಯಲ್ಲಿವೆ.

ಅಖಿಲ ಭಾರತ ಚೆಸ್ ಫೆಡರೇಷನ್ ಯೋಜನೆ

ಶೀಘ್ರ ‘ಸೂಪರ್ ಟೂರ್ನಿ’

ಚೆನ್ನೈ (ಪಿಟಿಐ): ದೇಶದ ಪ್ರಮುಖ ಆಟಗಾರರಿಗೆ, ಇತರ ದೇಶಗಳ ಉನ್ನತ ದರ್ಜೆಯ ಆಟಗಾರರ ಜೊತೆ ಆಡಲು ಅವಕಾಶವಾಗುವಂತೆ ಭಾರತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಂತರರಾಷ್ಟ್ರೀಯ ಟೂರ್ನಿಗಳನ್ನು ಹಮ್ಮಿಕೊಳ್ಳಲು ಅಖಿಲ ಭಾರತ ಚೆಸ್ ಫೆಡರೇಷನ್ (ಎಐಸಿಎಫ್) ಯೋಜನೆ ಹಾಕಿಕೊಂಡಿದೆ ಎಂದು ಫೆಡರೇಷನ್ ಅಧ್ಯಕ್ಷ ನಿತಿನ್ ನಾರಂಗ್ ಭಾನುವಾರ ಇಲ್ಲಿ ತಿಳಿಸಿದರು.

ದೇಶದ ಪ್ರಮುಖ ಆಟಗಾರರಿಗೆ ಪ್ರತಿ ವರ್ಷ ದೊಡ್ಡ ಮಟ್ಟದ ಟೂರ್ನಿಗಳಲ್ಲಿ ಆಡಲು ಸಾಧ್ಯವಾಗದಿರುವ ಕಾರಣ ಎಐಸಿಎಫ್ ಅಂತರರಾಷ್ಟ್ರೀಯ ‘ಸೂಪರ್’ ಟೂರ್ನಿಗಳನ್ನು ಶೀಘ್ರವೇ ಆರಂಭಿಸಲಿದೆ ಎಂದು ನಾರಂಗ್ ಹೇಳಿದರು. ಆದರೆ ಟೂರ್ನಿ ಯಾವ ಸ್ವರೂಪದ್ದು ಎಂಬ ವಿವರಗಳನ್ನು ನೀಡಲಿಲ್ಲ.

‘ಈ ಟೂರ್ನಿ (ಸೂಪರ್ ಟೂರ್ನಿ)ಗಳಲ್ಲಿ ಭಾರತದ ಆಟಗಾರರಿಗೆ ನಿರ್ದಿಷ್ಟ ಸಂಖ್ಯೆಯ ಮೀಸಲಾ ಇರುತ್ತದೆ. ಜೊತೆಗೆ ವಿದೇಶಿ ಆಟಗಾರರನ್ನು ಆಹ್ವಾನಿಸುತ್ತೇವೆ. ಹೀಗಾಗಿ ದೇಶದ ಆಟಗಾರರಿಗೆ ಅಂತರರಾಷ್ಟ್ರೀಯ ಅನುಭವವೂ ದೊರೆಯುತ್ತದೆ. ಅವರಿಗೆ ವಿದೇಶಿ ಟೂರ್ನಿಗಳಿಗೆ ಹೋಗಿ ಬರುವ ಖರ್ಚೂ ಉಳಿಯುತ್ತದೆ’ ಎಂದು ಅವರು ವಿವರಿಸಿದರು.



ನಿತಿನ್ ನಾರಂಗ್

‘ಇದರ ಜೊತೆಗೆ ಹೆಚ್ಚಿನ ಸಂಖ್ಯೆಯಲ್ಲಿ ಫಿಡೆ ರೇಟೆಡ್ ಟೂರ್ನಿಗಳನ್ನು ಹಮ್ಮಿಕೊಳ್ಳಲೂ ಫೆಡರೇಷನ್ ಮುಂದಾಗಿದೆ’ ಎಂದು ಅವರು ತಿಳಿಸಿದರು. ‘ದೇಶದ ಪ್ರಮುಖ ಆಟಗಾರರನ್ನು ಒಳಗೊಂಡ ಎಐಸಿಎಫ್ ರೌಂಡ್ ರಾಬಿನ್ ಟೂರ್ನಿಯನ್ನೂ ನಡೆಸುವತ್ತ ಗಮನಹರಿಸಲಿದ್ದೇವೆ. ಇಲ್ಲಿ ಎಲ್ಲ ಆಟಗಾರರೂ ಪರಸ್ಪರ ಒಬ್ಬರನ್ನೊಬ್ಬರು ಎದುರಿಸಲಿದ್ದಾರೆ’ ಎಂದರು.

‘ಈ ವರ್ಷ ದೇಶದಲ್ಲಿ ಚೆಸ್‌ಗಾಗಿ ₹65 ಕೋಟಿ ತೊಡಗಿಸಲಿದ್ದೇವೆ. ಇದು ಫೆಡರೇಷನ್ ಇತಿಹಾಸದಲ್ಲೇ ಅತಿ ದೊಡ್ಡ ಬಜೆಟ್’ ಎಂದರು.

ಇಷ್ಟೊಂದು ಬಜೆಟ್ ಹಣ ಹೇಗೆ ಹೊಂದಿಸುವಿರಿ ಎಂಬ ಪ್ರಶ್ನೆಗೆ ಪ್ರಾಯೋಜಕರು ಆರಂಭಿಕ ಹಂತವಾಗಿ ₹25 ಕೋಟಿ ತೊಡಗಿಸಲು ಬದ್ಧತೆ ತೋರಿದ್ದಾರೆ. ಇದು ಆರಂಭಿಕ ಹಂತ. ಈಗಾಗಲೇ ಸಹಕರಿಸುತ್ತಿರುವ ಕಾರ್ಪೊರೇಟ್ ಸಂಸ್ಥೆಗಳ ಮೂಲಕವೂ ಹಣ ಹೊಂದಿಸಲಾಗುವುದು’ ಎಂದರು.

ಕೌಂಟಿ ಕ್ರಿಕೆಟ್: ಪೂಜಾರ ಶತಕ

ಲಂಡನ್ (ಪಿಟಿಐ): ಭಾರತದ ಚೇತೇಶ್ವರ್ ಪೂಜಾರ ಅವರು ಇಂಗ್ಲಿಷ್ ಕೌಂಟಿ ಕ್ರಿಕೆಟ್‌ನಲ್ಲಿ ಶತಕ ಗಳಿಸಿದರು.

ಸಸೆಕ್ಸ್ ತಂಡವನ್ನು ಪ್ರತಿನಿಧಿಸುತ್ತಿರುವ ಅವರು (113; 186ಎ, 4X11) ಶತಕ ದಾಖಲಿಸಿದರು. ಅವರ ಬ್ಯಾಟಿಂಗ್ ಬಲದಿಂದ ತಂಡವು 124 ರನ್‌ಗಳಿಂದ ಡರ್ಬಿಶೈರ್ ತಂಡದ ವಿರುದ್ಧ ಜಯಿಸಿತು. ಈ ಕೌಂಟಿ ಋತುವಿನಲ್ಲಿ ಪೂಜಾರ ಅವರಿಗೆ ಮೊದಲ ಶತಕ ಇದಾಗಿದೆ.



ಪೂಜಾರ

ಡರ್ಬಿಶೈರ್ ತಂಡವು ಮೊದಲ ಇನಿಂಗ್ಸ್‌ನಲ್ಲಿ 246 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಸಸೆಕ್ಸ್ ತಂಡವು 109. ಓವರ್‌ಗಳಲ್ಲಿ 479 ರನ್ ಗಳಿಸಿತು.

ಎರಡನೇ ಇನಿಂಗ್ಸ್‌ನಲ್ಲಿ ಡರ್ಬಿಶೈರ್ ತಂಡವು 26 ಓವರ್‌ಗಳಲ್ಲಿ 109 ರನ್ ಗಳಿಸಿ ಎಲ್ ವಿಕೆಟ್ ಕಳೆದುಕೊಂಡಿತು. ಜೇಡನ್ ಸೀಲ್ಸ್ 5 ವಿಕೆಟ್ ಗಳಿಸಿದರು.

ಬ್ಯಾಡ್ಮಿಂಟನ್: ಇಂಡೊನೇಷ್ಯಾಕ್ಕೆ ಫೈನಲ್‌ನಲ್ಲಿ ನಿರಾಸೆ

ಚೀನಾಕ್ಕೆ ಥಾಮಸ್, ಉಬರ್ ಕಪ್ ಕಿರೀಟ

ಚೆಂಗ್ಡು (ಚೀನಾ), (ಎಎಫ್‌ಪಿ): ಚೀನಾದ ಪುರುಷರ ಮತ್ತು ಮಹಿಳಾ ತಂಡಗಳು, ಭಾನುವಾರ ನಡೆದ ಫೈನಲ್ ಪಂದ್ಯಗಳಲ್ಲಿ ಇಂಡೊನೇಷ್ಯಾ ತಂಡಗಳನ್ನು ಸೋಲಿಸಿ, ಥಾಮಸ್ ಮತ್ತು ಉಬರ್ ಕಪ್ ಬ್ಯಾಡ್ಮಿಂಟನ್ ಪ್ರಶಸ್ತಿ ಗೆದ್ದುಕೊಂಡವು.

ಆತಿಥೇಯ ದೇಶದ ಪುರುಷರ ತಂಡ ಥಾಮಸ್ ಕಪ್ ಫೈನಲ್‌ನಲ್ಲಿ 3–1 ರಿಂದ ಜಯಗಳಿಸಿತು. 2018ರ ನಂತರ ಇದೇ ಮೊದಲ ಬಾರಿಗೆ ಚೀನಾ ಈ ಪ್ರಶಸ್ತಿ ಗೆದ್ದುಕೊಂಡಿತು.

ಆ ವರ್ಷ ಫೈನಲ್‌ನಲ್ಲಿ ಜಪಾನ್ ಮೇಲೆ ಜಯಗಳಿಸಿತ್ತು. ಈ ವಿಭಾಗದಲ್ಲಿ ಚೀನಾಕ್ಕೆ ಇದು ಒಟ್ಟಾರೆ 11ನೇ ಪ್ರಶಸ್ತಿ.

ಇಂಡೊನೇಷ್ಯಾಕ್ಕೆ ಸತತ ಎರಡನೇ ಬಾರಿ ಫೈನಲ್‌ನಲ್ಲಿ ನಿರಾಸೆ ಎದುರಾಯಿತು. ಬ್ಯಾಂಕಾಕ್‌ನಲ್ಲಿ ನಡೆದ ಕಳೆದ ಆವೃತ್ತಿಯ ಫೈನಲ್‌ನಲ್ಲಿ ಆ ತಂಡ ಭಾರತಕ್ಕೆ ಮಣಿದಿತ್ತು.

ಮಹಿಳೆಯರ ವಿಭಾಗದಲ್ಲಿ ಚೀನಾ 3–0 ಯಿಂದ ಇಂಡೊನೇಷ್ಯಾ ಮೇಲೆ ಜಯಗಳಿಸಿ ದಾಖಲೆ 16ನೇ ಬಾರಿ ಉಬರ್ ಕಪ್ ಗೆದ್ದುಕೊಂಡಿತು.



ಥಾಮಸ್ ಕಪ್ ಗೆದ್ದುಕೊಂಡ ಚೀನಾ ಆಟಗಾರರ ಸಂಭ್ರಮ. ಎಎಫ್‌ಪಿ ಚಿತ್ರ

ಎರಡು ವರ್ಷಗಳ ಹಿಂದೆ ಥಾಯ್ಲೆಂಡ್‌ನಲ್ಲಿ ನಡೆದ ಟೂರ್ನಿಯ ಫೈನಲ್‌ನಲ್ಲಿ ದಕ್ಷಿಣ ಕೊರಿಯಾ, ಚೀನಾವನ್ನು ಸೋಲಿಸಿತ್ತು.

ಪುರುಷರ ಫೈನಲ್: ವಿಶ್ವದ ಎರಡನೇ ನಂಬರ್ ಆಟಗಾರ ಶಿ ಯುಕಿ 21–17, 21–6 ರಿಂದ ಏಳನೇ ಕ್ರಮಾಂಕದ ಅಂಥೋನಿ ಜಿಂಟಿಂಗ್ ಅವರನ್ನು ಸೋಲಿಸಿ ಚೀನಾಕ್ಕೆ ಮುನ್ನಡೆ ಒದಗಿಸಿದರು.

ತೀವ್ರ ಹೋರಾಟ ಕಂಡ ಮೊದಲ ಡಬಲ್ಸ್‌ನಲ್ಲಿ ಲಿಯಾಂಗ್ ವೀಕೆಂಗ್–ವಾಂಗ್ ಚಾಂಗ್ ಜೋಡಿ 21–18, 17–21, 21–17 ರಿಂದ ಫಜರ್ ಅಲ್ಫಿಯಾನ್ –ಮುಹಮ್ಮದ್ ರಿಯಾನ್ ಅರ್ಡಿಯಾಂಟೊ ಅವರನ್ನು ಸೋಲಿಸಿ ಚೀನಾ ಮುನ್ನಡೆ ಹೆಚ್ಚಿಸಿತು. ಈ ತುರುಸಿನ ಪಂದ್ಯ 64 ನಿಮಿಷ ನಡೆಯಿತು.

ವಿಶ್ವದ ಮೂರನೇ ಕ್ರಮಾಂಕದ ಆಟಗಾರ ಜೊನಾಥನ್ ಕ್ರಿಸ್ಟಿ 21–16, 15–21, 21–17 ರಿಂದ ಆರನೇ ಕ್ರಮಾಂಕದ ಲಿ ಶಿಫೆಂಗ್ ಅವರನ್ನು 1 ಗಂಟೆ 17 ನಿಮಿಷಗಳ ಹೋರಾಟದಲ್ಲಿ ಸೋಲಿಸಿ ಇಂಡೊನೇಷ್ಯಾ ಆಸೆ ಜೀವಂತವಾಗಿಟ್ಟರು.

ಆದರೆ ಮರು (ಎರಡನೇ ಡಬಲ್ಸ್) ಪಂದ್ಯದಲ್ಲೇ ಹೆ ಜಿಂಟಿಂಗ್– ರೆನ್ ಷಿಯಾಂಗ್ಯು ಜೋಡಿ 21–11, 21–15 ರಿಂದ ಮುಹಮ್ಮದ್ ಶೊಹಿಬುಲ್ ಫಿಕ್ರಿ–ಬಗಾಸ್ ಮೌಲಾನಾ ಅವರನ್ನು ಕೇವಲ 37 ನಿಮಿಷಗಳಲ್ಲಿ ಮಣಿಸಿ ಚೀನಾ ಗೆಲುವನ್ನು ಪೂರೈಸಿತು.

ಪೂನಿಯಾ ಅಮಾನತು: ವಾಡಾಗೆ ಪತ್ರ

ನವದೆಹಲಿ (ಪಿಟಿಐ): ಕುಸ್ತಿಪಟು ಬಜರಂಗ್ ಪೂನಿಯಾ ಅವರನ್ನು ತಾತ್ಕಾಲಿಕವಾಗಿ ಅಮಾನತು ಮಾಡಿರುವ ಬಗ್ಗೆ ಮಾಹಿತಿ ನೀಡದ ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಸಂಸ್ಥೆ (ನಾಡಾ) ವಿರುದ್ಧ ವಿಶ್ವ ಉದ್ದೀಪನ ಮದ್ದು ತಡೆ ಘಟಕಕ್ಕೆ (ವಾಡಾ) ಪತ್ರ ಬರೆಯುವುದಾಗಿ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಸಂಜಯ್ ಸಿಂಗ್ ತಿಳಿಸಿದ್ದಾರೆ.

ವಾಡಾ ನಿಯಮ ಪ್ರಕಾರ, ‘ಅಧಿಸೂಚನೆಯ ನಂತರ ಮಾದರಿ ನೀಡಲು ನಿರಾಕರಿಸುವುದು ಅಥವಾ ಬಲವಾದ ಸಮರ್ಥನೆ ಇಲ್ಲದೆ ವಿಫಲವಾದರೆ ಅಥವಾ ಮಾದರಿ ಸಂಗ್ರಹವನ್ನು ತಪ್ಪಿಸುವುದು ಡೋಪಿಂಗ್ ವಿರೋಧಿ ನಿಯಮ ಉಲ್ಲಂಘನೆಯಾಗಿದೆ’. ‘ಏಪ್ರಿಲ್ 25 ರಂದು ನಾಡಾ ಡಿಜಿ ಮತ್ತು ಇತರ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದೇನೆ ಮತ್ತು ಆ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಗಲಿಲ್ಲ. ಬೆಳಿಗ್ಗೆ ನಾಡಾ ಅಧಿಕಾರಿಗಳಿಗೆ ಕರೆ ಮಾಡಿದಾಗಲೂ ನನ್ನ ಪ್ರಶ್ನೆಗೆ ಉತ್ತರಿಸಲಿಲ್ಲ. ಈ ಬಗ್ಗೆ ನಾಡಾ ಹಾಗೂ ವಾಡಾಗೆ ಪತ್ರ ಬರೆಯಲು ಯೋಜಿಸಿದ್ದೇನೆ’ ಎಂದು ಸಿಂಗ್ ತಿಳಿಸಿದ್ದಾರೆ.

ಪೂನಿಯಾ ಆರೋಪ: ‘ನನ್ನ ಮೂತ್ರದ ಮಾದರಿ ತೆಗೆದುಕೊಳ್ಳಲು ಅಧಿಕಾರಿಗಳು ಅವಧಿ ಮೀರಿದ ಕಿಟ್ ತಂದಿದ್ದರು. ಡಬ್ಲ್ಯುಎಫ್‌ಐ ಮಾಜಿ ಮುಖ್ಯಸ್ಥ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರೂ ಅಧಿಕಾರದಲ್ಲಿದ್ದಾಗ ತಮ್ಮ ವಿರುದ್ಧ ನಿಲ್ಲುವ ಮಹಿಳಾ ಕುಸ್ತಿಪಟುಗಳನ್ನು ಹೆದರಿಸಲು ಅವಧಿ ಮೀರಿದ ಕಿಟ್‌ಗಳನ್ನು ಬಳಸುತ್ತಿದ್ದರು’ ಅವರು ಬಜರಂಗ್ ಪೂನಿಯಾ ಆರೋಪಿಸಿದರು.

ಮೇ 9 ರಿಂದ ಟರ್ಕಿಯಲ್ಲಿ ನಡೆಯಲಿರುವ ವಿಶ್ವ ಅರ್ಹತಾ ಪಂದ್ಯಗಳು ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಲು ಭಾರತದ ಕುಸ್ತಿಪಟುಗಳಿಗೆ ಕೊನೆಯ ಅವಕಾಶವಾಗಿದೆ. ಪುರುಷರ ಫ್ರೀಸ್ಟೈಲ್ 65 ಕೆಜಿ ವಿಭಾಗದಲ್ಲಿ ಸುಜೀತ್ ಕಲ್ಕಲ್ ಭಾರತ ಪ್ರತಿನಿಧಿಸಲಿದ್ದಾರೆ. ವಿನೇಶಾ ಫೋಗಟ್ (50 ಕೆಜಿ), ಅಂತಿಮ್ ಪಂಘಲ್ (53 ಕೆಜಿ), ಅಂಶು ಮಲಿಕ್ (57 ಕೆಜಿ) ,ರೀತಿಕಾ ಹೂಡಾ (76 ಕೆಜಿ) ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದಾರೆ.



ಜಡೇಜ ಆಟಕ್ಕೆ ಒಲಿದ ಜಯ

ಅಂಕಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿದ ಚೆನ್ನೈ; ಪಂಜಾಬ್ ಕಿಂಗ್ಸ್‌ಗೆ ನಿರಾಶೆ

ಧರ್ಮಶಾಲಾ (ಪಿಟಿಐ): ರವೀಂದ್ರ ಜಡೇಜ ಅವರ ಆಲ್‌ರೌಂಡ್ ಆಟದಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಹಿಮಾಚಲ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 28 ರನ್‌ಗಳಿಂದ ಆತಿಥೇಯ ಪಂಜಾಬ್ ಕಿಂಗ್ಸ್ ವಿರುದ್ಧ ಗೆದ್ದು ಅಂಕಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿತು.

ಟಾಸ್ ಗೆದ್ದ ಪಂಜಾಬ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸ್ಪಿನ್ನರ್ ರಾಹುಲ್ ಚಾಹರ್ (23ಕ್ಕೆ3) ಮತ್ತು ವೇಗಿ ಹರ್ಷಲ್ ಪಟೇಲ್ (24ಕ್ಕೆ3) ಅವರು ಚೆನ್ನೈ ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿದರು. ಬೌಲರ್‌ಗಳ ಪಾರಮ್ಯದ ನಡುವೆಯೂ ಚೇತೋಹಾರಿ ಆಟವಾಡಿದ ಜಡೇಜ (43; 26ಎ) ಚೆನ್ನೈ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 167 ರನ್ ಗಳಿಸಲು ಕಾರಣರಾದರು.

ನಾಯಕ ಋತುರಾಜ್ ಗಾಯಕವಾಡ (32; 21ಎ) ಮತ್ತು ಡ್ಯಾರಿಲ್ ಮಿಚೆಲ್ (30; 19ಎ) ಬಿಟ್ಟರೆ ಉಳಿದ ಬ್ಯಾಟರ್‌ಗಳಿಂದ ನಿರೀಕ್ಷಿತ ಸಾಮರ್ಥ್ಯ ಮೂಡಿಬರಲಿಲ್ಲ.

ಮಹೇಂದ್ರಸಿಂಗ್ ಧೋನಿ ಅವರು ಎದುರಿಸಿದ ಮೊದಲ ಎಸೆತದಲ್ಲಿಯೇ ಔಟಾದರು.

ಈ ಸಾಧಾರಣ ಗುರಿಯನ್ನು ಬೆನ್ನಟ್ಟಿದ ಪಂಜಾಬ್ ತಂಡವನ್ನು ಜಡೇಜ (20ಕ್ಕೆ3) ತಮ್ಮ ಎಡಗೈ ಸ್ಪಿನ್ ಮೂಲಕ ಕಾಡಿದರು. ಇದರಿಂದಾಗಿ ಆತಿಥೇಯ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 139 ರನ್ ಗಳಿಸಿತು.

ಇನಿಂಗ್ಸ್‌ನ ಎರಡನೇ ಓವರ್ ಹಾಕಿದ ಚೆನ್ನೈ ವೇಗಿ ತುಷಾರ್ ದೇಶಪಾಂಡೆ ಆಘಾತ ನೀಡಿದರು. ಅದೊಂದೇ ಓವರ್‌ನಲ್ಲಿ ರೀಲಿ ರುಸೊ ಹಾಗೂ ಜಾನಿ ಬೆಸ್ಟೊ ವಿಕೆಟ್‌ಗಳನ್ನು ಕಬಳಿಸಿದರು.

ಪ್ರಭಸಿಮ್ರನ್ ಸಿಂಗ್ (30; 23ಎ)ಹಾಗೂ ಶಶಾಂಕ್ ಸಿಂಗ್ (27 ರನ್) ಮೂರನೇ ವಿಕೆಟ್ ಜೊತೆಯಾಟದಲ್ಲಿ 53 ರನ್ ಸೇರಿಸಿದರು.

ಎಂಟನೇ ಓವರ್‌ನಲ್ಲಿ ಪ್ರಭಸಿಮ್ರನ್ ವಿಕೆಟ್ ಗಳಿಸಿದ ಜಡೇಜ ಅವರು ಜೊತೆಯಾಟವನ್ನು ಮುರಿದರು. ಇಲ್ಲಿಂದ ಮುಂದೆ ಪಂಜಾಬ್ ತಂಡವು ಚೇತರಿಸಿಕೊಳ್ಳಲು ಜಡೇಜ ಮತ್ತು ಉಳಿದ ಬೌಲರ್‌ಗಳು ಅವಕಾಶ ಕೊಡಲಿಲ್ಲ.

ಪಂಜಾಬ್ ನಾಯಕ ಸ್ಯಾಮ್ ಕರನ್ ಮತ್ತು ಭರವಸೆಯ ಬ್ಯಾಟರ್ ಆಷುತೋಷ್ ಶರ್ಮಾ ಅವರ ವಿಕೆಟ್‌ಗಳನ್ನು ಜಡೇಜ ಕಬಳಿಸಿದರು.

ಅವರಿಗೆ ಉತ್ತಮ ಜೊತೆ ನೀಡಿದ ಸಿಮ್ರನ್‌ಜೀತ್ ಸಿಂಗ್ (16ಕ್ಕೆ2) ಹಾಗೂ ಶಾರ್ದೂಲ್ ಠಾಕೂರ್ (12ಕ್ಕೆ1) ಕಿಂಗ್ಸ್‌ಗೆ ಕಡಿವಾಣ ಹಾಕಿದರು.

11ನೇ ಪಂದ್ಯವಾಡಿದ ಪಂಜಾಬ್ ತಂಡಕ್ಕೆ ಇದು ಏಳನೇ ಸೋಲು.



ಚೆನ್ನೈ ಸೂಪರ್ ಕಿಂಗ್ಸ್ ತಂಡದ ರವೀಂದ್ರ ಜಡೇಜ ಸಂಭ್ರಮ ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್: 9ಕ್ಕೆ 167 (20 ಓವರುಗಳಲ್ಲಿ)

ರಹಾನೆ ಸಿ ರಬಾಡ ಬಿ ಅರ್ಷದೀಪ್ 9 (7ಎ, 4 × 1)
ಋತುರಾಜ್ ಸಿ ಜಿತೇಶ್ ಬಿ ರಾಹುಲ್ 32 (21ಎ 4 × 1, 6 × 1)
ಮಿಚೆಲ್ ಎಲ್‌ಬಿಡಬ್ಲ್ಯು ಬಿ ಹರ್ಷಲ್ 30 (19ಎ, 4 × 2, 6 × 1)
ದುಬೆ ಸಿ ಜಿತೇಶ್ ಬಿ ರಾಹುಲ್ 0 (1ಎ)
ಮೊಯಿನ್ ಸಿ ಬೇಸ್ಟೊ ಬಿ ಕರನ್ 17 (20ಎ, 4x2)
ಜಡೇಜ ಸಿ ಕರನ್ ಬಿ ಅರ್ಷದೀಪ್ 43 (26ಎ, 4 × 3, 6 × 2)
ಸ್ಯಾಂಟ್ನರ್ ಸಿ ಕರನ್ ಬಿ ರಾಹುಲ್ 11 (11ಎ, 4 × 1)
ಶಾರ್ದೂಲ್ ಬಿ ಹರ್ಷಲ್ 17 (11ಎ, 4 × 2, 6 × 1)
ಧೋನಿ ಬಿ ಹರ್ಷಲ್ 0 (1ಎ)
ದೇಶಪಾಂಡೆ ಔಟಾಗದೇ 0 (1ಎ)
ಗ್ಲೀಸನ್ ಔಟಾಗದೇ 2 (2ಎ)
ಇತರೆ: 6 (ಬೈ 1, ವೈಡ್ 5)
ವಿಕೆಟ್ ಪತನ: 1-12 (ಅಜಿಂಕ್ಯ ರಹಾನೆ, 1.5), 2-69 (ಋತುರಾಜ್ ಗಾಯಕವಾಡ, 7.1), 3-69 (ಶಿವಂ ದುಬೆ, 7.2), 4-75 (ಡೇರಿಲ್ ಮಿಚೆಲ್, 8.5), 5-101 (ಮೊಯಿನ್ ಅಲಿ, 12.4), 6-122 (ಮಿಚೆಲ್ ಸ್ಯಾಂಟ್ನರ್, 15.6), 7-150 (ಶಾರ್ದೂಲ್ ಠಾಕೂರ್, 18.4), 8-150 (ಮಹೇಂದ್ರ ಸಿಂಗ್ ಧೋನಿ, 18.5), 9–164 (ರವೀಂದ್ರ ಜಡೇಜ, 19.4).
ಬೌಲಿಂಗ್: ಕಗಿಸೊ ರಬಾಡ 3-0–24-0; ಅರ್ಷದೀಪ್ ಸಿಂಗ್ 4-0–42-2; ಸ್ಯಾಮ್ ಕರನ್ 4-0–34-1; ಹರ್‌ಪ್ರೀತ್ ಬ್ರಾರ್ 1-0–19-0; ರಾಹುಲ್ ಚಾಹರ್ 4-0-23-3; ಹರ್ಷಲ್ ಪಟೇಲ್ 4-0-24-3.

ಪಂಜಾಬ್ ಕಿಂಗ್ಸ್: 9ಕ್ಕೆ139 (20 ಓವರುಗಳಲ್ಲಿ)

ಪ್ರಭಸಿಮ್ರನ್ ಸಿ ರಿಝ್ವಿ (ಸಬ್) ಬಿ ಜಡೇಜ 30 (23ಎ, 4 × 2, 6 × 2)
ಬೇಸ್ಟೊ ಬಿ ದೇಶಪಾಂಡೆ 7 (6ಎ, 4 × 1)
ರೂಸೊ ಬಿ ದೇಶಪಾಂಡೆ 0 (3ಎ)
ಶಶಾಂಕ್ ಸಿ ಸಿಮರಜೀತ್ ಬಿ ಸ್ಯಾಂಟ್ನರ್ 27 (20ಎ, 4 × 4)
ಕರನ್ ಸಿ ಸ್ಯಾಂಟ್ನರ್ ಬಿ ಹಡೇಜ 7 (11ಎ)
ಜಿತೇಶ್ ಸಿ ಧೋನಿ ಬಿ ಸಿಮರಜೀತ್ 0 (1ಎ)
ಅಶುತೋಷ್ ಸಿ ಸಿಮರಜೀತ್ ಬಿ ಜಡೇಜ 3 (10ಎ)
ಹರಪ್ರೀತ್ ಔಟಾಗದೇ 17 (13ಎ, 4X2)
ಹರ್ಷಲ್ ಸಿ ಬದಲಿ ಫೀಲ್ಡರ್ (ರಿಝ್ವಿ), ಬಿ ಸಿಮರಜೀತ್ 12 (13ಎ, 4 × 1, 6 × 1)
ರಾಹುಲ್ ಬಿ ಠಾಕೂರ್ 16 (10ಎ, 4 × 2, 6 × 1)
ರಬಾಡ ಔಟಾಗದೇ 11 (10ಎ, 6 × 1)
ಇತರೆ: 9 (ಲೆಗ್‌ಬೈ 5, ವೈಡ್ 4)
ವಿಕೆಟ್ ಪತನ: 1–19 (ಜಾನಿ ಬೇಸ್ಟೊ, 1.3), 2–9 (ರೀಲಿ ರೂಸೊ, 1.6), 3–62 (ಶಶಾಂಕ್ ಸಿಂಗ್, 7.6), 4–68 (ಪ್ರಭಸಿಮ್ರನ್ ಸಿಂಗ್, 8.6), 5–69 (ಜಿತೇಶ್ ಶರ್ಮಾ, 9.4), 6–77 (ಸ್ಯಾಮ್ ಕರನ್, 12.1), 7–78 (ಅಶುತೋಷ್ ಶರ್ಮಾ, 12.3), 8–90 (ಹರ್ಷಲ್ ಪಟೇಲ್, 14.4), 9–117 (ರಾಹುಲ್ ಚಾಹರ್, 17.3)
ಬೌಲಿಂಗ್: ಮಿಚೆಲ್ ಸ್ಯಾಂಟ್ನರ್ 3–0–10–1; ತುಷಾರ್ ದೇಶಪಾಂಡೆ 4–0–35–2; ರಿಚರ್ಡ್ ಗ್ಲೀಸನ್ 4–0–41–0; ರವೀಂದ್ರ ಜಡೇಜ 4–0–20–3; ಸಿಮರ್‌ಜೀತ್ ಸಿಂಗ್ 3–0–16–2; ಶಾರ್ದೂಲ್ ಠಾಕೂರ್ 2–0–12–1.
ಪಂದ್ಯದ ಆಟಗಾರ: ರವೀಂದ್ರ ಜಡೇಜ

ಫಲಿತಾಂಶ: ಚೆನ್ನೈ ಸೂಪರ್ ಕಿಂಗ್ಸ್‌ಗೆ 28 ರನ್‌ಗಳ ಗೆಲುವು

ರಾಣಾ, ವರಣ್‌ಗೆ ತಲಾ ಮೂರು ವಿಕೆಟ್: ಲಖನೌಗೆ ಸೋಲು

ಅಗ್ರಸ್ಥಾನಕ್ಕೆ ಜಿಗಿದ ಕೋಲ್ಕತ್ತ ತಂಡ

ಲಖನೌ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಐಪಿಎಲ್ ಟೂರ್ನಿಯ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಜಿಗಿಯಿತು.

ಭಾನುವಾರ ನಡೆದ ಪಂದ್ಯದಲ್ಲಿ ಸುನಿಲ್ ನಾರಾಯಣ (81, 39ಎ, 4X6, 6X7) ಅವರ ಸ್ಫೋಟಕ ಶೈಲಿಯ ಬ್ಯಾಟಿಂಗ್, ಹರ್ಷಿತ್ ರಾಣಾ (24ಕ್ಕೆ3) ಹಾಗೂ ವರುಣ್ ಚಕ್ರವರ್ತಿ (30ಕ್ಕೆ3) ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಕೋಲ್ಕತ್ತ ತಂಡವು ಲಖನೌ ಸೂಪರ್ ಜೈಂಟ್ಸ್ ತಂಡದ ವಿರುದ್ಧ 98 ರನ್‌ಗಳ ಗೆಲುವು ದಾಖಲಿಸಿತು.

11 ಪಂದ್ಯಗಳನ್ನು ಆಡಿರುವ ಕೋಲ್ಕತ್ತ ನೈಟ್ ರೈಡರ್ಸ್ ತಂಡ ಎಂಟರಲ್ಲಿ ಗೆದ್ದು 16 ಅಂಕದೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ಅಷ್ಟೇ ಪಂದ್ಯಗಳಲ್ಲಿ 12 ಪಾಯಿಂಟ್ಸ್ ಸಂಪಾದಿಸಿರುವ ಲಖನೌ ತಂಡವು ನಾಲ್ಕರಿಂದ ಐದನೇ ಸ್ಥಾನಕ್ಕೆ ಕುಸಿದಿದೆ.

ಏಕನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಲಖನೌ ತಂಡದ ನಾಯಕ ಕೆ.ಎಲ್. ರಾಹುಲ್ ನಿರ್ಧಾರ ಕೈಕೊಟ್ಟಿತು.

ಆರಂಭದಿಂದಲೇ ಅಬ್ಬರಿಸಿದ ಸುನಿಲ್ ಮತ್ತು ಫಿಲ್ ಸಾಲ್ಟ್ ಅವರು ನಾಲ್ಕು ಓವರ್‌ಗಳಲ್ಲಿ 61 ರನ್ ಸೇರಿಸಿದರು. ಇವರಿಬ್ಬರ ಆರಂಭಿಕ ಜೊತೆಯಾಟದ ನೆರವಿನಿಂದ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 235 ರನ್ ಗಳಿಸಿತು.

ಈ ಗುರಿ ಬೆನ್ನತ್ತಿದ ಲಖನೌ ಸೂಪರ್ ಜೈಂಟ್ಸ್ ತಂಡ 137 ರನ್‌ಗಳಿಗೆ ಆಟ ಮುಗಿಸಿತು. ರಾಹುಲ್ (25) ಹಾಗೂ ಮಾರ್ಕಸ್ ಸ್ಟೊಯಿನಿಸ್ (36) ಹೊರತು ಪಡಿಸಿದರೆ ಉಳಿದವರಿಂದ ಬೆಂಬಲ ದೊರೆಯಲಿಲ್ಲ. ತಂಡ ಚೇತರಿಸಿಕೊಳ್ಳಲು ಬೌಲರ್‌ಗಳು ಅವಕಾಶ ನೀಡಲಿಲ್ಲ.

ಸುನಿಲ್ ಅವರು 38 ಎಸೆತಗಳಲ್ಲಿ 81 ರನ್ ಗಳಿಸಿದರು. ಐದನೇ ಓವರ್‌ನಲ್ಲಿ ನವೀನ್ ಉಲ್ ಹಕ್ ಎಸೆತವನ್ನು ಆಡುವ ಭರದಲ್ಲಿ ಸಾಲ್ಟ್ (32; 14ಎ, 4X6, 6X1) ಔಟಾದರು. ಆದರೆ ಸುನಿಲ್ ಅಬ್ಬರದ ಆಟ ನಿಲ್ಲಲಿಲ್ಲ.

ಸುನಿಲ್ 7 ಸಿಕ್ಸರ್ ಮತ್ತು ಅರ್ಧ ಡಜನ್ ಬೌಂಡರಿ ಸಿಡಿಸಿದರು. ಅವರಿಗೆ ಅಂಗಕ್ರಿಷ್ ರಘುವಂಶಿ (32; 26ಎ, 4X3, 6X1) ಉತ್ತಮ ಜೊತೆ ನೀಡಿದರು. ಇವರಿಬ್ಬರೂ ಎರಡನೇ ವಿಕೆಟ್ ಜತೆಯಾಟದಲ್ಲಿ 79 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಕೋಲ್ಕತ್ತ ನೈಟ್ ರೈಡರ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 235 (ಫಿಲ್ ಸಾಲ್ಟ್ 32, ಸುನಿಲ್ ನಾರಾಯಣ 81, ಅಂಗಕ್ರಿಷ್ ರಘುವಂಶಿ 32, ಶ್ರೇಯಸ್ ಅಯ್ಯರ್ 23, ರಮಣದೀಪ್ ಸಿಂಗ್ ಔಟಾಗದೆ 25. ನವೀನ್ ಉಲ್ ಹಕ್ 49ಕ್ಕೆ3) **ಲಖನೌ ಸೂಪರ್ ಜೈಂಟ್ಸ್:** 16.1 ಓವರ್‌ಗಳಲ್ಲಿ 137 (ಕೆ.ಎಲ್.ರಾಹುಲ್ 25, ಮಾರ್ಕಸ್ ಸ್ಟೊಯಿನಿಸ್ 36, ಹರ್ಷಿತ್ ರಾಣಾ 24ಕ್ಕೆ3, ವರುಣ್ ಚಕ್ರವರ್ತಿ 30ಕ್ಕೆ3)
ಪಂದ್ಯ ಶ್ರೇಷ್ಠ: ಸುನಿಲ್ ನಾರಾಯಣ



ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಸುನಿಲ್ ನಾರಾಯಣ –ಪಿಟಿಐ ಚಿತ್ರ

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಕೋಲ್ಕತ್ತ ನೈಟ್ ರೈಡರ್ಸ್	11	8	3	16	1453
ರಾಜಸ್ಥಾನ ರಾಯಲ್ಸ್	10	8	2	16	0.622
ಚೆನ್ನೈ ಸೂಪರ್ ಕಿಂಗ್ಸ್	11	6	5	12	0.700
ಸನ್‌ರೈಸರ್ಸ್ ಹೈದರಾಬಾದ್	10	6	4	12	0.072
ಲಖನೌ ಸೂಪರ್ ಜೈಂಟ್ಸ್	11	6	5	12	-0.371
ಡೆಲ್ಲಿ ಕ್ಯಾಪಿಟಲ್ಸ್	11	5	6	10	-0.442
ಆರ್‌ಸಿಬಿ (ಬೆಂಗಳೂರು)	11	4	7	8	-0.049
ಪಂಜಾಬ್ ಕಿಂಗ್ಸ್	11	4	7	8	-0.187
ಗುಜರಾತ್ ಟೈಟನ್ಸ್	11	4	7	8	-1.320
ಮುಂಬೈ ಇಂಡಿಯನ್ಸ್	11	3	8	6	-0.356

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (542)
ಪರ್ಪಲ್ ಕ್ಯಾಪ್: ಜಸ್‌ಪ್ರೀತ್ ಬೂಮ್ರಾ, ಮುಂಬೈ ಇಂಡಿಯನ್ಸ್ (17 ವಿಕೆಟ್)

ಪ್ಲೇಆಫ್ ಸ್ಥಾನದ ಮೇಲೆ ಸನ್ ಕಣ್ಣು

ಮುಂಬೈ ಇಂಡಿಯನ್ಸ್–ಹೈದರಾಬಾದ್ ತಂಡಗಳ ಮುಖಾಮುಖಿ ಇಂದು

ಮುಂಬೈ (ಪಿಟಿಐ): ಪ್ಲೇ ಆಫ್ ಹಂತ ಪ್ರವೇಶಿಸುವ ತುಂಬು ವಿಶ್ವಾಸದಲ್ಲಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡವು ಸೋಮವಾರ ಇಲ್ಲಿ ನಡೆಯಲಿರುವ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಎದುರು ಕಣಕ್ಕಿಳಿಯಲಿದೆ.

ಹತ್ತು ಪಂದ್ಯಗಳಲ್ಲಿ ಆಡಿ 12 ಅಂಕ ಗಳಿಸಿರುವ ಸನ್‌ರೈಸರ್ಸ್ ತಂಡವು ಅಂಕಪಟ್ಟಿಯಲ್ಲಿ ಸದ್ಯ ನಾಲ್ಕನೇ ಸ್ಥಾನದಲ್ಲಿದೆ. ಆದರೆ ಮುಂಬೈ ತಂಡವು ಈಗಾಗಲೇ ಪ್ಲೇ ಆಫ್ ಹಾದಿಯಿಂದ ಹೊರಬಿದ್ದಿದೆ.

ಪ್ಯಾಟ್ ಕಮಿನ್ಸ್ ನಾಯಕತ್ವದ ಸನ್‌ರೈಸರ್ಸ್ ತಂಡವು ಟೂರ್ನಿಯ ಆರಂಭದ ಪಂದ್ಯಗಳಲ್ಲಿ ರನ್‌ಗಳ ಹೊಳೆಯನ್ನೇ ಹರಿಸಿತ್ತು. 250 ಕ್ಕೂ ಹೆಚ್ಚು ರನ್‌ಗಳ ಮೊತ್ತವನ್ನು ಮೂರು ಬಾರಿ ದಾಖಲಿಸಿತ್ತು. ಆದರೆ ಕಳೆದ ಕೆಲವು ಪಂದ್ಯಗಳಲ್ಲಿ 200ರ ಗಡಿ ಮುಟ್ಟುವಲ್ಲಿ ಸಫಲವಾಗಿಲ್ಲ.

ಆದ್ದರಿಂದ ಆ ವೈಫಲ್ಯಗಳನ್ನು ಸುಧಾರಿಸಿಕೊಂಡು ಕಣಕ್ಕಿಳಿಯುವ ವಿಶ್ವಾಸದಲ್ಲಿದೆ. ಸದ್ಯ ಅಂಕಪಟ್ಟಿಯ ಅಗ್ರಸ್ಥಾನದಲ್ಲಿರುವ ರಾಜಸ್ಥಾನ ರಾಯಲ್ಸ್ (16 ಅಂಕ), ಕೋಲ್ಕತ್ತ ನೈಟ್ ರೈಡರ್ಸ್ (14) ಮತ್ತು ಲಖನೌ ಸೂಪರ್‌ಜೈಂಟ್ಸ್ (12) ತಂಡಗಳನ್ನು ಹಿಂದಿಕ್ಕಿ ಮೇಲಕ್ಕೇರಬೇಕಾದರೆ ಸನ್‌ರೈಸರ್ಸ್ ತಂಡವು ಮುಂದಿನ ನಾಲ್ಕು ಪಂದ್ಯಗಳಲ್ಲಿ ಮೂರರಲ್ಲಿ ಜಯ ಸಾಧಿಸಬೇಕಿದೆ.

12 ಅಂಕ ಗಳಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ 10 ಅಂಕ ಗಳಿಸಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳೂ ಅಗ್ರ ನಾಲ್ಕರಲ್ಲಿ ಸ್ಥಾನ ಪಡೆಯುವ ಪ್ರಯತ್ನದಲ್ಲಿವೆ.ವಾಂಖೆಡೆ ಕ್ರೀಡಾಂಗಣದಲ್ಲಿರುವ ಪಿಚ್ ಬ್ಯಾಟರ್‌ಗಳಿಗೆ ಹೆಚ್ಚು ನೆರವು ನೀಡುವಂತಿದೆ. ಸನ್‌ರೈಸರ್ಸ್ ತಂಡದ ಸ್ಫೋಟಕ ಶೈಲಿಯ ಬ್ಯಾಟರ್‌ಗಳಾದ ಟ್ರಾವಿಸ್ ಹೆಡ್, ಅಭಿಷೇಕ್ ಶರ್ಮಾ, ಹೆನ್ರಿಚ್ ಕ್ಲಾಸೆನ್, ಏಡನ್ ಮರ್ಕರಂ ನಿತೀಶ್ ರೆಡ್ಡಿ ಹಾಗೂ ಅಬ್ದುಲ್ ಸಮದ್ ಅವರು ಇಲ್ಲಿ ರನ್‌ಗಳ ಹೊಳೆ ಹರಿಸುವ ತವಕದಲ್ಲಿದ್ದಾರೆ. ಉಭಯ ತಂಡಗಳು ಮೊದಲ ಸುತ್ತಿನಲ್ಲಿ ಹೈದರಾಬಾದಿನಲ್ಲಿ ಮುಖಾಮುಖಿಯಾಗಿದ್ದವು. ಆ ಪಂದ್ಯದಲ್ಲಿ ಸನ್‌ರೈಸರ್ಸ್ 277 ರನ್ ಗಳಿಸಿತ್ತು. ತಂಡದ ಬೌಲಿಂಗ್ ಕೂಡ ಉತ್ತಮವಾಗಿದೆ. ಕಮಿನ್ಸ್, ಟಿ. ನಟರಾಜನ್ ಹಾಗೂ ಭುವನೇಶ್ವರ್ ಕುಮಾರ್ ಉತ್ತಮ ಲಯದಲ್ಲಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್.



ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಮತ್ತು ಸಹ ಆಟಗಾರ ರೋಹಿತ್ ಶರ್ಮಾ. ಪಿಟಿಐ ಚಿತ್ರ

ಮಹಿಳಾ ಕ್ರಿಕೆಟ್: ಭಾರತ–ಬಾಂಗ್ಲಾ ಹಣಾಹಣಿ ಇಂದು

ಸಿಲೆಟ್, ಬಾಂಗ್ಲಾದೇಶ (ಪಿಟಿಐ): ಬಾಂಗ್ಲಾದೇಶ ವಿರುದ್ಧದ ಟಿ20 ಕ್ರಿಕೆಟ್ ಸರಣಿಯನ್ನು ಈಗಾಗಲೇ ಕೈವಶ ಮಾಡಿಕೊಂಡಿರುವ ಭಾರತ ತಂಡವು ಕ್ಲೀನ್‌ಸ್ವೀಪ್ ಮೇಲೆ ಕಣ್ಣಿಟ್ಟಿದೆ.

ಐದು ಪಂದ್ಯಗಳ ಸರಣಿಯಲ್ಲಿ ಭಾರತ ತಂಡವು 3–0 ಮುನ್ನಡೆ ಸಾಧಿಸಿದೆ. ಸೋಮವಾರ ನಾಲ್ಕನೇ ಪಂದ್ಯವನ್ನು ಆಡಲಿದೆ. ಇದೂ ಸೇರಿದಂತೆ ಉಳಿದಿರುವ ಇನ್ನೆರಡು ಪಂದ್ಯಗಳಲ್ಲಿ ಭಾರತ ಆಟಗಾರ್ತಿಯರು ತಮ್ಮ ಸಾಮರ್ಥ್ಯ ಸುಧಾರಣೆ ಮಾಡಿಕೊಳ್ಳುವ ಅವಕಾಶ ಇದೆ.

ಕಳೆದ ಮೂರು ಪಂದ್ಯಗಳಲ್ಲಿ ಸೇರಿ ಭಾರತದ ಶಫಾಲಿ ವರ್ಮಾ ಅವರು ಮಾತ್ರ ಒಂದು ಅರ್ಧಶತಕ ಬಾರಿಸಿದ್ದಾರೆ. ಸರಣಿಯಲ್ಲಿ ಇದುವರೆಗೆ ಅತಿ ಹೆಚ್ಚು ರನ್ ಗಳಿಸಿರುವ ಆಟಗಾರ್ತಿ (82 ರನ್) ಅವರಾಗಿದ್ದಾರೆ.

ಆದರೆ ಅನುಭವಿ ಬ್ಯಾಟರ್‌ಗಳಾದ ಸ್ಮೃತಿ ಮಂದಾನ ಮತ್ತು ಹರ್ಮನ್‌ಪ್ರೀತ್ ಕೌರ್ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಿಲ್ಲ. ಮುಂದಿನ ತಿಂಗಳು ದಕ್ಷಿಣ ಆಫ್ರಿಕಾ ಎದುರು ಸರಣಿ ಆಡಬೇಕಿರುವ ತಂಡವು ಪೂರ್ವ ಸಿದ್ಧತೆ ಮಾಡಿಕೊಳ್ಳಲು ಬಾಂಗ್ಲಾ ಎದುರಿನ ಪಂದ್ಯಗಳಲ್ಲಿ ಉತ್ತಮವಾಗಿ ಆಡಬೇಕಿದೆ.

ಬೌಲಿಂಗ್ ವಿಭಾಗದಲ್ಲಿ ರೇಣುಕಾ ಸಿಂಗ್ ಠಾಕೂರ್, ತಿತಾಸ್ ಸಾಧು, ಕರ್ನಾಟಕದ ಸ್ಪಿನ್ನರ್ ಶ್ರೇಯಾಂಕಾ ಪಾಟೀಲ ಅವರ ಮೇಲೆ ಹೆಚ್ಚು ಭರವಸೆ ಇದೆ. ನಿಜರ್ ಸುಲ್ತಾನಾ ಅವರ ನಾಯಕತ್ವದ ಬಾಂಗ್ಲಾದೇಶ ತಂಡವು ಪುಟಿದೇಳುವ ನಿರೀಕ್ಷೆಯಲ್ಲಿದೆ. ಸಮಾಧಾನಕರ ಗೆಲುವಿಗಾಗಿ ಹೋರಾಟ ನಡೆಸಲು ಸಿದ್ಧವಾಗಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30




ಶಫಾಲಿ ವರ್ಮಾ

ಟಿ20 ವಿಶ್ವಕಪ್: ಅಮೆರಿಕ ತಂಡದಲ್ಲಿ ಮೂಡಿಗೆರೆ ನಾಸ್ತುಷ್

ಪ್ರಜಾವಾಣಿ ವಾರ್ತೆ

ಮೂಡಿಗೆರೆ (ಚಿಕ್ಕಮಗಳೂರು ಜಿಲ್ಲೆ): ಮೂಡಿಗೆರೆಯ ನಾಸ್ತುಷ್ ಪ್ರದೀಪ್ ಕೆಂಜಿಗೆ ಅವರು ಜೂನ್ 2ರಿಂದ ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಆತಿಥೇಯ ಅಮೆರಿಕ ತಂಡವನ್ನು ಪ್ರತಿನಿಧಿಸಲಿದ್ದಾರೆ.



ನಾಸ್ತುಷ್

ಅಮೆರಿಕ ರಾಷ್ಟ್ರೀಯ ತಂಡದದಲ್ಲಿ ಏಕದಿನ ಮತ್ತು ಟ್ವೆಂಟಿ–20 ಕ್ರಿಕೆಟ್ ಪಂದ್ಯಗಳಲ್ಲಿ ಆಡಿರುವ ನಾಸ್ತುಷ್, ಇದೇ ಮೊದಲ ಸಲ ವಿಶ್ವಕಪ್ ಟೂರ್ನಿಯ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ. ಈ ಬಾರಿಯ ಟೂರ್ನಿ ಅಮೆರಿಕ ಮತ್ತು ವೆಸ್ಟ್ ಇಂಡೀಸ್ ಜಂಟಿ ಆತಿಥ್ಯದಲ್ಲಿ ನಡೆಯಲಿದೆ.

ತಾಲ್ಲೂಕಿನ ಕೆಂಜಿಗೆ ಗ್ರಾಮದ ಕಾಫಿ ಬೆಳೆಗಾರ ಹಾಗೂ ಲೇಖಕ ಪ್ರದೀಪ್ ಕೆಂಜಿಗೆ–ಶ್ರುತಕೀರ್ತಿ ದಂಪತಿಯ ಪುತ್ರ ನಾಸ್ತುಷ್ ಅಮೆರಿಕಾದಲ್ಲಿ ನೆಲೆಸಿದ್ದಾರೆ.

‘ನಾಸ್ತುಷ್ ಜನಿಸಿದ್ದು ಅಮೆರಿಕದಲ್ಲಿ. ನಾನು ಉದ್ಯೋಗ ನಿಮಿತ್ತ ಹರಿಜೋನಾದಲ್ಲಿ ನೆಲೆಸಿದ್ದೆ. ಮಗನಿಗೆ ಒಳ್ಳೆಯ ಹೆಸರು ಸೂಚಿಸುವಂತೆ ಅಲ್ಲಿನ ರೆಡ್ ಇಂಡಿಯನ್ಸ್ ಬಳಿ ಕೇಳಿದಾಗ ನಾಸ್ತುಷ್ (ಮರುಭೂಮಿಯ ಸಿಂಹ) ಎಂದು ಹೇಳಿದರು. ನಾಸ್ತುಷ್ ಮೂಡಿಗೆರೆ ಮತ್ತು ಬೆಂಗಳೂರಿನ ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಓದಿದ್ದಾನೆ. ಸ್ವಸ್ತಿಕ್ ಕ್ರಿಕೆಟರ್ಸ್ ಕ್ಲಬ್‌ನಲ್ಲಿ ಆಡಿದ್ದಾನೆ. ಅಮೆರಿಕದ ಪೌರತ್ವ ಇತ್ತು. ಉದ್ಯೋಗಕ್ಕಾಗಿ ಅಲ್ಲಿಗೇ ಹೋದ. ಈಚೆಗೆ ಕ್ರಿಕೆಟ್‌ಗೆ ಸಂಪೂರ್ಣವಾಗಿ ಸಮರ್ಪಿಸಿಕೊಂಡಿದ್ದಾನೆ’ ಎಂದು ಪ್ರದೀಪ್ ‘ಪ್ರಜಾವಾಣಿ’ಗೆ ತಿಳಿಸಿದರು.

ಎಡಗೈ ಸ್ಪಿನ್ನರ್ ಮತ್ತು ಬಲಗೈ ಬ್ಯಾಟರ್ ಆಗಿರುವ ನಾಸ್ತುಷ್, 40 ಏಕದಿನ ಮತ್ತು 4 ಟ್ವೆಂಟಿ–20 ಪಂದ್ಯಗಳನ್ನು ಆಡಿದ್ದಾರೆ.

ಏಕದಿನ ಕ್ರಿಕೆಟ್‌ನಲ್ಲಿ ಒಟ್ಟು 38 ವಿಕೆಟ್ ಗಳಿಸಿದ್ದಾರೆ.